*Pandit Teaches the Bible Series*

# Spiritual Life

**Kannada Edition**

**Compiled by Pastor Premkumar**

This Kannada college level textbook has been compiled for a Bible college in South India. It would, however, also be useful in other church contexts.

It has been compiled by Pastor Premkumar, the senior pastor of Full Gospel Assembly, Davangere. He has been involved in pastoral ministry since thirty five years and a teacher at Kannada Satyaveda Colle  since its beginning in 2006

August 2022


## Copyright waiver

The author of this work hereby waive all claim of copyright (economic and moral) in this work and immediately place it in the public domain. It may be used, distorted or destroyed in any manner whatsoever without further attribution or notice to the creator.

The author of this work would, however, object to to any republishing of this work for the purposes of financial gain.

ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕ ಸರಣಿ

# ಆತ್ಮಿಕ ಜೀವನ

*ಮೊದಲ ಕನ್ನಡ ಆವೃತ್ತಿ*


ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಸಂಯೋಜಕರು

**ಪಿ. ಪ್ರೇಮ್ ಕುಮಾರ್**

# Spiritual Life (Kannada Edition)

*Compiled by* **Pastor Premkumar**

Pastor Premkumar is the senior pastor of Full Gospel Assembly, Davangere. He has been involved in pastoral ministry since thirty five years and also has been teaching in KSC since its beginning.

Copyright © 2016 by Kannada Satyaveda College
Davangere, India
*e-mail:* ksc.ffpck@gmail.com
*Website:* www.ksc1.webs.com

*Cover design & layout*
**Genie Cliff** ⓓJLF.inc

This book has been produced in
few copies for private use.
It is not for sale.

# ವಿಷಯಾನುಕ್ರಮಣಿಕೆ


| | | |
|---|---|---|
| | ಮುನ್ನುಡಿ | 05 |
| 1. | ದೇವರಿಂದ ಉಪಯೋಗಿಸಲ್ಪಡುವ ವ್ಯಕ್ತಿ | 07 |
| 2. | ಯೇಸು ಕರ್ತನಾಗಿದ್ದಾನೆ | 18 |
| 3. | ಶಿಷ್ಯತ್ವದ ಬೆಲೆ | 26 |
| 4. | ದೇವರು ಮತ್ತು ಮನುಷ್ಯನ ಕುರಿತಾದ ಸರಿಯಾದ ದೃಷ್ಟಿಕೋನ | 37 |
| 5. | ಪ್ರಾರ್ಥನೆ | 46 |
| 6. | ಕರೆಯಲ್ಪಟ್ಟವರು ಮತ್ತು ಆಯಲ್ಪಟ್ಟವರು | 60 |
| 7. | ಹಣಕಾಸಿನ ತೊಂದರೆಗೆ ಕಾರಣ ಮತ್ತು ಪರಿಹಾರ | 62 |
| 8. | ತಪ್ಪುಗಳಲ್ಲೂ ಅವಕಾಶಗಳಿವೆ | 65 |
| 9. | ದೇವರ ಜ್ಞಾನ | 67 |
| 10. | ಸಮೃದ್ಧಿ ಮತ್ತು ವಸ್ತುಗಳನ್ನು ಹೊಂದುವುದು | 72 |

# ಮುನ್ನುಡಿ

"ಶಿಷ್ಯರನ್ನಾಗಿ ಮಾಡಿರಿ" ಇದು ಸ್ವಾಮಿಯ ಆಜ್ಞೆಯಾಗಿದೆ (ಮತ್ತಾಯ 28:19–20). ನಾವು ಇದನ್ನು ಅಲಕ್ಷಿಸಬಹುದು, ಆದರೆ ನಾವು ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಪುನರುತ್ಥಾನ ಹೊಂದಿದ ನಮ್ಮ ಕರ್ತನು ಈ ಪರಂಪರೆಯನ್ನು ಬಿಟ್ಟು ಹೋಗಿದ್ದಾನೆ – ಸಭೆಯ ಮಹಾ ಆದೇಶ. ಆತನು ಮಾದರಿ ಮತ್ತು ವಿಧಾನ ಎರಡನ್ನೂ ನೀಡಿದ್ದಾನೆ. ಆತನ ಜೀವಿತ – ಮತ್ತು – ಮರಣ ಮನುಷ್ಯರ ಜೀವಿತಗಳಿಗೆ ಹೊಸ ರೂಪವನ್ನು ನೀಡುತ್ತದೆ. ನೀವು ಮನುಷ್ಯರ ಜೀವಿತಗಳನ್ನು ಬದಲಾಯಿಸದೇ ಇರುವವರೆಗೆ ನೀವು ಏನನ್ನೂ ಮಾಡಲಿಲ್ಲ ಎನ್ನುವದನ್ನು ಆತನು ಸ್ಪಷ್ಟಪಡಿಸಿದ್ದಾನೆ.

"ನನ್ನನ್ನು ಹಿಂಬಾಲಿಸಿರಿ" ಎಂದು ತನ್ನ ಜನರನ್ನು ಹುರಿದುಂಬಿಸುತ್ತಾನೆ. "ಇಗೋ ನಾನು … ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" ಎಂಬ ಭರವಸೆಯನ್ನು ನೀಡುತ್ತಾನೆ, ಹೇಗೋ ನಾವು ಈ ವಾಗ್ದಾನವನ್ನು ಮರೆತಿದ್ದೇವೆ. ಆತನ ವಾಗ್ದಾನವು ಒಂದು ಪ್ರಕ್ರಿಯೆಯೊಂದಿಗೆ ಜೊಡಣೆಯಾಗಿದೆ ನಾವು ಕೇವಲ ವಾಗ್ದಾನವನ್ನು ತೆಗೆದುಕೊಂಡು ಪ್ರಕ್ರಿಯೆಯನ್ನು ಉಪೇಕ್ಷಿಸಲು ಸಾಧ್ಯವಿಲ್ಲ.

ಸಮಕಾಲೀನ ಸಭೆಗಳ ಅಸ್ವಸ್ಥ ಮತ್ತು ನಿಷ್ಪಲಗೊಳಿಸುವ ಚಟುವಟಿಕೆಗಳು ಸಮಂಜಸತೆ ಮತ್ತು ನೆರವೇರಿಕೆಯಲ್ಲಿ ಶೂನ್ಯವಾಗಿವೆ. ನಮ್ಮ ಕಾರ್ಯಕ್ರಮಗಳು ಶಿಕ್ಷಣ ನೀಡುವ ಬದಲು ಮನೋರಂಜನೆಯಾಗಿವೆ. ನಮ್ಮ ಸಭೆಯ ನಾಯಕರು ಮರಳುಗೊಳಿಸಲ್ಪಟ್ಟಿದ್ದಾರೆ. ಅವರು ನಿತ್ಯತ್ವವನ್ನು ಹೊಂದಲು ತಮ್ಮನ್ನು ತೊಡಗಿಸಿಕೊಳ್ಳಲು ಎದುರು ನೋಡುತ್ತಿದ್ದಾರೆ. ಸಿ.ಎಸ್. ಲೂಯಿಸ್‌ರವರ ಹೇಳಿಕೆಯಂತೆ "ಯಾವುದು ಶಾಶ್ವತವಲ್ಲವೋ ಅದು ಶಾಶ್ವತವಾಗಿ ಸಮಯ ಬಾಹಿರವಾಗಿದೆ".

ಶಿಷ್ಯರು ರೂಪಿಸಲ್ಪಡುತ್ತಾರೆ – ಜನಿಸುವದಿಲ್ಲ. ಇದು ಒಣ, ಸಿಧ್ಧಾಂತದ ಹುಡಿಯ ಸಂಗ್ರಹವಲ್ಲ, ಆದರೆ ಇದು ಕಾರ್ಯರೂಪದಲ್ಲಿರುವಂತದ್ದು ಮತ್ತು ಪ್ರಚೋದಿಸುವಂತ, ಚಿಂತನೆ ಮಾಡುವಂತ ಮೆಲುಕು ಹಾಕುವಂತ ವಿಷಯವಾಗಿದೆ. ಬರಹಗಾರನು ನಿರಂತರವಾಗಿ ಪರಿಣಾಮ ಬೀರುವ ರೀತಿಯಲ್ಲಿ ಬರೆದಿದ್ದಾನೆ.

ವಾಲ್ಟರ್ ಹೆನ್ರಿಕ್‌ಸೆನ್ ತತ್ವವಿಚಾರಗಳಲ್ಲಿ ಪರಿಣಿತನಲ್ಲ. ಆತನು *ದ ನಾವಿಗೇಟರ್ಸ್* ಎಂಬ ಶಿಷ್ಯರನ್ನಾಗಿ ಮಾಡಲು ಸರ್ಮಪಿಸಿಕೊಂಡ ಸಂಸ್ಥೆಯೊಂದಿಗೆ ಬಹಳ ಕಾಲದಿಂದ ಸಹಭಾಗಿಯಾಗಿದ್ದಾನೆ ಆತನು ಸತ್ಯವೇದವನ್ನು ನಿರಂತರವಾಗಿ ಶೋಧಿಸಿದ್ದಾನೆ ಮತ್ತು ತನ್ನ ಅಧ್ಯಯನ ಮತ್ತು ಅನುಭವದ ಫಲಿತಾಂಶಗಳನ್ನು ಪರಿಣಾಮಕಾರಿಯಾಗಿ ಮಂಡಿಸಿದ್ದಾನೆ.

ಅವನು ತನ್ನ ಕುಟುಂಬ ಜೀವಿತದಲ್ಲಿ ನಡೆದ ಘಟನೆಗಳ ಅನುಭವದಿಂದಲೂ ಬರೆಯುತ್ತಾನೆ. ಆತನು ಮತ್ತು ಆತನ ಹೆಂಡತಿ ಲೀಟ್ಟೆ ನಾಲ್ಕು ಮಕ್ಕಳನ್ನು ಶಿಷ್ಯರನ್ನಾಗಿ ಮಾಡುವ ಆನಂದವನ್ನು ಹೊಂದಿದ್ದಾರೆ. ಮತ್ತು ತಮ್ಮ ದೊಡ್ಡ ಮಗನನ್ನು ಲುಕೇಮಿಯಾ ಕಾಯಿಲೆಯಿಂದಾಗಿ ಕಳೆದುಕೊಂಡಿರುವದರಿಂದ ಹೃದಯದ ವೇದನೆಯನ್ನು ಬಲ್ಲವರಾಗಿದ್ದಾರೆ.

ಕ್ರಿಸ್ತನು ನಡೆದ ಹಾದಿಯಲ್ಲಿ ನಡೆಯ ಬಯಸುವವರಿಗೆ ಮತ್ತು ಸೇವೆಯನ್ನು ದ್ವಿಗುಣಗೊಳಿಸುವದನ್ನು ಸಂರಕ್ಷಿಸಲು ಶಿಫಾರಸ್ಸು ಮಾಡಲಾದ ಶಿಷ್ಯತ್ವದ ಸರ್ವಶ್ರೇಷ್ಠ

ಪುಸ್ತಕ ಇದಾಗಿದೆ. ಯುದ್ಧಗಳು ಮನುಷ್ಯರ ಹೃದಯ ಮತ್ತು ಮನಸ್ಸಿನ ಮೇಲಿರುವಾಗ ಈ ಪುಟಗಳು ನಮ್ಮ ಸಂತತಿಯ ತ್ವರಿತವಾದ ಬೇಡಿಕೆಯನ್ನು ಈಡೇರಿಸುತ್ತವೆ.

"ಪ್ರತಿಯೊಬ್ಬನೂ, ತಾನು ಸಂಪೂರ್ಣವಾಗಿ ತರಬೇತಿ ಹೊಂದಿದ ನಂತರ, ಆತನ ಗುರುವಿನಂತಾಗುತ್ತಾನೆ," ನಮ್ಮ ಕರ್ತನು ಒಪ್ಪಿಕೊಂಡಿದ್ದಾನೆ (ಲೂಕ 6:40 NASB) ಈ ಪುಸ್ತಕವು ಆತನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ಕಲಿಯಿರಿ ಎಂದು ನಿಮ್ಮನ್ನು ಆಮಂತ್ರಿಸುತ್ತದೆ.

**ಹೊವರ್ಡ್ ಜಿ. ಹೆಂಡ್ರಿಕ್ಸ್**

ಪ್ರೊಫೆಸರ್ ಆಫ್ ಕ್ರಿಶ್ಚಿಯನ್ ಎಜುಕೇಶನ್

ಡಲ್ಲಾಸ್ ಥಿಯೊಲೋಜಿಕಲ್ ಸೆಮಿನರಿ

# 1. ದೇವರಿಂದ ಉಪಯೋಗಿಸಲ್ಪಡುವ ವ್ಯಕ್ತಿ

ಸುಮಾರು 2000 ವರ್ಷಗಳ ಹಿಂದೆ ಯೇಸು ಕ್ರಿಸ್ತನು ಕ್ರೂಜೆಯ ಮೇಲೆ ಸ್ವ–ಇಚ್ಛೆಯಿಂದ ತನ್ನ ಪ್ರಾಣವನ್ನು ಕೊಟ್ಟಾಗ, ಆತನು ಒಂದು ಕಾರಣಕ್ಕಾಗಿ ಸಾಯಲಿಲ್ಲ, ಆತನು ಜನರಿಗಾಗಿ ಸತ್ತನು. ಭೂಲೋಕದಲ್ಲಿ ಆತನ ಸೇವೆಯ ಅವಧಿಯಲ್ಲಿ "ಆತನು ಹನ್ನೆರೆಡು ಮಂದಿಯನ್ನು ಅವರು ತನ್ನ ಸಂಗಡ ಇರಬೇಕೆಂತಲೂ ಮತ್ತು ಸುವಾರ್ತೆಯನ್ನು ಸಾರುವದಕ್ಕೆ ಕಳುಹಿಸಬೇಕೆಂತಲೂ ಪ್ರತಿಷ್ಟಿಸಿದನು (ಮಾರ್ಕ 3:1;4). ಕಲ್ವಾರಿ ಬೆಟ್ಟದ ಮೇಲೆ ಆತನ ಮರಣಕ್ಕೆ ಪೂರ್ವದಲ್ಲಿ ಯೇಸು ತನ್ನ ಜನರಿಗಾಗಿ ಪ್ರಾರ್ಥಿಸಿದನು (ಯೋಹಾನ 17 ನೋಡಿರಿ). ಆ ಪ್ರಾರ್ಥನೆಯಲ್ಲಿ ನಲವತ್ತಕ್ಕಿಂತಲೂ ಹೆಚ್ಚು ಬಾರಿ ಆತನು ತನ್ನ ಶಿಷ್ಯರನ್ನು ಉಲ್ಲೇಖಿಸಿದನು.

ಭೂಲೋಕದಲ್ಲಿ ತನ್ನ ಸಂಕ್ಷಿಪ್ತವಾದ ಸೇವಾ ಅವಧಿಯಲ್ಲಿ, ಯೇಸು ಲೋಕವನ್ನು ತನ್ನ ಹೃದಯದಲ್ಲಿಟ್ಟುಕೊಂಡಿದ್ದನು, ಆದರೆ ಆತನು ಲೋಕವನ್ನು ತನ್ನ ಜನರ ಮೂಲಕ ದೃಷ್ಟಿಸಿದನು. ಸ್ವರ್ಗಾರೋಹಣಕ್ಕೆ ಪೂರ್ವದಲ್ಲಿ ಆತನು ತನ್ನ ಶಿಷ್ಯರಿಗೆ ಸಾಮಾನ್ಯವಾಗಿ ಉಲ್ಲೇಖಿಸಿರುವ ಮಹತ್ತರ ನಿಯೋಗವನ್ನು ನೀಡಿದನು. ಮತ್ತಾಯನ ಸುವಾರ್ತೆ 18:19 ರಲ್ಲಿ ದಾಖಲಿಸಿರುವ ಹಾಗೆ, ಯೇಸು ಅವರಿಗೆ ಅನೇಕರನ್ನು ಶಿಷ್ಯರನ್ನಾಗಿ ಮಾಡುವದರ ಮೂಲಕ ಲೋಕದ ಕಟ್ಟಕಡೆಯವರೆಗೆ ಸುವಾರ್ತೆಯನ್ನು ಸಾರಲು ಆಜ್ಞಾಪಿಸಿದನು.

ಯೇಸುವಿಗೆ ಲೋಕದ ದರ್ಶನವಿತ್ತು. ಆತನು ತನ್ನ ಜನರು ಲೋಕದ ದರ್ಶನ ಹೊಂದಿಕೊಳ್ಳಬೇಕೆಂದು ನಿರೀಕ್ಷಿಸಿದ್ದನು. ತಾನು ಎಬ್ಬಿಸಿದ 12 ಜನರ ಮೂಲಕ ತಾನು ಲೋಕವನ್ನು ನೋಡಿದಂತೆ, ಅವರು ತಾವು ಉತ್ಪಾದಿಸಿದ ಶಿಷ್ಯರ ಮೂಲಕ ಲೋಕವನ್ನು ನೋಡಬೇಕೆಂದು ನಿರೀಕ್ಷಿಸಿದ್ದನು. ಶಿಷ್ಯರನ್ನು ದ್ವಿಗುಣಗೊಳಿಸುವದರ ಮೂಲಕ ಲೋಕವನ್ನು ತಲುಪುವ ಆತನ ದರ್ಶನ ಸತ್ಯವೇದದ ಭಾಗಗಳಲ್ಲಿ ಗೋಚರವಾಗುವದಿಲ್ಲ – ಇದು ಪ್ರತಿಯೊಂದು ಪುಟದಲ್ಲಿಯೂ ಕಾಣುವ ಪ್ರಧಾನ ವಿಷಯವಾಗಿದೆ.

ಅಪೋಸ್ತಲನಾದ ಪೌಲನು, ನಂಬಿಕೆಯಲ್ಲಿ ತನ್ನ ಮಗನಾಗಿರುವ ತಿಮೋಥೆಯನಿಗೆ "ಕೊನೆಯ ಇಚ್ಛೆ ಮತ್ತು ಸಾಕ್ಷಿ" ಬರೆಯುತ್ತಿರುವ ಹಾಗೆ ಇದು ಖಂಡಿತವಾಗಿಯೂ, ಆತನ ಹೃದಯದಲ್ಲಿದ್ದ ಸಂಗತಿಯಾಗಿತ್ತು. 2ತಿಮೋಥಿ 2:2 ಸಂಕ್ಷಿಪ್ತವಾಗಿ ವಿಶ್ಲೇಷಿಸೋಣ: "ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು."

ಇದು ಒಬ್ಬ ವ್ಯಕ್ತಿಯ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಯೇಸು ಪೇತ್ರನನ್ನು ಸಂಧಿಸಿದಾಗ, ಯೋಹಾನ 1:42 ಪ್ರಕಾರ ಆತನು ಹೀಗೆ ಹೇಳಿದನು, "ನೀನು .......... ಸಿಮೋನನು; ಇನ್ನು ಮೇಲೆ ಕೇಫನೆನಿಸಿಕೊಳ್ಳುವಿ." (ನೀನು ಸಿಮೋನನು ನೀನು ಬಂಡೆಯಾಗಿ ಬದಲಾಗುವಿ). ಯೇಸು ಪೇತ್ರನನ್ನು ನೋಡಿದಾಗ, ಆತನು ಏನಾಗಿದ್ದಾನೋ ಹಾಗೆ ನೋಡಲಿಲ್ಲ, ಬದಲಾಗಿ ಆತನು ಒಂದು ದಿನ ಏನಾಗುತ್ತಾನೋ ಹಾಗೆ ನೋಡಿದನು. ಒಬ್ಬ ವ್ಯಕ್ತಿಯ ಜೀವಿತದಲ್ಲಿ ಭಯಂಕರವಾದ ಸಾಮರ್ಥ್ಯವಿರುತ್ತದೆ.

*ನೀನು .......... ನನಗೆ* ಎಂಬ ಪದಗಳು ವೈಯಕ್ತಿಕ ಸಂಬಂಧಗಳ, ಅನೇಕ ವರ್ಷಗಳಿಂದ ಒಟ್ಟಾಗಿ ಕೆಲಸಮಾಡುತ್ತಾ ಬೆಳೆಸಿಕೊಂಡ ಪರಸ್ಪರ ವಿಶ್ವಾಸ ಮತ್ತು ನಂಬಿಕೆಯ ಮಹತ್ವವನ್ನು ಸೂಚಿಸುತ್ತವೆ. ಪೌಲನು ಸೆರಮನೆಯಲ್ಲಿರುವಾಗ ಫಿಲಿಪ್ಪಿಯ ವಿಶ್ವಾಸಿಗಳಿಗೆ ಬರೆಯುವಾಗ ಹೀಗೆ ಹೇಳುತ್ತಾನೆ, ತನಗೆ ಅವರನ್ನು ಭೇಟಿಯಾಗಲೂ ಸಾಧ್ಯವಿಲ್ಲದಿರುವದರಿಂದ ನಂಬಿಕೆಯ ವಿಷಯದಲ್ಲಿ ತನ್ನ ನಿಜ ಕುಮಾರನಾಗಿರುವ

ತಿಮೋಥಿಯನ್ನು ನಿಮ್ಮ ಬಳಿಗೆ ಕಳುಹಿಸುತ್ತೇನೆ ಎಂದು ಹೇಳುತ್ತಾನೆ. ಆತನು ಹೇಳಿದ ಮಾತಿನ ತಿರುಳು, "ತಿಮೋಥಿಯನು ನಿಮ್ಮಲ್ಲಿಗೆ ಬರುವಾಗ ನಾನು ನಿಮ್ಮಲ್ಲಿ ಉಪಸ್ಥಿತನಿದ್ದಂತೆ ಆಗುತ್ತದೆ."

ಅನೇಕ ವರ್ಷಗಳ ಹಿಂದೆ ಪೌಲನು ಆಸ್ಯ ಸೀಮೆಯಿಂದ ಬಂದಿರುವ ಈ ಯೌವನಸ್ಥನಲ್ಲಿರುವ ಸಾಮರ್ಥ್ಯವನ್ನು ನೋಡಿದ್ದನು ಮತ್ತು ತನ್ನ ಜೀವಿತವನ್ನು ಆತನ ಮೇಲೆ ತೊಡಗಿಸಲು ನಿರ್ಧರಿಸಿದ್ದನು.

ಸರ್ಮಪಿಸುವದು ಎಂದರೆ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಏನನ್ನಾದರೂ ರವಾನಿಸುವದು ಎಂಬುದನ್ನು ಸೂಚಿಸುತ್ತದೆ. ಇದು ಪವಿತ್ರ ವಿಶ್ವಾಸದ ಶೇವಣಿಯನ್ನು ಸೂಚಿಸುತ್ತದೆ. ಪೌಲನು ತಿಮೋಥಿಯನಿಗೆ, "ನೀನು ನನ್ನ ಶಿಷ್ಯನು. ನಿನ್ನ ಮತ್ತು ನನ್ನ ನಡುವೆ ಇರುವ ಸಂಬಂಧ ಇದಾಗಿದೆ. ನೀನು ಈಗ ಇದನ್ನು ಇತರ ಶಿಷ್ಯರು ಶಿಷ್ಯರನ್ನಾಗಿ ಮಾಡುವವರಾಗುವಂತೆ ಅವರಿಗೆ ಇದನ್ನು ರವಾನಿಸು." ಎಂದು ಹೇಳುತ್ತಾನೆ. ನಾವು ಇತರ ಜನರ ಜೀವಿತದಲ್ಲಿ ತೊಡಗಿಸುವಾಗ, ನಾವು ನಮಗೆ ತಿಳಿದಿರುವದನ್ನು ಮಾತ್ರವಲ್ಲ, ಅದಕ್ಕೂ ಹೆಚ್ಚಾಗಿ ನಾವು ಏನಾಗಿದ್ದೇವೆ ಎಂಬುದನ್ನು ರವಾನಿಸುತ್ತೇವೆ. ನಾವು ಯಾರೊಂದಿಗೆ ಜೊತೆಗೂಡುತ್ತೇವೋ ಅವರಂತೆ ಆಗುತ್ತೇವೆ. ಒಂದು ವೇಳೆ ನಾವು ಪೌಲ ಮತ್ತು ತಿಮೋಥಿಯರನ್ನು ಸಂಧಿಸುವದಾದರೆ, ಅನೇಕ ಅಂಶಗಳಲ್ಲಿ ಅವರು ಒಂದೇ ಆಗಿರುವದನ್ನು ನಾವು ನೋಡುತ್ತೇವೆ ಎಂದು ನಾನು ಖಚಿತವಾಗಿ ಹೇಳುತ್ತೇನೆ.

ಕೊನೆಗೆ ಪೌಲನು ಅವನಿಗೆ, "ನೀನಾದರೋ ನನ್ನನ್ನು ಅನುಸರಿಸುವವನಾಗಿದ್ದು ನನ್ನ ಬೋಧನೆ ನಡತೆ ಉದ್ದೇಶ ನಂಬಿಕೆ ಶಾಂತಿ ಪ್ರೀತಿ ಸೈರಣೆ ......" (2ತಿಮೋಥಿ 3:10–11) ಎಂದು ಬರೆಯುತ್ತಾನೆ. ಇದು ಪೌಲನು ತಿಮೋಥಿಯನಿಗೆ ಏನನ್ನು ಸರ್ಮಪಿಸಿದನು ಮತ್ತು ಅದಕ್ಕೆ ಬದಲಾಗಿ ಪ್ರಾಮಾಣಿಕ ಮನುಷ್ಯರಿಗೆ ತಿಮೋಥಿ ಏನನ್ನು ಸರ್ಮಪಿಸ ಬೇಕಾಗಿತ್ತು ಎಂಬುದರ ಸಾರಾಂಶವನ್ನು ನೀಡುತ್ತದೆ.

ಪ್ರಾಮಾಣಿಕ ಜನರು – ಈ ಎರಡು ಚಿಕ್ಕ ಪದಗಳಿಂದ ಶಿಷ್ಯತ್ವ ನಿಲ್ಲುತ್ತದೆ, ಇಲ್ಲವೇ ಬೀಳುತ್ತದೆ. ಪ್ರಾಚೀನ ಇಸ್ರಾಯೇಲರ ಜ್ಞಾನಿಯಾದ ಸೊಲೊಮೋನ ಅರಸನು ಹೇಳುತ್ತಾನೆ, "ಸ್ನೇಹಿತರೆಂದು ಹೇಳಿಕೊಳ್ಳುವವರು ಬಹು ಮಂದಿ; ನಂಬಿಗಸ್ತನಾದ ಸ್ನೇಹಿತನು ಎಲ್ಲಿ ಸಿಕ್ಕುವನು?" (ಜ್ಞಾನೋಕ್ತಿ 20:6) ನಂಬಿಗಸ್ತ ಪುರುಷರು ಮತ್ತು ಮಹಿಳೆಯರು ಸಿಕ್ಕುವದು ಬಹಳ ವಿರಳ. ದೇವರು ಅವರನ್ನು ಹುಡುಕಿ ತೆಗೆಯುತ್ತಾನೆ, "ಯೆಹೋವನು ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ದೃಷ್ಟಿಯನ್ನು ಪ್ರಸರಿಸುತ್ತಾ ತನ್ನ ಕಡೆಗೆ ಯಥಾರ್ಥಮನಸ್ಸುಳ್ಳವರ ರಕ್ಷಣೆಗಾಗಿ ತನ್ನ ಪ್ರತಾಪವನ್ನು ತೋರ್ಪಡಿಸುತ್ತಾನೆ." (2 ಪೂರ್ವಕಾಲವೃತ್ತಾಂತ 16:9).

ಇತರರಿಗೆ ಸಹ ಬೋಧಿಸಿರಿ – ಶಿಷ್ಯತ್ವದಲ್ಲಿ ನಾಯಕತ್ವ ವಹಿಸುವವರನ್ನು ಎಬ್ಬಿಸುವ ಪ್ರಕ್ರಿಯೆ ಇಲ್ಲಿಂದ ಪ್ರಾರಂಭವಾಗುತ್ತದೆ. ನಾವು ಈಗ ನಾಲ್ಕನೇ ಸಂತತಿಯಲ್ಲಿದ್ದೇವೆ. ನಾವು ಪೌಲನಿಂದ ಪ್ರಾರಂಭಿಸುತ್ತೇವೆ, ನಂತರ ತಿಮೋಥಿ, ನಂತರ ನಂಬಿಗಸ್ತ ಮನುಷ್ಯರು ಮತ್ತು ಕೊನೆದಾಗಿ ಇತರರು. ಇತರರಿಗೆ ಬೋಧಿಸುವದು ವರ್ಗಕೋಣೆಯ ಸನ್ನಿವೇಶದಲ್ಲಿ ಮಾತ್ರ ನಡೆಯುವದಿಲ್ಲ. ಇದಕ್ಕೆ ನಮ್ಮ ಜೀವಿತವನ್ನೇ ನೀಡುವದು ಅವಶ್ಯವಾಗಿದೆ – ಆಳವಾಗಿ ರವಾನಿಸುವ ಇಂಥಹದೇ ಪ್ರಕ್ರಿಯೆ ಪೌಲ ಮತ್ತು ತಿಮೋಥಿಯರ ಮಧ್ಯದಲ್ಲಿ ಸಂಭವಿಸಿತು.

ಇದು ದ್ವಿಗುಣಗೊಳಿಸುವ ಪ್ರಕ್ರಿಯೆಯಾಗಿದೆ. ಅದೇ ಸಮಯದಲ್ಲಿ ಪ್ರಾಮಾಣಿಕ ಮನುಷ್ಯರು ಇತರರಿಗೆ ಸಹ ಬೋಧಿಸುತ್ತಾರೆ. ತಿಮೋಥಿಯನು ಅನೇಕ ಪ್ರಾಮಾಣಿಕ ಮನುಷ್ಯರನ್ನು ಎಬ್ಬಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದನು, ಅವರು ಇತರರಿಗೂ ಸಹ ಬೋಧಿಸಲು ಶಕ್ತರಾಗಿದ್ದರು. ಶಿಷ್ಯರನ್ನು ದ್ವಿಗುಣಗೊಳಿಸುವ ಈ ದರ್ಶನವನ್ನು ಅಳವಡಿಸಿಕೊಳ್ಳಲು ಸ್ಥಾಪಿಸಿರುವ ಒಂದೇ ಒಂದು ಮಾರ್ಗವಿದೆ, ಕೊನೆಯದಾಗಿ ಕ್ರಿಸ್ತನ ನಿಯೋಗವು ನೆರವೇರಬೇಕು. ಇತರ ಸೇವಾಸಂಸ್ಥೆಗಳು ಮತ್ತು ವಿಧಾನಗಳು ವಾದಿಸಬಹುದು ಆದರೆ ಇದನ್ನು ಸ್ಥಾನಪಲ್ಲಟಗೊಳಿಸಲು ಸಾಧ್ಯವಿಲ್ಲ.

*ದ ನಾವಿಗೇಟರ್ಸ್*ನ ಸ್ಥಾಪಕರಾದ ಡಾಸನ್ ಟ್ರಾಟ್‌ಮನ್ ಹೀಗೆ ಹೇಳುತ್ತಾರೆ, "ಕ್ರಿಯೆಯು ಉತ್ಪಾದನೆಯ ಪರ್ಯಾಯವಲ್ಲ. ಉತ್ಪಾದನೆಯು ಮರುಉತ್ಪಾದನೆಯ ಪರ್ಯಾಯವಲ್ಲ." ನಾವು ಯಾವುದೇ ಸೇವೆಯಲ್ಲಿ ತೊಡಗಿಸಿಕೊಂಡಿರಲಿ, ಅದು ಮರು ಉತ್ಪಾದಿಸುವಂತದ್ದಾಗಿರಬೇಕು.

ನಾವು ಈಗಾಗಲೇ ಶಿಷ್ಯರನ್ನಾಗಿ ಮಾಡುವ ಸೇವೆಗೆ ಮುಖ್ಯವಾದ ಅಂಶ ಪ್ರಾಮಾಣಿಕ ಪುರುಷರು ಮತ್ತು ಮಹಿಳೆಯರು ಎಂಬುದನ್ನು ಸೂಚಿಸಿದ್ದೇವೆ. ಪ್ರಾಮಾಣಿಕ ವ್ಯಕ್ತಿಗಳಿಗೆ ಇರಬೇಕಾದ ಅರ್ಹತೆಗಳೇನು? ಯಾವ ದೈವೀಕ ಗುಣಗಳು ಆತನ ಜೀವಿತದಲ್ಲಿ ವಿಶೇಷವಾಗಿವೆ? "ಪ್ರಾಮಾಣಿಕ ಮನುಷ್ಯರಾಗಿ" ಅರ್ಹತೆಯನ್ನು ಹೊಂದಲು ಅವಶ್ಯವಾಗಿರುವ ಗುಣಗಳನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸೋಣ:

1. *ಆತನು ದೇವರು ತನ್ನ ವಾಕ್ಯದಲ್ಲಿರಿಸಿರುವ ಗುರಿ ಉದ್ದೇಶಗಳನ್ನು ತನ್ನ ಗುರಿ ಉದ್ದೇಶಗಳನ್ನಾಗಿ ಮಾಡಿಕೊಳ್ಳುವನು:*

   ಯೇಸು ಹೇಳುತ್ತಾನೆ, "ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ ಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು."(ಮತ್ತಾಯ 6:33). ಕರ್ತನು ಬಹಳ ವಿರಳವಾಗಿ ಜನರಿಗೆ ಏನನ್ನಾದರೂ ಹುಡುಕಲು ಹೇಳಿದ್ದಾನೆ, ಆದರೆ ಇಲ್ಲಿ ಆತನು ನಾವು ಎರಡು ಸಂಗತಿಗಳನ್ನು ಹುಡುಕಬೇಕೆಂದು ಸಲಹೆ ನೀಡುತ್ತಾನೆ (ಅವು ಪ್ರತಿಯೊಬ್ಬ ವಿಶ್ವಾಸಿಯ ಎರಡು ಹಂತದ ವಾಸ್ತವತೆಗಳಾಗುತ್ತವೆ). ಆತನ ರಾಜ್ಯ ಮತ್ತು ಆತನ ನೀತಿ.

   ಗಮನಿಸಿ ಯೇಸು ಹಣವನ್ನು ಅಥವಾ ಹೆಂಡತಿಯನ್ನು ಅಥವಾ ಸರಳವಾಗಿ ನಮ್ಮ ಗಮನವನ್ನು ಸೆಳೆಯುವ ಒಂದು ಡಜನ್ ಇತರ ಸಂಗತಿಗಳನ್ನು ಹುಡುಕಬೇಕೆಂದು ಹೇಳಲಿಲ್ಲ. ಬದಲಾಗಿ ಆತನು ನಾವು ಆತನ ರಾಜ್ಯವನ್ನು ಮತ್ತು ನೀತಿಯನ್ನು ಹುಡುಕಿದರೆ, ಆತನು ನಮ್ಮ ಜೀವಿತದಲ್ಲಿ ನಮಗಿರುವ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳುವವನಾಗಿದ್ದೇನೆ ಎಂದು ಹೇಳುತ್ತಾನೆ.

   ನನ್ನ ಒಬ್ಬ ಸ್ನೇಹಿತನು ಹೆಸರಾಂತ ಕಾನೂನಿನ ಸಂಸ್ಥೆಯಲ್ಲಿ ವಕೀಲನಾಗಿದ್ದಾನೆ. ವರ್ಷದಿಂದ ವರ್ಷಕ್ಕೆ ಆ ಸಂಸ್ಥೆಯಲ್ಲಿ ಆತನಿಗೆ ಹೆಚ್ಚಿನ ಆದಾಯ ದೊರೆಯುತ್ತಿತ್ತು, ಆದರೆ ಆತನ ಸಹೋದ್ಯೋಗಿಗಳು ಆತನನ್ನು ಹಿರಿಯ ಸಹುದ್ಯೋಗಿಯನ್ನಾಗಿ ಮಾಡಲಿಲ್ಲ. ಯಾಕೆಂದರೆ ಇವರೆಲ್ಲರೂ ತಮ್ಮ ಜೀವಿತ, ತಮ್ಮ ಸಮಯ ಮತ್ತು ತಮ್ಮ ಬಲ ಎಲ್ಲವನ್ನೂ ಸಂಸ್ಥೆಗೆ ನೀಡಿದ್ದರು. ನನ್ನ

ಸ್ನೇಹಿತನು ಕ್ರೈಸ್ತನಾಗಿರುವದರಿಂದ, ಅವನ ಆದ್ಯತೆಯ ಪಟ್ಟಿಯಲ್ಲಿ ಕಾನೂನಿನ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ಇರಲಿಲ್ಲ. ಅವನು ಶ್ರೇಷ್ಠ ವಕೀಲನಾಗಿದ್ದನು ಮತ್ತು ಹಣಕಾಸಿನ ದಾಖಲೆಗಳು ಸೂಚಿಸುವ ಪ್ರಕಾರ – ತನ್ನ ಕೆಲಸವನ್ನು ಉತ್ತಮವಾಗಿ ಮಾಡುತ್ತಿದ್ದನು. ಆದರೆ ಆತನ ಗುರಿ ಮತ್ತಾಯ 6:33 ಆಗಿತ್ತು. ವಕೀಲನಾಗಿರುವದು ಒಂದು ವೃತ್ತಿ ಮಾತ್ರವಾಗಿತ್ತು, ಅದೇ ಕೊನೆಯಾಗಿರಲಿಲ್ಲ. ನಾನು ನಂಬುತ್ತೇನೆ, ಆತನು ತನ್ನನ್ನು ದೇವರಿಗೆ ಸರ್ಮಪಿಸಿಕೊಂಡದ್ದರಿಂದ ದೇವರು ಆತನಿಗೆ ಇಷ್ಟೊಂದು ಯಶಸ್ಸನ್ನು ದಯಪಾಲಿಸಿದ್ದನು.

ನಿಮ್ಮ ವೃತ್ತಿ ಯಾವುದೇ ಆಗಿರಲಿ, ಅದು ನಿಮ್ಮ ಜೀವಿತದ ಉದ್ದೇಶವಾಗಿರಬಾರದು; ನಿಮ್ಮ ವೃತ್ತಿ ಎಷ್ಟೇ ಉತ್ತಮವಾದದ್ದಾಗಿರಲಿ ಕೊನೆಯಲ್ಲಿ ಅದು ತಾತ್ಕಾಲಿಕವಾದದ್ದಾಗಿದೆ. ನಾವು ನಮ್ಮ ಜೀವಿತವನ್ನು ಶಾಶ್ವತವಾದದ್ದಕ್ಕೆ ನೀಡಬೇಕು ತಾತ್ಕಾಲಿಕಾವದದ್ದಕ್ಕೆ ಅಲ್ಲ ಎಂದು ಸತ್ಯವೇದವು ನಮಗೆ ಬೋಧಿಸುತ್ತದೆ. ಒಬ್ಬ ಪ್ರಾಮಾಣಿಕ ವ್ಯಕ್ತಿಯು ಯಾರಂದರೆ, ಯಾರು ತಮ್ಮ ಜೀವಿತಕ್ಕೆ ಶಾಶ್ವತವಾದ ಉದ್ದೇಶಗಳನ್ನು ಹೊಂದಿರುತ್ತಾನೋ ಅವನೇ.

2. *ಆತನು ತನ್ನ ಜೀವಿತದಲ್ಲಿ ದೇವರ ಚಿತ್ತವನ್ನು ನೆರವೇರಿಸಲು ಯಾವುದೇ ಬೆಲೆಯನ್ನು ತೆರಲು ಸಿದ್ದನಾಗಿರುತ್ತಾನೆ:*

ಇದು ಜಟಿಲವಾದ ಸಂಗತಿಯಾಗಿದೆ, ಪೌಲನು ತಿಮೋಥಿಯನಿಗೆ ತನ್ನಿಂದ ಕಲಿತ ಸಂಗತಿಗಳನ್ನು ಪ್ರಾಮಾಣಿಕ ಜನರಿಗೆ ಸಮರ್ಪಿಸಬೇಕು ಎಂದು ಹೇಳಿದ ನಂತರ, ಪೌಲನು ಈ ರೀತಿಯಾಗಿ ಹೇಳುತ್ತಾ ಹೋಗುತ್ತಾನೆ, "ಕ್ರಿಸ್ತ ಯೇಸುವಿನ ಒಳ್ಳೇ ಸೈನಿಕನಂತೆ ನನ್ನೊಂದಿಗೆ ಶ್ರಮೆಯನ್ನನುಭವಿಸು. ಯುದ್ದಕ್ಕೆ ಹೋಗುವ ಸೈನಿಕನು ಲೋಕ ವ್ಯವಹಾರದಲ್ಲಿ ಸಿಕ್ಕಿಕೊಳ್ಳದೆ ತನ್ನನ್ನು ಸೈನ್ಯದಲ್ಲಿ ಸೇರಿಸಿಕೊಂಡವನನ್ನು ಮೆಚ್ಚಿಸುವುದಕ್ಕೆ ಪ್ರಯಾಸಪಡುತ್ತಿರುವನಲ್ಲವೇ." (2ತಿಮೋಥಿ 2:3–4). ದೇವರ ಉದ್ದೇಶಗಳಿಗೆ ನಮ್ಮನ್ನು ಸಮರ್ಪಿಸಿಕೊಂಡ ಮೇಲೆ ಪ್ರಾಮಾಣಿಕ ಮನುಷ್ಯನು ಲೋಕದ ತಳುಕಿನ ಆಕರ್ಷಣೆಗೆ ಸಿಲುಕಿಕೊಳ್ಳದಂತೆ ಶೋಧನೆಗಳನ್ನು ದೃಢವಾಗಿ ವಿರೋಧಿಸಬೇಕು.

ನಿಮ್ಮನ್ನು ಕೇಳುತ್ತೇನೆ: ನಿಮ್ಮ ಮತ್ತು ದೇವರ ಮಧ್ಯದಲ್ಲಿ ಏನಾದರೂ ಇದೆಯೋ? ನೀವು ಅರಿಕೆ ಮಾಡಲು ಮತ್ತು ಬಿಟ್ಟುಬಿಡಲು ಸಿದ್ದರಿಲ್ಲದೇ ಇರುವ ಪ್ರೀತಿಯ ಪಾಪಗಳು ನಿಮ್ಮಲ್ಲುಂಟೋ? ನೀವು ಆತನ ನಿಯಂತ್ರಣದಲ್ಲಿ ಇಡದೇ ಇರುವ ಕ್ಷೇತ್ರಗಳು ನಿಮ್ಮ ಜೀವಿತದಲ್ಲುಂಟೋ? ನಿಮ್ಮ ಹಣಕಾಸಿನ ವಿಷಯದಲ್ಲಿ ಹೇಗೆ? ಎಷ್ಟು ಹಣವನ್ನು ನೀವು ಬ್ಯಾಂಕಿನಲ್ಲಿ ಇಟ್ಟಿದ್ದೀರಿ ಎಂಬುದು ಪ್ರಶ್ನೆಯಲ್ಲ, ಬದಲಾಗಿ ನಿಮ್ಮ ಹಣವನ್ನು ವ್ಯಯ ಮಾಡುವಲ್ಲಿ ಯಾರ ಅಧಿಕಾರವಿದೆ? ನಿಮ್ಮ ಹಣಕಾಸಿನ ಎಲ್ಲಾ ಸ್ವತ್ತು ಯೇಸುಕ್ರಿಸ್ತನಿಗೆ ಸಂಬಂಧಿಸಿದೆಯೋ? ತ್ಯಾಗಪೂರ್ವಕವಾಗಿ ನೀಡುವದು ಅಂದರೆ ಏನು ಎಂದು ನಿಮಗೆ ತಿಳಿದಿದೆಯೋ? ಅಂದರೆ ಮನುಷ್ಯನ ದೃಷ್ಟಿಕೋನದಲ್ಲಿ ಒಬ್ಬನು ಹೊಂದಲಾಗದ್ದನ್ನು ಆತನಿಗೆ ಕೊಡುವುದನ್ನು ನಾನು ಇಲ್ಲಿ ಅರ್ಥೈಸುತ್ತಿದ್ದೇನೆ.

ಸಂಗತಿಗಳ ಕುರಿತು ಏನು? ನಿಮ್ಮ ಸ್ವತ್ತು ನಿಮ್ಮ ಜೀವಿತದಲ್ಲಿ ಮಿತಿಮೀರಿದ ಸ್ಥಾನವನ್ನು ವಹಿಸಿದೆಯೋ? ಪೌಲನು ಹೇಳುತ್ತಾನೆ, "ಯಾಕಂದರೆ ಅನೇಕರು

ಕ್ರಿಸ್ತನ ಶಿಲುಬೆಗೆ ವಿರೋಧಿಗಳಾಗಿ ನಡೆಯುತ್ತಾರೆ. ಅವರ ವಿಷಯದಲ್ಲಿ ನಿಮಗೆ ಎಷ್ಟೋ ಸಾರಿ ಹೇಳಿದೆನು, ಈಗಲೂ ಅಳುತ್ತಾ ಹೇಳುತ್ತೇನೆ. ನಾಶನವೇ ಅವರ ಅಂತ್ಯಾವಸ್ಥೆ. ಹೊಟ್ಟೆಯೇ ಅವರ ದೇವರು, ನಾಚಿಕೆ ಕೆಲಸಗಳಲ್ಲಿಯೇ ಅವರ ಗೌರವವು. ಅವರು ಪ್ರಪಂಚದ ಕಾರ್ಯಗಳ ಮೇಲೆ ಮನಸ್ಸಿಡುವವರು. ನಾವಾದರೋ ಪರಲೋಕಸಂಸ್ಥಾನದವರು" (ಫಿಲಿಪ್ಪಿ. 3:18–19). ಸತ್ಯವೇದವು "ಲೋಕದ ಸಂಗತಿಗಳ ಮೇಲೆ ಮನಸ್ಸಿಡುವ" ಜನರು ಕ್ರಿಸ್ತನ ಶಿಲುಬೆಗೆ ವೈರಿಗಳಾಗಿದ್ದಾರೆಂದು ಹೇಳುತ್ತದೆ.

ನಿಮಗೆ ಇಷ್ಟವಾದವುಗಳನ್ನು ನೀವು ನಿಮಗಾಗಿ ಹಿಡಿದಿಟ್ಟುಕೊಳ್ಳುವ – ನಿಮ್ಮ ಕುಟುಂಬ, ನಿಮ್ಮ ಆರೋಗ್ಯ, ನಿಮ್ಮ ಕನಸುಗಳು, ನಿಮ್ಮ ಬಯಕೆಗಳು ಮತ್ತು ನಿಮ್ಮ ಗುರಿಗಳು – ಇವುಗಳನ್ನು ತೆರೆದ ಕೈಗಳಿದ ಹಿಡಿದಿಟ್ಟುಕೊಳ್ಳಬೇಕು. ಒಂದು ವೇಳೆ ನೀವು ನಿಮ್ಮ ಜೀವಿತದಲ್ಲಿ ದೇವರ ಚಿತ್ತವನ್ನು ನೆರವೇರಿಸಲು ಬಯಸಿದ್ದಲ್ಲಿ, ಯಾವುದೇ ಕ್ರಯವನ್ನು ಲೆಕ್ಕಿಸದೆ ನಿಮಗಿರುವುದೆಲ್ಲವನ್ನು ಯೇಸುಕ್ರಿಸ್ತನಿಗೆ ಸಲ್ಲಿಸಬೇಕು. ಆತನು ನಿಮ್ಮೊಂದಿಗೆ ಕಾರ್ಯಮಾಡಲು ಮತ್ತು ತನಗೆ ಮೆಚ್ಚಿಗೆಯಾದದ್ದನ್ನು ತೆಗೆದುಕೊಳ್ಳಲು ಸ್ವತಂತ್ರನಾಗಿರಬೇಕು. ನೀವು ದೇವರ ಮುಂದೆ ನಿಮ್ಮ ಹಸ್ತವನ್ನು ಭಯದಿಂದ ಚಾಚುವದು ಬೇಡ, ಯಾಕಂದರೆ ದೇವರು ನಿಮ್ಮನ್ನು ಪರಿಪೂರ್ಣವಾದ ಪ್ರೀತಿಯಿಂದ ಪ್ರೀತಿಸುವವನಾಗಿದ್ದಾನೆ ಮತ್ತು ಹೃದಯದಲ್ಲಿ ನಿಮ್ಮ ಕುರಿತಾಗಿ ಆಸಕ್ತಿಯುಳ್ಳವನಾಗಿದ್ದಾನೆ. ಪ್ರಾಮಾಣಿಕ ವ್ಯಕ್ತಿ ಎಂದರೆ ತನ್ನ ಜೀವಿತದಲ್ಲಿ ದೇವರ ಚಿತ್ತವನ್ನು ನೆರವೇರಿಸಲು ಯಾವುದೇ ಬೆಲೆಯನ್ನು ತೆರಲು ಸಿದ್ದನಾಗಿರುವ ವ್ಯಕ್ತಿ.

3. *ಆತನಿಗೆ ದೇವರ ವಾಕ್ಯದ ಮೇಲೆ ಪ್ರೀತಿ ಇರುತ್ತದೆ:*

ಪ್ರವಾದಿಯಾದ ಯೆರಮೀಯನು ಹೇಳುತ್ತಾನೆ, "ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರಮಾಡಿಕೊಂಡೆನು, ನಿನ್ನ ನುಡಿಗಳು ನನಗೆ ಹರ್ಷವೂ ಹೃದಯಾನಂದವೂ ಆದವು; ಸೇನಾಧೀಶ್ವರನಾದ ದೇವರೇ, ಯೆಹೋವನೇ ನಾನು ನಿನ್ನ ಹೆಸರಿನವನಲ್ಲವೆ?" (ಯೆರೆಮೀಯ 15:16). ನಿಮಗೆ ದೇವರ ವಾಕ್ಯದ ಕುರಿತು ತೃಪ್ತಿಪಡಿಸಲಾರದ ದಾಹ ಇದೆಯೋ? ನೀವು ಹಂಬಲಿಸುವ ಆಹಾರದಂತೆ ಹಂಬಲಿಸುತ್ತೀರೋ? ನೀವು ದೇವರ ವಾಕ್ಯದ ಅಧಿಕಾರಕ್ಕೆ ಅಧೀನಪಡಿಸಿಕೊಂಡಿದ್ದೀರೋ? ಅಥವಾ ನೀವು ಯಾವುದನ್ನು ನಂಬಬೇಕು ಮತ್ತು ವಿಧೇಯರಾಗಬೇಕು ಎಂಬುದನ್ನು ಆಯ್ದುಕೊಂಡು ಮಾಡುತ್ತೀರೋ?

ನಾನು ಅನೇಕ ವರ್ಷಗಳಿಂದ ತಿಳಿದಿರುವ ಒಬ್ಬ ಬಡಗಿ ವಾರದಲ್ಲಿ ಸರಾಸರಿ 10 ತಾಸುಗಳು ಸತ್ಯವೇದ ಅಧ್ಯಯನವನ್ನು ಮಾಡುತ್ತಾನೆ. ಈ ಮನುಷ್ಯನು ಮಹಾವಿದ್ಯಾಲಯಕ್ಕಾಗಲಿ ಅಥವಾ ಸತ್ಯವೇದ ಪಾಠಶಾಲೆಗಾಗಲಿ ಹೋದವನಲ್ಲ. ಅವನು ಪಂಡಿತನಲ್ಲ, ಆದರೆ ಅವನಿಗೆ ಅವನ ಜೀವಿತದಲ್ಲಿ ಸತ್ಯವೇದ ಆಧ್ಯತೆಯಾಗಿದೆ. ಬಹುಶಃ ಸಂತ ಜೆರೋಮ್‌ರವರು ಈ ಮಾತನ್ನು ಹೇಳಿರಬಹುದು ಎಂದುಕೊಳ್ಳುತ್ತೇನೆ: ದೇವರ ವಾಕ್ಯವು ಒಂದು ಮಗುವಿಗೆ ಮುಳುಗುವಷ್ಟು ಆಳವಿಲ್ಲದ್ದಾಗಿದೆ ಹಾಗೂ ನೀರು ಕುಡಿಯುವಷ್ಟು

ಸುರಕ್ಷಿತವಾಗಿದೆ. ಅದೇ ಸಮಯದಲ್ಲಿ ಅದು ಒಬ್ಬ ದೈವಶಾಸ್ತ್ರಿಗೆ ಈಜುವಷ್ಟು ಆಳವಾಗಿದೆ ಆದಾಗ್ಯೂ ಆತನು ಎಂದಿಗೂ ಅದರ ತಳವನ್ನು ಮುಟ್ಟಲಾರನು.

ಒಂದು ದಿನ ನಾನು ಒಬ್ಬ ಶಸ್ತ್ರಚಿಕಿತ್ಸಕರ ಕಛೇರಿಗೆ ಹೋಗಿದ್ದೆನು. ಅವರು ತಮ್ಮ ತರಬೇತಿಯ ಅವಧಿಯಲ್ಲಿ ನೂರಾರು ಪುಸ್ತಕಗಳನ್ನು ಓದಿ ಅದರಲ್ಲಿರುವ ವಿಷಯಗಳನ್ನು ಕರಗತಪಡಿಸಿಕೊಳ್ಳಬೇಕಾಗಿತ್ತು. ಒಂದು ವೇಳೆ ಅವರು ನನಗೆ ಅಥವಾ ನನ್ನ ಕುಟುಂಬದ ಒಬ್ಬ ಸದಸ್ಯರಿಗೆ ಶಸ್ತ್ರಚಿಕಿತ್ಸೆ ಮಾಡಬೇಕಾದ ಪರಿಸ್ಥಿತಿ ಇದ್ದಿದ್ದರೆ ಖಂಡಿತವಾಗಿಯೂ ನಾನು ಅವರ ಕೈಯಿಂದಲೇ ಮಾಡಿಸಿಕೊಳ್ಳುತ್ತಿದ್ದೆ! ನಾನು ಇದರ ಕುರಿತು ಯೋಚಿಸುವಾಗ, ಕ್ರಿಸ್ತನ ಶಿಷ್ಯರಾಗಿ ನಮಗೆ ನಿಜವಾಗಿಯೂ ಒಂದೇ ಪುಸ್ತಕವಿದೆ. ನಾವು ದೇವರ ವಾಕ್ಯದಲ್ಲಿ ಪರಿಣಿತಿಯನ್ನು ಹೊಂದಬೇಕು. ಆದಾಗ್ಯೂ, ನಾನು ಜನರೊಟ್ಟಿಗೆ ಐದು ತಾಸುಗಳನ್ನು ಸತ್ಯವೇದ ಅಧ್ಯಯನ ಮತ್ತು ವಾರದಲ್ಲಿ ಕೆಲವು ವಚನಗಳನ್ನು ಬಾಯಿಪಾಠ ಮಾಡುವದರ ಕುರಿತಾಗಿ ಮಾತನಾಡುವಾಗ, ಅವರು ತಮ್ಮ ಮುಂದೆ ಭಯಂಕರವಾದ ಬೇಡಿಕೆಯನ್ನು ಇಟ್ಟಿರುವ ರೀತಿಯಲ್ಲಿ ನನ್ನನ್ನು ನೋಡುತ್ತಾರೆ.

ನೀವು ದೇವರ ವಾಕ್ಯವನ್ನು ಎಷ್ಟು ಓದುತ್ತೀರಿ? ಸತ್ಯವೇದವನ್ನು ಕ್ರಮವಾಗಿ ಓದುವ ಕಾರ್ಯಕ್ರಮ ನಿಮಗಿದೆಯೋ? ನೀವು ವ್ಯವಸ್ಥಿತವಾಗಿ ದೇವರ ವಾಕ್ಯವನ್ನು ಅಧ್ಯಯನ ಮಾಡುತ್ತೀರೊ? ನಿಮ್ಮನ್ನು ತೃಪ್ತಿಪಡಿಸಲು ಅಸಾಧ್ಯವಾದಷ್ಟು ಸತ್ಯವೇದದ ಹಂಬಲ ನಿಮಗಿದೆಯೋ?

4. *ಆತನಲ್ಲಿ ಸೇವಕನ ಹೃದಯವಿರುತ್ತದೆ::*

ಯೇಸು ಒಂದು ಬಾರಿ ತನ್ನ ಶಿಷ್ಯರಿಗೆ ಕ್ರೈಸ್ತೇತರರು ಸೇವೆಮಾಡಿಸಿಕೊಳ್ಳುವದರಲ್ಲಿ ಮತ್ತು ಇತರರ ಮೇಲೆ ಅಧಿಕಾರನ್ನು ಚಲಾಯಿಸುವದರಲ್ಲಿ ಆನಂದಿಸುತ್ತಾರೆ ಎಂಬುದನ್ನು ಜ್ಞಾಪಿಸುತ್ತಾನೆ. ಇದಕ್ಕೆ ಭಿನ್ನವಾಗಿ "ನಿಮ್ಮಲ್ಲಿ ಹಾಗಿರಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಗಿರಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು. ಹಾಗೆಯೇ ಮನುಷ್ಯಕುಮಾರನು ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ; ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು ಎಂದು ಹೇಳಿದನು." (ಮತ್ತಾಯ 20:26–28).

ಬ್ರಿಟಿಷ್ ರಾಯಲ್ ಮಿಲಿಟರಿ ಅಕಾಡೆಮಿ ಅವರ ಧ್ಯೇಯವಾಕ್ಯ "ನಡೆಸುವದಕ್ಕಾಗಿ ಸೇವೆಮಾಡು" ಎಂಬುದಾಗಿದೆ. ಇದೇ ಸತ್ಯವನ್ನು ಯೇಸು ತನ್ನ ಶಿಷ್ಯರಿಗೆ ಅವರ ಕಾಲುಗಳನ್ನು ತೊಳೆಯುವ ಸಂದರ್ಭದಲ್ಲಿ ನಿವೇದಿಸಲು ಪ್ರಯತ್ನಿಸಿದನು (ಯೋಹಾನ 13 ನೋಡಿರಿ). ಅವರ ಕರ್ತನಾಗಿ ಆತನು ಅವರ ಕಾಲುಗಳನ್ನು ತೊಳೆದಿರುವಾಗ ಅವರು ಸಹ ಇತರರಿಗೆ ಅದನ್ನೇ ಮಾಡಲು ಸಿದ್ಧರಾಗಿರಬೇಕು.

ಒಬ್ಬ ವ್ಯಕ್ತಿ ಆತನ ದರ್ಶನವನ್ನು ನೆರವೇರಿಸಲಿಕ್ಕೆ ಸಹಾಯ ಮಾಡಲು ಇತರರನ್ನು ನೇಮಿಸಲು ಪ್ರಯತ್ನಿಸಬಹುದು. ಶಿಷ್ಯರನ್ನಾಗಿ ಮಾಡುವವರು

ಹೇಗೂ ತಮ್ಮ ಜೀವಿತವನ್ನು ಇನ್ನೊಬ್ಬರ ಮೇಲೆ ವ್ಯಯಿಸುತ್ತಾರೆ. ಅವನು ಆ ವ್ಯಕ್ತಿಗೆ ತನ್ನ ಸ್ವಂತ ದರ್ಶನವನ್ನು ನೆರವೇರಿಸಲು ಸಹಾಯ ಮಾಡುತ್ತಾನೆ.

5. *ಆತನು ತನ್ನ ಶರೀರದ ಮೇಲೆ ಯಾವ ವಿಶ್ವಾಸವನ್ನು ಇಡುವದಿಲ್ಲ:*

ದೇವರ ವಾಕ್ಯವು ಈ ತತ್ವಕ್ಕೆ ಒತ್ತು ನೀಡುತ್ತದೆ. ಆಗಾಗ್ಗೆ ಪೌಲನು ಹೇಳುತ್ತಾನೆ, "ಮರಣವಾಗುತ್ತದೆಂಬ ನಿಶ್ಚಯವು ನಮ್ಮೊಳಗೆ ಉಂಟಾಯಿತು; ನಾವು ನಮ್ಮ ಮೇಲೆ ಭರವಸವಿಟ್ಟುಕೊಳ್ಳದೆ ಸತ್ತವರನ್ನು ಎಬ್ಬಿಸುವ ದೇವರ ಮೇಲೆಯೇ ಭರವಸವಿಡುವವರಾಗಬೇಕೆಂದು ಹೀಗಾಯಿತು" (2 ಕೊರಿಂಥ 1:9). ಮತ್ತೆ ಆತನು ಹೇಳುತ್ತಾನೆ, "ನನ್ನಲ್ಲಿ ಅಂದರೆ ನನ್ನ ಶರೀರಾಧೀನಸ್ವಭಾವದಲ್ಲಿ ಒಳ್ಳೇದೇನೂ ವಾಸವಾಗಿಲ್ಲವೆಂದು ನನಗೆ ತಿಳಿದದೆ" (ರೋಮಾ 7:18).

ಲೌಕಿಕತೆ ಮತ್ತು ನಮ್ಮ ದೇಹದ ಮೇಲೆ ನಮಗಿರುವ ವಿಶ್ವಾಸ ಒಂದಕ್ಕೊಂದು ನಿಕಟವಾದ ಸಂಬಂಧವನ್ನು ಹೊಂದಿವೆ, ಯಾಕೆಂದರೆ ಲೌಕಿಕತೆಯನ್ನು, "ನಿಮಗೆ ದೇವರ ಅವಶ್ಯಕತೆ ಇಲ್ಲದೇ ಇರುವ ರೀತಿಯಲ್ಲಿ ಜೀವಿಸುವದು" ಎಂದು ವ್ಯಾಖ್ಯಾನಿಸಬಹುದು. ಉದಾಹರಣೆಗೆ, ಮುಂಜಾನೆಯ ವೇಳೆಯಲ್ಲಿ ಕರ್ತನೊಂದಿಗೆ ಸಮಯವನ್ನು ಕಳೆಯದೆ ಕೆಲಸಕ್ಕೆ ಹೋಗುವದು ನಮ್ಮ ಮೇಲೆ ನಮಗೆ ಇರುವ ಭಯಂಕರವಾದ ವಿಶ್ವಾಸವನ್ನು ಸೂಚಿಸುತ್ತದೆ. ಇದು, "ಇಂದು ನಾನು ನನ್ನ ಜೀವಿತವನ್ನು ದೇವರನ್ನು ಅವಲಂಭಿಸದೆಯೇ ನಡೆಸುತ್ತೇನೆ" ಎಂದು ಹೇಳುವದಕ್ಕೆ ಸಮವಾಗಿದೆ.

ನಮಗೆ ನಮ್ಮ ದೇಹದ ಮೇಲೆ ಎಷ್ಟು ವಿಶ್ವಾಸವಿದೆ ಎಂಬುದನ್ನು ನಿರ್ಧರಿಸಲು ನಾವು ಎಷ್ಟು ಬಾರಿ ನಮ್ಮ ಸ್ವಂತ ಇಷ್ಟಾಲಾಪಕ್ಕೆ ಅನುಗುಣವಾಗಿ ನಡೆದಿದ್ದೇವೆ ಎಂಬ ವಿವರಣೆಯ ಪಟ್ಟಿಯನ್ನು ಮಾಡಿಕೊಳ್ಳಬೇಕು. ನೀವು ಎಷ್ಟು ಬಾರಿ ನೀವು ಎಷ್ಟು ಶ್ರೇಷ್ಠರಾಗಿದ್ದೀರೆಂದು ಮತ್ತು ನೀವು ಮಾಡಿದ ಸಂಗತಿಗಳನ್ನು ಹೇಳಿಕೊಂಡಿದ್ದೀರಿ.

**6**. *ಆತನಿಗೆ ಸ್ವತಂತ್ರ ಆತ್ಮನಿಲ್ಲ:*

ಇಂದಿನ ದಿನಗಳಲ್ಲಿ "ನಿಮ್ಮ ಸ್ವಂತ ಕೆಲಸಗಳನ್ನು ಮಾಡುವದು" ಇದರ ಕುರಿತು ಮಾತನಾಡುವದು ದೊಡ್ಡ ವ್ಯವಹಾರವಾಗಿದೆ. ನಾವು ವಾಸಿಸುತ್ತಿರುವ ಅಧಿಕಾರಶಾಹಿ ಆಡಳಿತವನ್ನು ವಿರೋಧಿಸುವ ಸಮಾಜದಲ್ಲಿ, "ನೀವು ಏನು ಮಾಡಬೇಕು ಎಂಬುದನ್ನು ಹೇಳಲು ಜನರಿಗೆ ಅನುಮತಿಸಬೇಡಿ" ಎಂಬ ಮನೋವೃತ್ತಿ ಇದೆ. ದೇವರ ಕಾರ್ಯವನ್ನು ನೆರವೇರಿಸುವದು ಹೇಗೂ ತಂಡದ ಪ್ರಯತ್ನವಾಗಿದೆ. ಇದು ನಂಬಿಕೆಯಲ್ಲಿ ಒಂದೇ ಮನಸ್ಸಿನ ಸಹೋದರ ಮತ್ತು ಸಹೋದರಿಯರ ಸಹಮತದೊಂದಿಗೆ ಮಾಡಲಾಗುತ್ತದೆ. ಶಿಷ್ಯರ ಜೀವಿತದಲ್ಲಿ ಏಕಾಂಗಿ ಮನೋವೃತ್ತಿಗೆ ಸ್ಥಳವಿಲ್ಲ – ಇಂಥಹ ಮನೋವೃತ್ತಿ ಹೀಗೆ ಹೇಳುತ್ತದೆ, "ಅದನ್ನು ನಾನು ಹೇಳುವಂತೆ ಮಾಡದಿದ್ದಲ್ಲಿ, ನಾನು ಅದನ್ನು ಮಾಡುವದೇ ಇಲ್ಲ."

ಒಂದು ಸಾರಿ ಒಬ್ಬ ಯೌವನಸ್ಥನು ನನಗೆ ಹೀಗೆ ಹೇಳಿದನು, "ದೇವರು ನನಗೆ ಏನು ಹೇಳಬೇಕಾಗಿದೆಯೋ ಅದನ್ನು ನಾನು ಕೇಳುತ್ತೇನೆ, ಆದರೆ ನಾನು ಇತರ ಜನರ ಮೂಲಕ ಕಲಿಯುವದಿಲ್ಲ." ಇಂಥಹ ಮನೋವೃತ್ತಿಯನ್ನು ಹೊಂದಿಕೊಳ್ಳುವದೆಂದರೆ ಸ್ವಯಂ–ವಂಚನೆಯಲ್ಲಿ ಜೀವಿಸುವದಾಗಿದೆ. ಅನೇಕಾವರ್ತಿ ಜನರು ಇತರ ಜನರನ್ನು ಸಂಪರ್ಕಿಸಲು ದೇವರ ಸಾಧನಗಳಾಗಿರುತ್ತಾರೆ. ದೇವರು ತಂಡಕ್ಕಾಗಿ ತಮ್ಮ ಸ್ವಂತ ವಿಚಾರಗಳನ್ನು ನಿಗ್ರಹಿಸಲು ಸಿದ್ದರಿರುವ ಪ್ರಾಮಾಣಿಕ ಜನರಿಗಾಗಿ ಹುಡುಕುತ್ತಿದ್ದಾನೆ.

7. *ಆತನಿಗೆ ಜನರ ಮೇಲೆ ಪ್ರೀತಿಯಿದೆ:*

ಅಪೋಸ್ತಲನಾದ ಯೋಹಾನನು, "ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿ ಬರುತ್ತದೆ" (1ಯೋಹಾನ 4:10). ದೈವಿಕರಾಗಿರುವದೆಂದರೆ ದೇವರಂತೆ ಇರುವದು. ದೇವರಂತೆ ಇರುವದು ಎಂದರೆ ಜನರನ್ನು ಪ್ರೀತಿಸುವದು, ಯಾಕಂದರೆ ದೇವರು ಜನರನ್ನು ಪ್ರೀತಿಸುತ್ತಾನೆ.

ನಾನು ಒಮ್ಮೆ ಪೀನಟ್ಸ್ ಕಾರ್ಟೂನ್ ಎಂಬ ಪುಸ್ತಕವನ್ನು ಓದಿದ್ದೆ, ಅದರಲ್ಲಿ ಚಾರ್ಲಿ ಬ್ರೌನ್‌ರವರು ಹೇಳಿರುವದು ನನಗೆ ಜ್ಞಾಪಕದಲ್ಲಿದೆ, "ನಾನು ಲೋಕವನ್ನು ಪ್ರೀತಿಸುತ್ತೇನೆ, ಲೋಕವು ಅದ್ಭುತವಾಗಿದೆ ಎಂದು ನಾನು ಯೋಚಿಸುತ್ತೇನೆ. ಅದರಲ್ಲಿರುವ ಜನರನ್ನು ನಾನು ಸಹಿಸಲಾರೆ." ಆದಾಗ್ಯೂ, ಯೇಸು ಮಾನವ ಇತಿಹಾಸವನ್ನು ಆಕ್ರಮಿಸಿರುವದಕ್ಕೆ ಜನರೇ ಕಾರಣ. ಆತನು ಜನರನ್ನು ರಕ್ಷಿಸಲು ಬಂದನು. ಸುವಾರ್ತೆಯು ಅದರ ಕುರಿತಾಗಿಯೇ ಹೇಳುತ್ತದೆ. ಶಿಷ್ಯರು ಜನರ ಜೀವಿತದಲ್ಲಿ ತೊಡಗಿಸಿಕೊಂಡವರಾಗಿದ್ದಾರೆ. ಪ್ರಾಮಾಣಿಕ ವ್ಯಕ್ತಿಗೆ ಜನರ ಮೇಲೆ ಪ್ರೀತಿಯಿರುತ್ತದೆ.

8. *ಆತನು ತನ್ನನ್ನು ತಾನು ಕಹಿಭಾವನೆಯ ಬಲೆಯಲ್ಲಿ ಸಿಕ್ಕಿಕೊಳ್ಳುವದಕ್ಕೆ ಅನುಮತಿಸುವದಿಲ್ಲ:*

ಇಬ್ರಿಯ ಪತ್ರಿಕೆಯ ಬರಹಗಾರನು ನಾವು ಎಚ್ಚರವಾಗಿರಬೇಕೆಂದು ಎಚ್ಚರಿಸುತ್ತಾನೆ, "ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ತಪ್ಪಿ ಹಿಂಜರಿಯದಂತೆ ಯಾವ ವಿಷವುಳ್ಳ ಬೇರೂ ನಿಮ್ಮಲ್ಲಿ ಚಿಗುರಿ ಅಸಮಾಧಾನವನ್ನು ಹುಟ್ಟಿಸಿ ಸಭೆಯವರನ್ನು ಕೆಡಿಸದಂತೆ ......." (ಇಬ್ರಿಯ 12:15). ಈ ವಚನದ ಸನ್ನಿವೇಶ ಗದರಿಸುವಿಕೆಯನ್ನು ನೀಡುವದು ಮತ್ತು ಸ್ವೀಕರಿಸುವದು ಆಗಿದೆ. ಅನೇಕಾವರ್ತಿ ಮನುಷ್ಯನು ಕಹಿಭಾವನೆಯನ್ನು ಹೊಂದಿರುತ್ತಾನೆ ಯಾಕಂದರೆ ಯಾರೋ ಒಬ್ಬರು ಅವನ ಜೀವಿತದಲ್ಲಿರುವ ತಪ್ಪನ್ನು ಎತ್ತಿತೋರಿಸಿರುತ್ತಾರೆ. ಅವರು, "ನನ್ನ ಪಾಪಗಳನ್ನು ಎತ್ತಿ ಹೇಳಲು ಅವನು ತಾನು ಯಾರು ಅಂದುಕೊಂಡಿದ್ದಾನೆ? ಅವನು ನನ್ನ ಕಣ್ಣಿನಲ್ಲಿರುವ ರವೆಯನ್ನು ತೆಗೆಯುವ ಪೂರ್ವದಲ್ಲಿ ತನ್ನ ಕಣ್ಣಿನಲ್ಲಿರುವ ತೊಲೆಯನ್ನು ಯಾಕೆ ತೆಗೆಯಬಾರದು?" ಎಂಬ ಭಾವವನ್ನು ತೋರಿಸುತ್ತಾರೆ.

ಕ್ರೈಸ್ತ ಯೌವನಸ್ಥನಾಗಿ, ಈ ವಚನದ ಮೇಲೆ ಯಾರೋ ಒಬ್ಬರು ಪ್ರಸಂಗಿಸುವದನ್ನು ನಾನು ಕೇಳಿದ್ದೇನೆ ಮತ್ತು ನಾನು ಅದನ್ನು ನನ್ನ ಸತ್ಯವೇದದ ಅಂಚಿನಲ್ಲಿ ಅದರ ಮುಂದೆ ಬರೆದುಕೊಂಡಿದ್ದೇನೆ, "ಕಹಿಭಾವನೆ ನಿಜವಾದ ಅಥವಾ ಕಲ್ಪಿಸಿಕೊಂಡ ಅಸಭ್ಯ–ಉಪಚಾರದ ಫಲವಾಗಿರುತ್ತದೆ – ಇದು ಯಾವುದು ಎಂಬುದು ಪರಿಗಣಿಸಲ್ಪಡುವದಿಲ್ಲ." ಯಾರಾದರೊಬ್ಬರು ನಿಜವಾಗಿಯೂ ನಿಮಗೆ ನೋವನ್ನುಂಟು ಮಾಡಿರಬಹುದು ಅಥವಾ ನೀವು ಯಾರಾದರೊಬ್ಬರು ನಿಮ್ಮ ಮನಸ್ಸಿಗೆ ನೋವನ್ನುಂಟು ಮಾಡಿದ್ದಾರೆ ಎಂದು ಕಲ್ಪಿಸಿಕೊಂಡಿರಬಹುದು. ಎರಡೂ ಸಂಗತಿಗಳಲ್ಲಿ, ನೀವು ಎಚ್ಚರಿಕೆಯಾಗಿರದಿದ್ದಲ್ಲಿ ಅದು ನಿಮ್ಮಲ್ಲಿ ಕಹಿಭಾವನೆಯನ್ನುಂಟು ಮಾಡುವದಕ್ಕೆ ಕಾರಣವಾಗಬಹುದು.

ಜ್ಞಾನಿಯಾದ ಹಿರಿಯ ಸಂತನೊಬ್ಬನು ಒಮ್ಮೆ ಈ ರೀತಿಯಾಗಿ ಹೇಳುತ್ತಾನೆ, "ನಾನು ಒಬ್ಬ ವ್ಯಕ್ತಿಯನ್ನು ದ್ವೇಷಿಸುವಂತೆ ಮಾಡುವದರ ಮೂಲಕ ಆತನು ನನ್ನ ಜೀವಿತವನ್ನು ನಾಶಮಾಡುವದಕ್ಕೆ ಎಂದಿಗೂ ಬಿಡುವದಿಲ್ಲ."

ಕಹಿಭಾವನೆಯ ಬೇರುಗಳು ಸ್ಪರ್ಧಾತ್ಮಕ ಆತ್ಮದ ಮೂಲಕ ಬರಬಹುದು, ಇತರೆ ವಿಶ್ವಾಸಿಗಳೊಂದಿಗೆ ನೀವು ಮಾತನಾಡಲು ಇಷ್ಟಪಡದಿರುವಾಗ ಅಥವಾ ನಿಮಗೆ ವ್ಯವಹಾರದಲ್ಲಿ ಮೋಸ ಆಗಿದೆ ಎಂದು ಅನ್ನಿಸುವಾಗ ಕಹಿತನ ಬೆಳೆಯುತ್ತದೆ. ಹೆಚ್ಚು ಶಿಷ್ಯರು ತಮ್ಮ ಕ್ರೈಸ್ತೀಯ ಜೀವಿತದಲ್ಲಿ ನಿಷ್ಪ್ರಯೋಜಕರಾಗುತ್ತಾರೆ. ಕಹಿಭಾವನೆಯ ಬೇರುಗಳಿಂದಾಗಿರಬಹುದು ಇಲ್ಲವೇ ಇನ್ಯಾವದಾದರೂ ಪಾಪದಿಂದಾಗಿರಬಹುದು. ಪ್ರಾಮಾಣಿಕ ಕ್ರೈಸ್ತರು ಈ ಜಟಿಲವಾದ ಕ್ಷೇತ್ರದಲ್ಲಿ ತಮ್ಮ ಹೃದಯಗಳನ್ನು ಕಾಯ್ದುಕೊಳ್ಳುತ್ತಾರೆ.

9. *ಆತನು ತನ್ನ ಜೀವಿತವನ್ನು ಶಿಸ್ತಿಗೆ ಒಳಪಡಿಸುವದನ್ನು ಕಲಿತಿರುತ್ತಾನೆ:*

ದೇವರ ವಾಕ್ಯದಲ್ಲಿ ನನಗೆ ತಿಳಿದಿರುವ ಹೆಚ್ಚು ಪ್ರೇರೇಪಣೆ ನೀಡುವ ವಾಕ್ಯಭಾಗವನ್ನು ಅಪೋಸ್ತಲನಾದ ಪೌಲನು ಬರೆದಿದ್ದಾನೆ, "ರಂಗಸ್ಥಾನದಲ್ಲಿ ಓಡುವದಕ್ಕೆ ಗೊತ್ತಾದವರೆಲ್ಲರೂ ಓಡುತ್ತಾರಾದರೂ ಒಬ್ಬನು ಮಾತ್ರ ಬಿರುದನ್ನು ಹೊಂದುತ್ತಾನೆ ಎಂಬದು ನಿಮಗೆ ತಿಳಿಯದೋ? ಅವರಂತೆ ನೀವೂ ಬಿರುದನ್ನು ಪಡಕೊಳ್ಳಬೇಕಂತಲೇ ಓಡಿರಿ. ಅದರಲ್ಲಿ ಹೋರಾಡುವವರೆಲ್ಲರು ಎಲ್ಲಾ ವಿಷಯಗಳಲ್ಲಿ ಮಿತವಾಗಿರುತ್ತಾರೆ. ಅವರು ಬಾಡಿ ಹೋಗುವ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆ ಮಾಡುತ್ತಾರೆ. ನಾವಾದರೋ ಬಾಡಿಹೋಗದ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆ ಮಾಡುವವರಾಗಿದ್ದೇವೆ. ಹೀಗಿರಲಾಗಿ ನಾನು ಸಹ ಗುರಿಗೊತ್ತಿಲ್ಲದವನಾಗಿ ಓಡದೆ ಗೆಲ್ಲಬೇಕೆಂದಿರುವ ಅವರಂತೆಯೇ ಓಡುತ್ತೇನೆ. ನಾನು ಗಾಳಿಯನ್ನು ಗುದ್ದುವವನಾಗಿರದೆ ಗೆಲ್ಲಬೇಕೆಂದವನಾಗಿ ಗುದ್ದಾಡುತ್ತೇನೆ. ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನು ಅಯೋಗ್ಯನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನಪಡಿಸಿಕೊಳ್ಳುತ್ತೇನೆ" (1ಕೊರಿಂಥ 9:24–27).

ಒಂದು ದಿವಸ ನಾನು ಕುಳಿತುಕೊಂಡು ಕ್ರೈಸ್ತನಾದ ನನಗೆ ಯಾವ ಭಯಂಕರವಾದ ಸಂಗತಿ ಸಂಭವಿಸಬಹುದು ಎಂದು ಧ್ಯಾನಿಸುತ್ತಿದ್ದೆನು. ನಾನು

ನಿರ್ಧಾರಕ್ಕೆ ಬಂದದ್ದು ಏನೆಂದರೆ, ನಾನು ಮರಣ ಹೊಂದಿದಾಗ ದೇವರು ನನ್ನನು ಪಕ್ಕಕ್ಕೆ ಕರೆದು ಹೀಗೆ ಹೇಳುತ್ತಾನೆ, "ಹೆನ್ರಿಕೆನ್, ಕೇವಲ ನಾನು ಹೇಳಿದ್ದನ್ನು ಮಾಡಿದ್ದರೆ, ಒಂದುವೇಳೆ ಕೇವಲ ನೀನು ನನಗೆ ಪ್ರಾಮಾಣಿಕನಾಗಿದ್ದಲ್ಲಿ, ಕೇವಲ ನೀನು ನಿನ್ನ ಜೀವಿತವನ್ನು ಶಿಸ್ತಿಗೆ ಒಳಪಡಿಸಿದ್ದಲ್ಲಿ ಮತ್ತು ಅದನ್ನು ನಿಜವಾಗಿಯೂ ನಾನು ಬಯಸಿದಂತೆ ಯೋಗ್ಯವಾಗಿ ಮಾಡಿಕೊಂಡಿದ್ದಲ್ಲಿ ನಿನ್ನ ಜೀವಿತ ಏನಾಗಬಹುದಿತ್ತು ಎಂಬುದನ್ನು ನಿನಗೆ ತೋರಿಸುತ್ತೇನೆ.

ನಿನ್ನನ್ನು ನೀನು ಶಿಸ್ತಿಗೆ ಒಳಪಡಿಸುವದನ್ನು ಕಲಿತಿದ್ದೀಯೋ? ಶೋದನೆಗಳು ಬರುವಾಗ ಇಲ್ಲ ಎಂದು ಹೇಳುವದನ್ನು ನೀನು ಕಲಿತಿದ್ದೀಯೋ? ನೀನು ಜಯವನ್ನು ಸಾಧಿಸಲು ಸಾಧ್ಯವಾಗದಿರುವ ಚಟ ನಿನ್ನಲ್ಲಿರಬಹುದು. ದೇವರ ಆತ್ಮನು ನೀನು ಜಯವನ್ನು ಹೊಂದಲೆಂದು ಬಯಸುತ್ತಾನೆ, ಆದರೆ ನೀನು ಅದರ ಕುರಿತಾಗಿ ಏನೂ ಮಾಡಿಲ್ಲ, ಅದರ ಕುರಿತು ವಿವೇಚಿಸಿಕೊಂಡಿದ್ದಾಗ್ಯೂ, "ದೇವರು ನಾನು ಈ ಚಟವನ್ನು ಬಿಟ್ಟುಬಿಡಬೇಕೆಂದು ಬಯಸುತ್ತಾನೆ, ಹಾಗಿದ್ದಲ್ಲಿ ಅದನ್ನು ಮಾಡುವದಕ್ಕೆ ಆತನೇ ನನಗೆ ಬಲವನ್ನು ಕೊಡಬೇಕು." ಇದು ಸತ್ಯವಾಗಿದ್ದಾಗಲೂ, ಇದು ಸಂಗತಿಯನ್ನು ದೂರವಿರಿಸುವದಾಗಿದೆ, ಯಾಕಂದರೆ ದೇವರು ನಿಮಗೆ ಈಗಾಗಲೇ ಬಲವನ್ನು ನೀಡಿದ್ದಾನೆ. ಅದು ನಿಮಗೆ ಪವಿತ್ರಾತ್ಮನ ಮೂಲಕ ಲಭ್ಯವಾಗಿದೆ. ನೀವು ಮಾಡಬೇಕಾದದ್ದು ಇಷ್ಟೇ ನೀವು ಅದನ್ನು ಸರಿಪಡಿಸಿಕೊಳ್ಳಬೇಕು ಮತ್ತು ಸರಿಪಡಿಸಿಕೊಳ್ಳಲು ಶಿಸ್ತು ಬೇಕು. ನಿಮಗೆ ಸರಿತೋಚಿದ್ದನ್ನೇ ಮಾಡುವಾಗ ನಿಮ್ಮ ವಿಫಲತೆಗಾಗಿ ಎಂದಿಗೂ ದೇವರನ್ನು ದೂರಬೇಡಿರಿ.


ಸತ್ಯವೇದ ಅಧ್ಯಯನಕ್ಕಾಗಿ ನೀವು ಸಾಯಂಕಾಲದ ಸಮಯವನ್ನು ಪ್ರತ್ಯೇಕಿಸಿದ್ದೀರಿ, ಆದರೆ ನಿಮ್ಮ ಅಚ್ಚುಮೆಚ್ಚಿನ ದೂರದರ್ಶನದ ಕಾರ್ಯಕ್ರಮ ಆ ಸಮಯದಲ್ಲಿದೆ ಎಂಬುದನ್ನು ನೀವು ಕಂಡುಕೊಳ್ಳುತ್ತೀರಿ. ನೀವು ಸತ್ಯವೇದ ಅಧ್ಯಯನವನ್ನು ಬೇರೆ ಸಮಯದಲ್ಲಿ ಮಾಡುತ್ತೇನೆ ಎಂದು ಯೋಚಿಸುತ್ತೀರಿ. ಇದರಿಂದ ಸತ್ಯವೇದ ಅಧ್ಯಯನವನ್ನು ಮಾಡಲಿಕ್ಕೆ ಆಗದಿರುವದಷ್ಟೇ ಅಲ್ಲ, ರಾತ್ರಿ ಬಹಳ ಹೊತ್ತಿನವರೆಗೆ ಎಚ್ಚರವಾಗಿರುತ್ತೀರಿ. ಈ ಕಾರಣದಿಂದ ಕೆಲಸಕ್ಕೆ ಹೋಗುವ ಪೂರ್ವದಲ್ಲಿ ದೇವರೊಂದಿಗೆ ಅನ್ಯೋನ್ಯತೆಯ ಸಮಯವನ್ನು ಕಳೆಯಲು ನೀವು ಬೆಳಿಗ್ಗೆ ಬೇಗನೆ ಏಳುವದಿಲ್ಲ.

ಇದು ಏಕಾಂತ ಸಮಯದ ಕುರಿತು ಒಂದು ಅಥವಾ ಎರಡು ಬಾರಿ ಮಾಡಿದ ಸಂಧಾನವಲ್ಲ ಅದು ಖಂಡಿತವಾಗಿ ವ್ಯತ್ಯಾಸವನ್ನು ತರುತ್ತದೆ. ಸಮಸ್ಯೆ ಏನೆಂದರೆ ಒಂದುಸಾರಿ ನೀವು ವಿನಾಯತಿ ನೀಡಿದ್ದಲ್ಲಿ, ಅದನ್ನು ತಿರುಗಿ ತಿರುಗಿ ಮಾಡುವದು ಸರಳ. ನೀವು ಯೋಚನೆಯನ್ನು ಬಿತ್ತುತ್ತೀರಿ ಮತ್ತು ಕೃತ್ಯದಲ್ಲಿ ಕೊಯ್ಯುತ್ತೀರಿ. ನೀವು ಕೃತ್ಯವನ್ನು ಬಿತ್ತುತ್ತೀರಿ ಮತ್ತು ಚಟವನ್ನು ಕೊಯ್ಯುತ್ತೀರಿ. ನೀವು ಚಟವನ್ನು ಬಿತ್ತುತ್ತೀರಿ ನೀವು ನಿತ್ಯವಾದದ್ದನ್ನು ಕೊಯ್ಯುತ್ತೀರಿ.

ಒಬ್ಬನು ವಾರಾಂತ್ಯದ ಕ್ರೈಸ್ತನಾಗಿರಲು ಪ್ರಯತ್ನಿಸಿದರೆ "ಪ್ರಾಮಾಣಿಕ ವ್ಯಕ್ತಿಯಾಗಿರಲು" ಸಾಧ್ಯವಿಲ್ಲ, ಪ್ರಾಮಾಣಿಕ ವ್ಯಕ್ತಿ ಯಾರೆಂದರೆ ದೇವರ ವಾಕ್ಯವನ್ನು ತನ್ನ ಜೀವಿತದ ಎಲ್ಲಾ ಕ್ಷೇತ್ರದಲ್ಲಿ ಅಳವಡಿಸಿಕೊಂಡವನಾಗಿರುತ್ತಾನೆ. ಶಿಷ್ಯತ್ವದ ಜೀವಿತ ಶಿಸ್ತಿನ ಜೀವಿತವಾಗಿದೆ– ಎರಡೂ ಪದಗಳು ಒಂದೇ

ಬೇರಿನಿಂದ ಬಂದಂತವುಗಳಾಗಿವೆ. ಶಿಷ್ಯನು ಶಿಸ್ತಿನ ವ್ಯಕ್ತಿಯಾಗಿದ್ದಾನೆ. ಇಂಥಹ ಜೀವಿತ ಸರಳವಾದ ಜೀವಿತವಲ್ಲ, ಆದರೆ ದೇವರು ಹೀಗೆ ನಮಗೆ ವಾಗ್ದಾನ ಮಾಡಿಲ್ಲ. ಇದು ಸರಳವಲ್ಲ ಎಂಬುದು ನಮ್ಮ ಸುತ್ತಲೂ ಇರುವ ಕೆಲವೇ ಕೆಲವು ಪ್ರಾಮಾಣಿಕ ಜನರಿಂದಾಗಿ ಈ ಸತ್ಯವು ಕಂಡುಬರುತ್ತದೆ.

ಶ್ರಮ ವಹಿಸಿ ಕೆಲಸ ಮಾಡಿದ, ತನ್ನನ್ನು ತಾನು ಹೇಗೆ ಶಿಸ್ತಿಗೆ ಒಳಪಡಿಸಬೇಕು ಎಂಬುದನ್ನು ಕಲಿತ, ವ್ಯಕ್ತಿಯ ಜೀವಿತದಲ್ಲಿ ಗಮನವನ್ನು ಬೇರೆ ದಿಕ್ಕಿಗೆ ತಿರುಗಿಸುವ ಅಸಂಖ್ಯಾತ ಸಂಗತಿಗಳಿಗೆ ಇಲ್ಲ ಎಂದು ಹೇಳುವದನ್ನು ಕಲಿತ, ಯಾರಿಗೆ ಸ್ಪಷ್ಟವಾದ ಉದ್ದೇಶಗಳಿವೆಯೋ ಮತ್ತು ಅದನ್ನು ನೆರವೇರಿಸುವವರೆಗೆ ಅದರೊಂದಿಗೆ ಇರುತ್ತೇನೆ ಎಂದು ಮನಸ್ಸಿನಲ್ಲಿ ನಿರ್ಧರಿಸಿರುವ ಕ್ರಿಡಾಪಟುವಿಗೆ ಬಂಗಾರದ ಪದಕವು ಸಲ್ಲುತ್ತದೆ. ಇಂಥಹ ವಿಧದ ವ್ಯಕ್ತಿಯನ್ನು ದೇವರು ಉಪಯೋಗಿಸುತ್ತಾನೆ.



# 2. ಯೇಸು ಕರ್ತನಾಗಿದ್ದಾನೆ

ಸಮುದ್ರ ಸಂಶೋಧನಾ ಸಿಬ್ಬಂಧಿಯಲ್ಲಿ ಒಬ್ಬರಾದ ಜಮೈಕಾ ದೇಶದವರು ಕೆಲವು ವರ್ಷಗಳ ಹಿಂದೆ, ಅವರು ತಮ್ಮ ಸ್ವಂತ ಊರಾದ (ಜಮೈಕಾದಲ್ಲಿನ) ಕಿಂಗ್‌ಸ್ಟನ್‌ನಲ್ಲಿದ್ದ ಒಂದು ಬಾಳೆಹಣ್ಣಿನ ಕಂಪನಿಯಲ್ಲಿ ಸೇವೆ ಮಾಡುತ್ತಿದ್ದರು. ಅವರು ಕಂಪನಿಯಲ್ಲಿ ಉತ್ತಮವಾಗಿ ಕಾರ್ಯ ಮಾಡುತ್ತಿದ್ದರು ಆದ ಕಾರಣ ಒಂದುದಿನ ಒಬ್ಬ ಅಧಿಕಾರಿ ಅವರ ಭವಿಷ್ಯತ್ತಿನ ಕುರಿತು ಚರ್ಚಿಸಲು ಅವರನ್ನು ತಮ್ಮ ಕಛೇರಿಗೆ ಅಹ್ವಾನಿಸಿದರು.

ಯೌವನಸ್ಥನ ಸಾಮರ್ಥ್ಯಗಳನ್ನು ಪರಶೀಲಿಸಿದನಂತರ ಆ ಅಧಿಕಾರಿ, “ನಿಮಗೆ ನಮ್ಮ ಕಂಪನಿಯಲ್ಲಿ ಉತ್ತಮವಾದ ಭವಿಷ್ಯವಿದೆ, ಅತ್ಯುತ್ತಮವಾದ ಪ್ರಗತಿಯೊಂದಿಗೆ ತೀವ್ರ ಬಡತಿ ದೊರೆಯುತ್ತದೆ ಎಂದು ಹೇಳಿದರು. ಆದರೆ ನಾವು ವಚನಬದ್ಧರಾಗಿರುವ ಜನರನ್ನು ಹುಡುಕುತ್ತಿದ್ದೇವೆ. ನೀನು ಯಶಸ್ವಿಯಾದಲ್ಲಿ, ಇದಕ್ಕೆ ಬದಲಾಗಿ ಬನಾನಾ ಸಂಸ್ಥೆಗೆ ನಿನ್ನ ಜೀವಿತವನ್ನು ನೀಡಬೇಕು.”

ಯೌವನಸ್ಥನು ಕೆಲವು ಕ್ಷಣ ಇದರ ಕುರಿತು ಯೋಚಿಸಿದನು ಮತ್ತು ತನ್ನ ಜೀವಿತವನ್ನು ಬನಾನಾ ಸಂಸ್ಥೆಗೆ ನೀಡುವದಕ್ಕೆ ನಿರಾಕರಿಸಿದನು.

ಒಡೆತನ ಎನ್ನುವದು ನಿಮ್ಮ ಜೀವಿತದಲ್ಲಿ ಸಾಧ್ಯವಿರುವ ಎಲ್ಲಾ “ಬನಾನಾಗಳಿಗೆ” ಬದಲಾಗಿ ಯೇಸು ಕ್ರಿಸ್ತನಿಗೆ ಪ್ರಥಮ ಸ್ಥಾನವನ್ನು ನೀಡುವದನ್ನು ಒಳಗೊಂಡಿದೆ,.

ಈ ಅಧ್ಯಾಯವು ನಮ್ಮ ಜೀವಿತದಲ್ಲಿ ಕ್ರಿಸ್ತನನ್ನು ಒಡೆಯನನ್ನಾಗಿ ಮಾಡಿಕೊಳ್ಳಲು ತೊಡಗಿಕೊಂಡಿರುವ ನಾಲ್ಕು ಅಂಶಗಳನ್ನು ನೀಡುತ್ತದೆ.

1. ನಮಗೆ ಆತನು ಬೇಕಿರಲಿ ಇಲ್ಲದಿರಲಿ ಯೇಸು ಕ್ರಿಸ್ತನು ಒಡೆಯನಾಗಿದ್ದಾನೆ ಎಂಬ ಸತ್ಯ.
2. ನಾವು ಆತನನ್ನು ಒಡೆಯನೆಂದು ಅರಿಕೆಮಾಡಿಕೊಳ್ಳದೇ ಇರುವದಕ್ಕೆ ಕಾರಣ.
3. ಆತನನ್ನು ಒಡೆಯನೆಂದು ಅರಿಕೆ ಮಾಡುವದು ಅಂದರೇನು?
4. ಕ್ರಿಸ್ತನು ಏಕೆ ನಮ್ಮ ಒಡೆಯನಾಗಿರಲು ಬಯಸುತ್ತಾನೆ.

ಇವುಗಳನ್ನು ಒಂದೊಂದಾಗಿ ನೋಡೋಣ.

### ನಮಗೆ ಆತನು ಬೇಕಿರಲಿ ಇಲ್ಲದಿರಲಿ ಯೇಸು ಕ್ರಿಸ್ತನು ಒಡೆಯನಾಗಿದ್ದಾನೆ ಎಂಬ ಸತ್ಯ.

ಯೇಸು ಕ್ರಿಸ್ತನು ಎಲ್ಲಾ ಸಂಗತಿಗಳ ಸೃಷ್ಟಿಕರ್ತನಾಗಿದ್ದಾನೆ ಮತ್ತು “ತನ್ನ ವಾಕ್ಯದ ಬಲದಿಂದ” ಆತನು ಎಲ್ಲವನ್ನು ಒಟ್ಟಾಗಿ ಸೇರಿಸಿದ್ದಾನೆ. “ಭೂಪರಲೋಕಗಳಲ್ಲಿರುವ ದೃಶಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ದೊರೆತನಗಳಾಗಲಿ ಅಧಿಕಾರಗಳಾಗಲಿ ಈತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು. ಆತನು ಎಲ್ಲಕ್ಕೂ ಮೊದಲು ಇದ್ದವನು; ಆತನು ಸಮಸ್ತಕ್ಕೂ ಆಧಾರಭೂತನು. ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿಸಂಭೂತನು, ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ. (ಕೊಲೊಸ್ಸೆ 1:16–18)

ನಿಮ್ಮ ಜೀವಿತವನ್ನು ನೀವು ಎಷ್ಟರ ಮಟ್ಟಿಗೆ ನಿಗ್ರಹದಲ್ಲಿಟ್ಟುಕೊಂಡಿದ್ದೀರೆಂದು ನೀವು ಬಲ್ಲಿರೋ? ನೀವು ಯಾವಾಗ ಜನಿಸಬೇಕು ಎಂಬುದನ್ನು ನೀವು ನಿರ್ಧರಿಸಿದ್ದಿರೋ? ಅಥವಾ ನಿಮ್ಮ ತಂದೆ ತಾಯಿ ಯಾರಾಗಿರಬೇಕು ಎಂಬುದನ್ನು ನೀವು ನಿರ್ಧರಿಸಿದ್ದಿರೋ? ಅಥವಾ ನೀವು ಯಾವ ದೇಶದಲ್ಲಿ ಜನಿಸಬೇಕು ಎಂಬುದನ್ನು? ನಿಮ್ಮ ಚರ್ಮದ ಬಣ್ಣವನ್ನು ನೀವು ನಿರ್ಧರಿಸಿದ್ದಿರೋ? ನಿಮ್ಮ ಕಣ್ಣು? ನಿಮ್ಮ ಕೂದಲು? ನಿಮ್ಮ ಬುದ್ಧಿಮಟ್ಟ ಅಥವಾ ನಿಮ್ಮ ವರಗಳು ಮತ್ತು ತಲಾಂತುಗಳನ್ನು ನೀವು ನಿರ್ಧರಿಸಿದ್ದಿರೋ? ನಿಮ್ಮ ಎತ್ತರದ ಕುರಿತು ಏನು – ನೀವು ಅದನ್ನು ನಿರ್ಧರಿಸಿದ್ದಿರೋ? ಅಥವಾ ನಿಮ್ಮ ಹೊರಗಿನ ತೋರಿಕೆ, ನೀವು ಸುಂದರರಾಗಿ ಕಾಣುವಂತೆ ಅಥವಾ ಸಾಮಾನ್ಯವಾಗಿರುವಂತೆ ನೀವು ನಿರ್ಧರಿಸಿದ್ದಿರೋ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಇಲ್ಲ ಎಂಬುದಾಗಿ. ಈ ಪ್ರತಿಯೊಂದು ಮತ್ತು ಇನ್ನೂ ಅನೇಕ ಕ್ಷೇತ್ರಗಳಲ್ಲಿ, ನಿಮಗೆ ಹೇಳುವದಕ್ಕೆ ಏನೂ ಇಲ್ಲ. ನಿಮ್ಮ ಅಭಿಪ್ರಾಯ ಯಾವ ವಿಧದಲ್ಲೂ ಗಣನೆಗೆ ಬರುವದಿಲ್ಲ.

ಹಾಗಿದ್ದಲ್ಲಿ ನೀವು ಯಾವ ಹಂತದಲ್ಲಿ ನಿಯಂತ್ರಣದಲ್ಲಿದ್ದೀರಿ? ಸತ್ಯವೇದವು ಹೇಳುತ್ತದೆ ನೀವು ಚಿಕ್ಕದಾದ ಆದರೆ ನಿಮ್ಮ ಜೀವಿತದ ಅತೀ ಪ್ರಾಮುಖ್ಯವಾದ ಭಾಗದ ಮೇಲೆ ನಿಯಂತ್ರಣವನ್ನು ಹೊಂದಿದ್ದೀರಿ, ವಿಶೇಷವಾಗಿ ನಿಮ್ಮ ಸಂಕಲ್ಪ ಶಕ್ತಿಯ ಮೇಲೆ. ಒಡೆತನ ನಿಮ್ಮ ಸಂಕಲ್ಪ ಶಕ್ತಿಗೆ ಸಂಬಂಧಿಸಿದೆ. ಅದನ್ನು ಯೇಸು ಕ್ರಿಸ್ತನಿಗೆ ಅಧೀನ ಪಡಿಸುವದನ್ನು ಒಳಗೊಂಡಿದೆ. ಇದರ ಅರ್ಥ ನಿಮಗಿರುವದೆಲ್ಲರ ಮೇಲೆ ಯೇಸು ಒಡೆಯನಾಗಿದ್ದಾನೆ, ಕೇವಲ ಭಾಗ ಮಾತ್ರವಲ್ಲ. ನಿಮ್ಮ ಸಂಕಲ್ಪ ಶಕ್ತಿ ಈ ನಿರ್ಧಾರವನ್ನು ಮಾಡಬೇಕಾದಲ್ಲಿ, ನಿಮಗೆ ಸಂಬಂಧಿಸಿದ ಅನೇಕ ಸಂಗತಿಗಳ ಮೇಲೆ ಆತನ ನಿಯಂತ್ರಣವಿದೆ ಎಂಬುದನ್ನು ನೀವು ಜ್ಞಾಪಕದಲ್ಲಿಟ್ಟುಕೊಳ್ಳಿರಿ, ನಿಮಗೆ ಅದು ಬೇಕಿರಲಿ ಅಥವಾ ಇಲ್ಲದಿರಲಿ.

### ನಾವು ಕ್ರಿಸ್ತನನ್ನು ಒಡೆಯನೆಂದು ಏಕೆ ಅರಿಕೆ ಮಾಡಲು ಬಯಸುವದಿಲ್ಲ

ಯೇಸುವನ್ನು ಕರ್ತನೆಂದು ಅರಿಕೆ ಮಾಡದೇಯಿರಲು ಪ್ರತಿಯೊಬ್ಬ ವ್ಯಕ್ತಿಗೆ ತನ್ನದೇ ಆದ ಕಾರಣಗಳಿದ್ದಾಗಲೂ, ಕೆಲವು ಕಾರಣಗಳೂ ಗಣನೀಯವಾದ ಪುನರಾವರ್ತನೆಯೊಂದಿಗೆ ಬರುತ್ತವೆ.

1. *ಆತನು ನಾವು ಬಯಸದೇ ಇರುವ ಸಂಗತಿಗಳನ್ನು ಮಾಡಲು ನಮ್ಮನ್ನು ಕೇಳಬಹುದು.*

ನಿಜವಾಗಿಯೂ ಆತನು ಹಾಗೆ ಮಾಡುತ್ತಾನೆ, ಇದು ಹಾಗಿಲ್ಲದಿದ್ದಲ್ಲಿ ಇಲ್ಲಿ ಯಾವ ಸಂಗತಿಯೂ ತೊಡಗಿಸಿಕೊಂಡಿರುವದಿಲ್ಲ. ನೀವು ನಿಮ್ಮ ಜೀವಿತದಲ್ಲಿ ಯೇಸು ಕ್ರಿಸ್ತನನ್ನು ಒಡೆಯನನ್ನಾಗಿ ಮಾಡಿಕೊಳ್ಳುವಾಗ ನೀವು ಮಾಡದೇ ಇರುವ ಸಂಗತಿಗಳನ್ನು ಮಾಡಲು ನೀವು ಆತನ ಮೇಲೆ ಅವಲಂಬಿಸಬಹುದು.

ಅಬ್ರಹಾಮನಿಗೆ ಇಸಾಕನನ್ನು ಯಜ್ಞವಾಗಿ ಅರ್ಪಿಸಲು ಮನಸ್ಸಿರಲಿಲ್ಲ. ಮೋಶೆ ಫರೋಹನನ ಮುಂದೆ ಹೋಗುವದಕ್ಕೆ ಸಿದ್ಧನಿರಲಿಲ್ಲ. ಯೋಸೆಫನಿಗೆ ಅಷ್ಟೊಂದು ವರ್ಷಗಳನ್ನು ಸೆರೆಮನೆಯಲ್ಲಿ ಕಳೆಯಲು ಮನಸ್ಸಿರಲಿಲ್ಲ. ಯೇಸು ಕ್ರಿಸ್ತನಿಗೆ ಕ್ರೂಜೆಯನ್ನು ಏರುವದಕ್ಕೆ ಮನಸ್ಸಿರಲಿಲ್ಲ.

ಯಾರಿಗೂ ಕ್ರೂಜೆಯೆಂದರೆ ಇಷ್ಟವಿಲ್ಲ. ಯಾರೂ ಮರಣವನ್ನು ಇಷ್ಟಪಡುವದಿಲ್ಲ. ಯಾರೂ ತಮ್ಮನ್ನು ತಾವು ನಿರಾಕರಿಸಿಕೊಳ್ಳಲು ಇಷ್ಟಪಡುವದಿಲ್ಲ. ಆದರೆ ಇದೇ

ಒಡೆತನದ ಕುರಿತು ಎಲ್ಲವೂ ಆಗಿದೆ. ಶಿಷ್ಯನು ಶಿಸ್ತಿನಿಂದಿರುತ್ತಾನೆ. ಆತನು ಕರ್ತನು ಬಯಸುವ ಸಂಗತಿಗಳನ್ನು ಮಾಡಲು ತಾನು ಬಯಸುವ ಸಂಗತಿಗಳಿಗೆ ಇಲ್ಲವೆಂದು ಹೇಳುತ್ತಾನೆ. ಶಿಷ್ಯನು ತನ್ನ ಬಯಕೆಗಳನ್ನು ತನ್ನ ಇಚ್ಛೆಗಳನ್ನು ತೃಪ್ತಿಪಡಿಸುವದರ ಮೂಲಕ ತನ್ನನ್ನು ತಾನು ಮೆಚ್ಚಿಸಿಕೊಳ್ಳುವದಿಲ್ಲ.

ಯೇಸು ಕ್ರಿಸ್ತನು ನಮ್ಮ ಜೀವಿತದ ಒಡೆಯನಾಗಿರುವಾಗ, ಪ್ರತಿಯೊಂದು ಕ್ಷೇತ್ರವು ಆತನ ಉಸ್ತುವಾರಿಯಲ್ಲಿರುತ್ತದೆ – ನಿಮ್ಮ ಯೋಚನೆಗಳು, ನಿಮ್ಮ ಕೃತ್ಯಗಳು, ನಿಮ್ಮ ಯೋಜನೆಗಳು, ನಿಮ್ಮ ವೃತ್ತಿ, ನಿಮ್ಮ ಬಿಡುವಿನ ಸಮಯ ಮತ್ತು ನಿಮ್ಮ ಜೀವಿತದ ಗುರಿಗಳು ಇವೆಲ್ಲವೂ ಆತನ ಒಡೆತನದಲ್ಲಿರುತ್ತವೆ.

2. *ನಮಗೆ ಯಾವುದು ಉತ್ತಮ ಎಂಬುದನ್ನು ನಾವು ತಿಳಿದಿದ್ದೇವೆ ಎಂದು ಯೋಚಿಸುತ್ತೇವೆ.*

ಯಾವುದೂ ಸತ್ಯದಿಂದ ದೂರವಾಗಿಲ್ಲ. ಮಗುವನ್ನು ಏಕಾಂಗಿಯಾಗಿ ಬಿಟ್ಟರೆ ಅದು ತನ್ನನ್ನು ತಾನು ಕೊಲ್ಲುತ್ತದೆ. ಅದು ತಪ್ಪಾದ ವಸ್ತುಗಳನ್ನು ತಿನ್ನಬಹುದು ಅಥವಾ ದಾರಿಯಲ್ಲಿ ಓಡಿಹೋಗಬಹುದು, ಅಥವಾ ಹರಿತವಾದ ಚಾಕುವನ್ನು ಗಟ್ಟಿಯಾಗಿ ಹಿಡಿದುಕೊಳ್ಳಬಹುದು, ಅಥವಾ ಅದರಷ್ಟೇ ಅಪಾಯಕಾರಿಯಾಗಿರುವದರೊಂದಿಗೆ ಆಟ ಆಡಬಹುದು. ತಂದೆತಾಯಿಗಳು ನಿರಂತರವಾಗಿ ಮಗುವಿನೆಡಗೆ ಗಮನವನ್ನು ನೀಡಬೇಕು. ಇದರ ಅರ್ಥ ತಂದೆತಾಯಿಗಳು ಮಗುವಿನ ಜೀವಿತದ ಒಡೆಯರಾಗಿರುತ್ತಾರೆ. ನಿಜವಾಗಿಯೂ ಕಾನೂನಿಗೆ ಇದು ಅವಶ್ಯವಾಗಿದೆ; ತಂದೆತಾಯಿಗಳು ಇಂಥಹ ಒಡೆತನವನ್ನು ಕಾರ್ಯರೂಪಕ್ಕೆ ತರಲು ನಿರಾಕರಿಸುವಾಗ; ನ್ಯಾಯಾಲಯಗಳು ಅವರನ್ನು ಜವಾಬ್ದಾರರನ್ನಾಗಿಸುತ್ತವೆ.

ನಾವು ಭೌಧಿಕ ಪ್ರಭುತ್ವವನ್ನು ಹೊಂದಿದಾಗ ಹೇಗಿದ್ದರೂ, ಸಂಗತಿಗಳು ತಕ್ಷಣ ಬದಲಾಗುತ್ತವೆ ಎಂದು ನಾವು ಯೋಚಿಸುತ್ತೇವೆ. ಇಲ್ಲಿಯೇ ನಾವು ತಪ್ಪು ಮಾಡುವವರಾಗಿದ್ದೇವೆ. ಮಗುವನ್ನು ಒಂಟಿಯಾಗಿ ಬಿಟ್ಟಾಗ ಬಹುಶಃ ತನಗೆ ನೋವನ್ನುಂಟು ಮಾಡಿಕೊಳ್ಳಬಹುದು. ಪ್ರಭುದ್ದರಾದ ತರುಣರನ್ನು ಒಂಟಿಯಾಗಿ ಬಿಟ್ಟಾಗ, ಅವರು ತಮಗೆ ನೋವನ್ನುಂಟುಮಾಡಿಕೊಳ್ಳುತ್ತಾರೆ. ಒಂದು ಸಮೀಕ್ಷೆಯ ಪ್ರಕಾರ ಜನರು ಕ್ಯಾನ್ಸರ್ ಮತ್ತು ಹೃದಯಾಘಾತಕ್ಕಿಂತ ಹೆಚ್ಚಾಗಿ ವಾಹನ ಅಪಘಾತದಲ್ಲಿ ಮರಣ ಹೊಂದುತ್ತಾರೆ.

ನಮ್ಮನ್ನು ಕಾಯಲು ಮತ್ತು ನಾವು ಏನೂ ತಪ್ಪು ಮಾಡುವದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ನಿಜವಾಗಿಯೂ ಪೋಲಿಸರನ್ನು ನೇಮಿಸಿದ್ದೇವೆ ಎಂಬುದನ್ನು ಎಂದಾದರೂ ಯೋಚಿಸಿದ್ದೇವೆಯೋ. ಆದಾಗ್ಯೂ, ನಮಗೆ ಯಾವುದು ಉತ್ತಮವಾಗಿದೆ ಎಂಬುದು ನಮಗೆ ತಿಳಿದಿದೆ ಎಂದು ಹೇಳುವ ಉದ್ಧಟತನವನ್ನು ಮಾಡುತ್ತೇವೆ.

3. *ದೇವರು ನಮ್ಮ ಕುರಿತಾಗಿ ಉತ್ತಮವಾದ ಆಸಕ್ತಿಯನ್ನು ಹೊಂದಿದ್ದಾನೆಂಬುದನ್ನು ನಮಗೆ ಖಚಿತವಾಗಿಲ್ಲ.*

ದೇವರು ಅದನ್ನು ನಮಗೆ ಕಠಿಣವಾಗಿಸಲು ಬಯಸಿದ್ದಲ್ಲಿ ಆತನು ಏನು ಮಾಡಬಹುದು ಎಂಬುದನ್ನು ನೀವು ಉಹಿಸಿದ್ದೀರೋ? ಆತನು ನಮ್ಮನ್ನು ಸಂಕಷ್ಟಕ್ಕೆ ಗುರಿಮಾಡಿ ತೊಂದರೆಗೆ ಒಳಪಡಿಸಲು ಬಯಸಿದ್ದಲ್ಲಿ ಆತನು ನಮ್ಮ ಜೀವಿತವನ್ನು ಸಹಿಸಲಸಾಧ್ಯವಾಗಿ ಮಾಡುತ್ತಾನೆ.

ಕೆಲವರು ದೇವರು ನಮ್ಮ ಜೀವಿತದಲ್ಲಿ ತೊಡಗಿಸಿಕೊಳ್ಳಲು ಮನಸ್ಸು ಮಾಡುವದಿಲ್ಲ ಎಂದು ವಾದಿಸುತ್ತಾರೆ ಆದರೆ ಆತನು ನಮಗೆ ನೋವನ್ನುಂಟು ಮಾಡುತ್ತಾನೆ ಎಂದು ಹೇಳುವದು ಹಾಸ್ಯಾಸ್ಪದವಾಗಿದೆ.

ಹೇಗಿದ್ದರೂ, ನೀವು ಯೇಸು ಕ್ರಿಸ್ತನು ನಮ್ಮ ಜೀವಿತದಲ್ಲಿ ತೊಡಗಿಸಿಕೊಳ್ಳಲು ಬಯಸುವದಿಲ್ಲ ಎಂದು ವಾದಿಸಬಾರದು. ಒಡೆತನದ ನೈಜ್ಯತೆಯೇ ಆತನು ನಮ್ಮ ಜೀವಿತದಲ್ಲಿ ತೊಡಗಿಸಿಕೊಳ್ಳಲು ಬಯಸುತ್ತಾನೆ ಆತನು ಪ್ರವಾದಿಯಾದ ಯೆರಮೀಯನ ಮೂಲಕ ಏನು ಹೇಳುತ್ತಾನೆಂಬುದನ್ನು ನೋಡೋಣ. "ಇವರಿಗೆ ಗತಿಯಾಗಲಿ ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತ ಯೋಚನೆಗಳಲ್ಲ, ಹಿತದ ಯೋಚನೆಗಳೇ. (ಯೆರೆಮೀಯ 29:11)

**ಆತನನ್ನು ಒಡೆಯನೆಂದು ಅರಿಕೆ ಮಾಡುವದು ಅಂದರೇನು?**

ಯೇಸು ಕ್ರಿಸ್ತನನ್ನು ಒಡೆಯನೆಂದು ಗುರುತಿಸುವದರ ಪರಿಣಾಮ ಆತನು ತನ್ನ ಶಿಷ್ಯರಿಗೆ ಕಲಿಸಿದ ಪ್ರಾರ್ಥನೆಯಲ್ಲಿ ಕಂಡುಬರುತ್ತದೆ. ನೀವು ಈ ರೀತಿಯಾಗಿ ಪ್ರಾರ್ಥಿಸಬೇಕು, "ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕಲ್ಲಿ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ನಮಗೆ ದಯಪಾಲಿಸು ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸುವಂತೆ ನಮ್ಮ ತಪ್ಪುಗಳನ್ನು ನಮಗೆ ಕ್ಷಮಿಸು, ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು. ಯಾಕಂದರೆ ರಾಜ್ಯವು ಬಲವು ಮಹಿಮೆಯು ನಿನ್ನವೇ. ಆಮೆನ್" (ಮತ್ತಾಯ 6:9–13)

ಪ್ರಾರ್ಥನೆಯು ಪರಲೋಕದಲ್ಲಿರುವ ನಮ್ಮ ತಂದೆಯೇ ಎಂದು ಪ್ರಾರಂಭವಾಗುವದನ್ನು ಗಮನಿಸಿರಿ. ಯೇಸು ನಮಗೆ "ನನ್ನ ತಂದೆಯೇ" ಎಂದು ಕರೆಯಲು ಸೂಚಿಸಲಿಲ್ಲ ಬದಲಾಗಿ "ನಮ್ಮ ತಂದೆಯೇ" ಎಂದು ಸೂಚಿಸಿದ್ದಾನೆ. ಶಿಷ್ಯರು ಅವರೆಲ್ಲಿರುತ್ತಾರೋ ಆ ಜನರೊಂದಿಗೆ ಗುರುತಿಸಿಕೊಳ್ಳಲು ಸಮರ್ಥರಾಗಿರಬೇಕು, ತಾವು ಎಲ್ಲಿ ಕೂತುಕೊಳ್ಳಬೇಕೋ ಅಲ್ಲಿ ಕೂತುಕೊಳ್ಳಲು. ಶಿಷ್ಯನೊಬ್ಬನೇ ಆಗಮಿಸಿಲ್ಲ ಬದಲಾಗಿ ಆತನು ವಿದ್ಯಾರ್ಥಿಯಾಗಿದ್ದಾನೆ, ಯಾತ್ರಿಕನಾಗಿದ್ದಾನೆ, ತನ್ನ ಜೀವಿತವನ್ನು ದೇವರು ಬಯಸುವ ರೀತಿಯಲ್ಲಿ ರೂಪಿಸಿಕೊಳ್ಳುವ ಹುಡುಕಾಟದಲ್ಲಿದ್ದಾನೆ. ಆದುದರಿಂದ ಆತನು ತನ್ನ ಅವಶ್ಯಕತೆಗಳನ್ನು ಮತ್ತು ಜನರ ದೌರ್ಬಲ್ಯಗಳನ್ನು ತಿಳಿದುಕೊಳ್ಳಬೇಕು.

*ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ.* ಯೇಸು ತನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ ಎಂದು ಹೇಳಲಿಲ್ಲ ಆದರೆ ತಂದೆಯ ನಾಮವು ಪರಿಶುದ್ದವೆಂದು ಎಣಿಸಲ್ಪಡಲಿ ಎಂದು ಹೇಳಿದನು. ಆತನ ಒಡೆತನವನ್ನು ಅರಿಕೆ ಮಾಡುವದು ಎಂದರೆ ನಿಮ್ಮ ನಾಮವನ್ನು ಅಧೀನಪಡಿಸುವದು.

ನೀವು ನಿಮಗೋಸ್ಕರ ಹೆಸರು ಮಾಡುವದರಲ್ಲಿ ಆಸಕ್ತರಾಗಿದ್ದೀರೋ? ನೀವು ಜನರಿಂದ ಗುರುತಿಸಲ್ಪಡಬೇಕು ಎಂಬ ಇಚ್ಛೆಯುಳ್ಳವರಾಗಿದ್ದೀರೋ? ನಿಮ್ಮ ಜೀವಿತದ ಗುರಿ ದೊಡ್ಡ ವೈಜ್ಞಾನಿಕ ಸಂಶೋಧನೆಯನ್ನು, ವ್ಯಾಪಾರದಲ್ಲಿ ಉತ್ತಮವಾದ ಸಾಧನೆಯನ್ನು ಮಾಡಿ, ಪ್ರಾಮುಖ್ಯವಾದ ವ್ಯಕ್ತಿಯೊಂದಿಗೆ ವಿವಾಹವನ್ನು ಮಾಡಿಕೊಂಡು, ಇಲ್ಲವೇ ನಿಮಗೆ ಹೆಸರನ್ನು ತರುವ ಯಾವುದೇ ಸಂಗತಿಯನ್ನು ಮಾಡಿ ಸ್ವಯಂ–ಸೇವೆಯನ್ನು

ಮಾಡಿಕೊಳ್ಳಲು ಬಯಸುತ್ತೀರೋ? ಯೇಸುವನ್ನು ನಿಮ್ಮ ಒಡೆಯನಾಗಿಟ್ಟುಕೊಳ್ಳುವದೆಂದರೆ ನಿಮ್ಮ ಹೆಸರಲ್ಲ, ಆತನ ಹೆಸರು ಪರಿಶುದ್ಧವೆಂದು ಎಣಿಸಲ್ಪಡಬೇಕೆಂದು ಬಯಸಬೇಕು.

*ನಿನ್ನ ರಾಜ್ಯವು ಬರಲಿ.* ಪರಲೋಕದಲ್ಲಿ ಆಳ್ವಿಕೆಮಾಡಿದಂತೆ ಭೂಲೋಕದಲ್ಲಿಯೂ ಆಳ್ವಿಕೆಯನ್ನು ಮಾಡುವದು ದೇವರು ಬಯಕೆಯಾಗಿದೆ.

ಆತನು ತನ್ನ ರಾಜ್ಯವನ್ನು ಕಟ್ಟುವ ಪ್ರಕ್ರಿಯೆಯಲ್ಲಿ ತೊಡಗಿದ್ದಾನೆ. ನೀವು ಕ್ರಿಸ್ತನ ರಾಜ್ಯವನ್ನು ಕಟ್ಟುವದರಲ್ಲಿ ಬೇಸರವಿಲ್ಲದೇ ಭಾಗಿಗಳಾಗಿದ್ದೀರೋ ಅಥವಾ ನೀವು ನಿಮ್ಮದೇ ಆದ ಚಿಕ್ಕ ರಾಜ್ಯವನ್ನು ಕಟ್ಟುವದರಲ್ಲಿ ನಿರತರಾಗಿದ್ದೀರೋ? ನಿಮ್ಮ ಸಭೆಯಲ್ಲಿ, ಅದು ನಿಮ್ಮ ಭಾನುವಾರ ಪಾಠಶಾಲೆಯಾಗಿದೆಯೋ, ನಿಮ್ಮ ಸಮೀತಿಯಾಗಿದೆಯೋ ಅಥವಾ ನಿಮ್ಮ ಹಿರಿಯರಾಗಿದ್ದಾರೋ, ನಿಮ್ಮ ಕಟ್ಟುವ ಯೋಜನೆಯಾಗಿದೆಯೋ, ನಿಮ್ಮ ಮಿಶನರಿ ಕಾರ್ಯಕ್ರಮಗಳಾಗಿವೆಯೋ? ಈ ಎಲ್ಲಾ ಸಂಗತಿಗಳು ನಿಮ್ಮ ಗಮನವನ್ನು ಸೆಳೆಯುತ್ತಿವೆಯೋ ಅಥವಾ ನೀವು ಸಂಪೂರ್ಣ ಪ್ರಾಮಾಣಿಕತೆಯಿಂದ ಕ್ರಿಸ್ತನ ರಾಜ್ಯವನ್ನು ಕಟ್ಟಲು ಪ್ರಯತ್ನಿಸುತ್ತಿದ್ದೇವೆ ಎಂದು ಹೇಳುತ್ತೀರೋ?

ದೇವರ ರಾಜ್ಯವನ್ನು ಕಟ್ಟುವದಕ್ಕೆ ಮಾರ್ಗವೆಂದರೆ ಸುವಾರ್ತಾಸೇವೆ, "ಜನರನ್ನು ಕತ್ತಲೆಯ ರಾಜ್ಯದಿಂದ ಬೆಳಕಿನ ರಾಜ್ಯಕ್ಕೆ ಕರೆತರುವದು ಮತ್ತು ಸೈತಾನನ ಬಲದಿಂದ ದೇವರೆಡೆಗೆ." ನೀವು ಸುವಾರ್ತಾಸೇವೆಯಲ್ಲಿ ಚಟುವಟಿಕೆಯಿಂದ ಭಾಗವಹಿಸಿದ್ದೀರೊ? ನಿಮ್ಮನ್ನು ಆತ್ಮೀಯ ಸ್ನೇಹಿತರು ಎಂದು ಪರಿಗಣಿಸುವ ಎಷ್ಟು ಜನ ಕ್ರೈಸ್ತೇತರರನ್ನು ನೀವು ಬಲ್ಲವರಾಗಿದ್ದೀರಿ?

*ನಿನ್ನ ಚಿತ್ತವು ನೆರವೇರಲಿ.* ಯೇಸು ಕ್ರಿಸ್ತನು "ನನ್ನ ಚಿತ್ತವು ನೆರವೇರಲಿ" ಎಂದು ಹೇಳಲಿಲ್ಲ ಬದಲಾಗಿ "ನಿನ್ನ ಚಿತ್ತವು ನೆರವೇರಲಿ" ಎಂದು ಹೇಳಿದನು ಎಂಬುದನ್ನು ತಿರುಗಿ ಗಮನಿಸಿರಿ.

ಇದೇ ವಿಚಾರವನ್ನು ಯೇಸು ನಿವೇದಿಸಿದಾಗ ಹೇಳುತ್ತಾನೆ, "ನನ್ನಷ್ಟಕ್ಕೆ ನಾನೇ ಏನೂ ಮಾಡಲಾರೆನು; ತಂದೆ ಹೇಳಿದ್ದನ್ನು ಕೇಳಿ ನ್ಯಾಯತೀರಿಸುತ್ತೇನೆ; ಮತ್ತು ಸ್ವಂತ ಚಿತ್ತ ನೆರವೇರಬೇಕೆಂದು ಅಪೇಕ್ಷಿಸದೆ ನನ್ನನ್ನು ಕಳುಹಿಸಿದಾತನ ಚಿತ್ತ ನೆರವೇರಬೇಕೆಂದು ಅಪೇಕ್ಷಿಸುವದರಿಂದ ನಾನು ಮಾಡುವ ತೀರ್ಪು ನ್ಯಾಯವಾಗಿದೆ." (ಯೋಹಾನ 5:30).

ನೀವು ನಿಮ್ಮ ಜೀವಿತದಲ್ಲಿ ದೇವರ ಚಿತ್ತ ಏನೆಂಬುದನ್ನು ಹುಡುಕುವದರಲ್ಲಿ ಚಟುವಟಿಕೆಯಿಂದ ಭಾಗಿಗಳಾಗದಿದ್ದರೆ "ನಿನ್ನ ಚಿತ್ತ ನೆರವೇರಲಿ" ಎಂದು ಪ್ರಾರ್ಥಿಸಲಾರಿರಿ. ಸತ್ಯವೇದದ ಮೂಲಕ ನೀವು ದೇವರ ಚಿತ್ತ ಏನೆಂದು ತಿಳಿದುಕೊಂಡಿದ್ದೀರೋ, ಅದರಿಂದ ಪ್ರಾರಂಭಿಸಿರಿ. ನೀವು ಹೀಗೆ ಮಾಡಿದರೆ, ಪವಿತ್ರಾತ್ಮನು ನಿಮಗೆ ಖಚಿತವಿಲ್ಲದಿರುವ ಕ್ಷೇತ್ರಗಳನ್ನು ನಿಮಗೆ ಸ್ಪಷ್ಟಪಡಿಸುತ್ತಾನೆ.

*ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ನಮಗೆ ದಯಪಾಲಿಸು.* "ನನಗೆ ದೊರೆತಿರುವದೆಲ್ಲಾ ಯೇಸುವಿಗೆ ಸಂಬಂಧಿಸಿದ್ದು" ಎಂಬ ಮನೋವೃತ್ತಿ ನಮ್ಮಲ್ಲಿದ್ದಾಗ ನಾವು ಈ ಪ್ರಾರ್ಥನೆಯನ್ನು ನಿಜವಾಗಿ ಪ್ರಾರ್ಥಿಸಬಹುದು, ಇಲ್ಲವಾದಲ್ಲಿ "ಹೇಗೂ ನಮಗೆ ಸ್ವಾಭಾವಿಕವಾಗಿ ದೊರೆಯುತ್ತಿರುವಾಗ" ಆತನನ್ನು ಏಕೆ ಬೇಡಿಕೊಳ್ಳಬೇಕು? ಪೌಲನು ಈ ರೀತಿಯಾಗಿ ಹೇಳುತ್ತಾನೆ, "ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಯೆಂಬದು ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು;

ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವನ್ನು ಪ್ರಕಾಶಪಡಿಸಿರಿ." (1ಕೊರಿಂಥ 6:19–20)

ಯೇಸು ನಿಮ್ಮನ್ನು ತನ್ನ ರಕ್ತದ ಕ್ರಯವನ್ನು ನೀಡಿ ಕೊಂಡುಕೊಂಡದ್ದರಿಂದ, ನೀವು ನಿಮ್ಮ ಸ್ವಂತ ಸೊತ್ತಲ್ಲ. ನೀವು ಆತನವರು. ಒಡೆತನ ಎಂದರೆ ಈ ಸತ್ಯವನ್ನು ಗುರುತಿಸುವದು ನಿಮ್ಮನ್ನು ಮತ್ತು ನಿಮಗಿರುವದನ್ನೆಲ್ಲಾ ಆತನಿಗೆ ಸರ್ಮಪಿಸಿ ಆತನವರಾಗಿರಬೇಕು.

ನೀವು ಅಮೂಲ್ಯವೆಂದು ಪರಿಗಣಿಸುವ ಸಂಗತಿಗಳನ್ನು ಕುರಿತು ಯೋಚಿಸಿರಿ. ಅದು ನಿಮ್ಮ ಅಚ್ಚುಮೆಚ್ಚಿನ ಹರಳು ಅಥವಾ ಸರವಾಗಿರಬಹುದು ಅಥವಾ ನಿಮ್ಮ ಕ್ರೀಡಾ ಸಾಮಗ್ರಿಯಾಗಿರಬಹುದು. ನಿಮ್ಮ ವಾಹನವಾಗಿರಬಹುದು. ಅದು ಏನೇ ಆಗಿರಲಿ, ಅದರ ಒಡೆಯ ಯಾರು ಎಂಬುದನ್ನು ನಿಮಗೆ ಪ್ರಶ್ನಿಸಿಕೊಳ್ಳಿರಿ, ಅದು ನಿಜವಾಗಿಯೂ ಕರ್ತನಾದ ಯೇಸು ಕ್ರಿಸ್ತನಿಗೆ ಸಂಬಂಧಿಸಿದ್ದಾಗಿದ್ದಲ್ಲಿ, ಬಹುಶಃ ನೀವು ಯೇಸು ತನಗೆ ಸರಿಕಾಣುವ ರೀತಿಯಲ್ಲಿ ಉಪಯೋಗಿಸಲು ಲಭ್ಯವಾಗಿಟ್ಟಿರುತ್ತೀರಿ.

*ನಾವು ಇತರರ ತಪ್ಪುಗಳನ್ನು ಕ್ಷಮಿಸುವಂತೆ ನಮ್ಮ ತಪ್ಪುಗಳನ್ನು ನಮಗೆ ಕ್ಷಮಿಸು.* "ಕರ್ತನೇ ನಾನು ಇತರರನ್ನು ಕ್ಷಮಿಸುವ ಪ್ರಕಾರ ನೀನು ನನ್ನನ್ನು ಕ್ಷಮಿಸಬೇಕೆಂದು ನಾನು ಬಯಸುತ್ತೇನೆ." ಎಂದು ಪ್ರಾರ್ಥಿಸಬೇಕೆಂದು ಯೇಸು ಹೇಳುತ್ತಿದ್ದಾನೆ. ನೀವು ಇದನ್ನು ಹೇಳಬಲ್ಲಿರೋ? ನೀವು ಇತರರನ್ನು ಕ್ಷಮಿಸುವ ಅಳತೆಯಲ್ಲಿ ದೇವರು ನಿಮ್ಮನ್ನು ಕ್ಷಮಿಸಬೇಕೆಂದು ನೀವು ತೀರ್ಮಾನಿಸುತ್ತೀರೋ?

ಒಡೆತನ ಪರಸ್ಪರ ಸರ್ಮಪಣೆಗೆ ನಡೆಸುತ್ತದೆ ಕೇವಲ ಹೊಂದಿಕೊಳ್ಳುವದಷ್ಟೇ ಅಲ್ಲ ಕೊಡುವದನ್ನು ಅಳವಡಿಸಿಕೊಳ್ಳುವದಾಗಿದೆ. ಕೃಪೆ ಎಂದರೆ ದೇವರು ತನ್ನನ್ನು ಸಂಪೂರ್ಣವಾಗಿ ನಮಗೆ ಸರ್ಮಪಿಸಿಕೊಳ್ಳುವದಾಗಿದೆ. ಆತನ *ಒಡೆತನವೆಂದರೆ* ನಾವು ಸಂಪೂರ್ಣವಾಗಿ ನಮ್ಮನ್ನು ದೇವರಿಗೆ ಸರ್ಮಪಿಸುವದಾಗಿದೆ. ಪ್ರತಿಯೊಬ್ಬರೂ ದೇವರು ಸಂಪೂರ್ಣವಾಗಿ ತನಗೆ ಸರ್ಮಪಿಸಿಕೊಳ್ಳಲಿ ಎಂದು ಬಯಸುತ್ತಾರೆ ಆದರೆ ಕೆಲವರು ಮಾತ್ರ ತಮ್ಮನ್ನು ತಾವು ಸಂಪೂರ್ಣವಾಗಿ ಆತನಿಗೆ ಸರ್ಮಪಿಸಿಕೊಳ್ಳಲು ಸಿದ್ದರಾಗಿರುತ್ತಾರೆ.

*ನಮ್ಮನ್ನು ಶೋಧನೆಯಲ್ಲಿ ಸೇರಿಸಬೇಡ.* ಇಲ್ಲಿ ಯೇಸು ತಂದೆಯು ನಮ್ಮನ್ನು ಶೋಧನೆಗೆ ಒಳಗಾಗುವ ಸನ್ನಿವೇಶದಲ್ಲಿ ನಡೆಸಬೇಡ ಎಂದು ಪ್ರಾರ್ಥಿಸುತ್ತಿದ್ದಾನೆ. ನಮ್ಮ ಜೀವಿತದಲ್ಲಿ ಅನೇಕ ಸನ್ನಿವೇಶಗಳು ತಪ್ಪಾಗಿರುವದಿಲ್ಲ ಆದರೆ ಅವು ಸೈತಾನನಿಗೆ ನಮ್ಮ ಮೇಲೆ ಪರಾಕ್ರಮವನ್ನು ತೋರಿಸಲು ಅವಕಾಶವನ್ನು ನೀಡುತ್ತವೆ.

ಯೇಸು ಹೀಗೆ ಹೇಳಲಿಲ್ಲ, "ನಮ್ಮನ್ನು ಪಾಪದಲ್ಲಿ ಸಿಲುಕಿಸಬೇಡ" ಬದಲಾಗಿ ಆತನು "ನಮ್ಮ ಶೋಧನೆಯಲ್ಲಿ ಸೇರಿಸಬೇಡ" ಎಂದು ಹೇಳುತ್ತಾನೆ. ಈ ಪ್ರಾರ್ಥನೆಯನ್ನು ಮಾಡುವದೆಂದರೆ ನಾನು ಪ್ರಶ್ನಾತೀತವಾದ ಸಂಗತಿಗಳನ್ನು ಅಧೀನಪಡಿಸಲು ಸಿದ್ದನಾಗಿದ್ದೇನೆ. ನಾನು ಪಾಪವೆಂದು ಪರಿಗಣಿಸಿರುವ ಈ ಸಂಗತಿಗಳನ್ನು ಅಧೀನ ಪಡಿಸಲು ಸಿದ್ದನಾಗಿರುವದಷ್ಟೇ ಅಲ್ಲ, ನಾನು ನನ್ನ ಜೀವಿತದಲ್ಲಿ ಶೋಧನೆಯನ್ನು ತರುವ ಎಲ್ಲಾ ಕ್ಷೇತ್ರಗಳನ್ನು ನಿನಗೆ ಅಧೀನಪಡಿಸಲು ಸಿದ್ದನಾಗಿದ್ದೇನೆ.

ನಿಮ್ಮಷ್ಟಕ್ಕೆ ನಿಮಗೆ ಈ ಕ್ಷೇತ್ರಗಳು ಯಾವವು ಎಂಬುದು ತಿಳಿದಿದೆ. ನನ್ನ ಜೀವಿತದಲ್ಲಿ ಯೇಸು ಕ್ರಿಸ್ತನನ್ನು ಒಡೆಯನನ್ನಾಗಿ ಮಾಡಿಕೊಳ್ಳಲು ಸಿದ್ಧನಿದ್ದೇನೆ ಎಂದರೆ ನಾನು ಈ ಎಲ್ಲಾ ಸಂಗತಿಗಳನ್ನು ಬದಿಗಿರಿಸುತ್ತೇನೆ.

*ಕೆಡುಕನಿಂದ ನಮ್ಮನ್ನು ತಪ್ಪಿಸು.* ಇದು ಯೇಸು ಕ್ರಿಸ್ತನು ತನ್ನನ್ನು ಹಿಡಿದುಕೊಡಲ್ಪಡುವ ರಾತ್ರಿಯಲ್ಲಿ ತನ್ನ ಶಿಷ್ಯರಿಗಾಗಿ ಮಾಡಿದ ಅದೇ ಪ್ರಾರ್ಥನೆಯಾಗಿದೆ (ಯೋಹಾನ 17:15 ನೋಡಿರಿ).

ಒಡೆತನ ನಮ್ಮ ಯುದ್ಧವನ್ನು ನಾವೇ ಮಾಡಲು ಯಾವ ಮಾರ್ಗವಿಲ್ಲ ಎಂಬುದನ್ನು ಗುರತಿಸುವಾದಾಗಿದೆ. ಕ್ರಿಸ್ತನು, ಆತನು ಮಾತ್ರ ನಮ್ಮನ್ನು ಕಾಯುತ್ತಾನೆ. ಯಾರೊಬ್ಬನೂ ತನ್ನ ಸ್ವಂತ ಸಾಮರ್ಥ್ಯದಿಂದ ವೈರಿಯೊಂದಿಗೆ ಯುದ್ಧವನ್ನು ಮಾಡಿ ಜಯಿಸಲಾರನು. ಯೇಸು ಕ್ರಿಸ್ತನು ಸಹ ಸೈತಾನನ್ನು ಸೋಲಿಸಿದನು ಕ್ರೂಜೆಯ ಬೆಲೆಯನ್ನು ನೀಡುವದರ ಮೂಲಕ ಮಾತ್ರ.

ಯಾಕೋಬ, ನಮ್ಮ ಕರ್ತನಾದ ಯೇಸುವಿನ ಸಹೋದರ, ಅದನ್ನು ಈ ರೀತಿಯಲ್ಲಿ ಬರೆಯುತ್ತಾನೆ. "ಹೀಗಿರಲಾಗಿ ದೇವರಿಗೆ ಒಳಗಾಗಿರಿ ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು." (ಯಾಕೋಬ 4:7) ನಾವು ಎರಡು ಸಂಗತಿಗಳನ್ನು ಮಾಡಿದರೆ ಸೈತಾನನು ನಮ್ಮನ್ನು ಬಿಟ್ಟು ಓಡಿಹೋಗುವನು. ಮೊದಲನೆಯದಾಗಿ, ನಮ್ಮನ್ನು ನಾವು ಕರ್ತನಿಗೆ ಅದೀನಪಡಿಸಿಕೊಳ್ಳುವದು ಮತ್ತು ಎರಡನೆಯದಾಗಿ ಕರ್ತನ ಬಲದೊಂದಿಗೆ ಆತನನ್ನು ಓಡಿಸುವದು.

**ಯೇಸು ಏಕೆ ನಮ್ಮ ಒಡೆಯನಾಗಿರಲು ಬಯಸುತ್ತಾನೆ?**

ಯಾಕೆ ಯೇಸು ನಮ್ಮ ಜೀವಿತದಲ್ಲಿ ತೊಡಗಿಸಿಕೊಳ್ಳಲು ತೊದರೆ ತೆಗೆದುಕೊಳ್ಳುತ್ತಾನೆ? ಆತನು ಏಕೆ ನಮ್ಮನ್ನು ನಮ್ಮ ಸಂಕಷ್ಟದಲ್ಲಿ ಬಿಡುವದಿಲ್ಲ? ಇದು ಸತ್ಯವೇದದಲ್ಲಿರುವ ಒಂದು ದೊಡ್ಡ ರಹಸ್ಯವಾಗಿದೆ. ಆದರೆ ಸತ್ಯವೇದವು ಬಹಳ ಸ್ಪಷ್ಟವಾಗಿ ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಮ್ಮೊಂದಿಗಿರಲು ಬಯಸುತ್ತಾನೆ ಎಂದು ಹೇಳುತ್ತದೆ. ಅವನು ನಮ್ಮ ಜೀವಿತದ ಒಡೆಯನಾಗಿರುವದಕ್ಕೆ ಬಯಸುತ್ತಾನೆ. ನಾನು ನನ್ನ ಸ್ವಂತ ಪಾಪದ ಸ್ವಭಾವವನ್ನು ನೋಡುವಾಗ ಪಾಪದೆಡೆಗೆ ನನ್ನ ಒಲವನ್ನು ನೋಡುವಾಗ, ನಾನು ಇದು ತತ್ತರಿಸುವ ವಿಚಾರವಾಗಿದೆ ಎಂದು ಅರಿಕೆ ಮಾಡಬೇಕು.

ಒಕ್ಲೊಹೋಮಾ ಪಟ್ಟಣದಿಂದ ಒಬ್ಬ ಮಾರಾಟಗಾರನನ್ನು ದೇಶದುದ್ದಕ್ಕೂ, ಮಾರ್ಗಗಳನ್ನು ಬಿಟ್ಟು ಇರುವ ಸ್ಥಳಗಳನ್ನು ಸಂದರ್ಶಿಸುವದರಿಂದ ಅವನು ಸಣ್ಣ ವಿಮಾನವನ್ನು ವ್ಯಾಪಾರದ ಪ್ರಯಾಣಕ್ಕಾಗಿ ಉಪಯೋಗಿಸುವದನ್ನು ನಾನು ನೋಡಿದ್ದೇನೆ. ಒಂದು ದಿವಸ ಅವನು ಕೊರಕಲು ಭೂಭಾಗದ ವಿಮಾನಯಾನ ಮಾಡುತ್ತಿರುವಾಗ ಆತನು ವಾಹನ ದೊಟ್ಟ ಟ್ರಕ್‌ನ್ನು ದಾಟುವದನ್ನು ನೋಡಿದನು. ಕಾರಿನ ಚಾಲಕನು ಟ್ರಕ್ ತನ್ನನ್ನು ಸುತ್ತಿ ಮುಂದೆ ಹೋಗುವದನ್ನು ನೋಡುವಾಗ ಅತೀಯಾಗಿ ಕೋಪಗೊಂಡನು. ಅವನ ಕಾರು ಒಂದು ಬದಿಯಿಂದ ಇನ್ನೊಂದು ಬದಿಗೆ ದಾಟುತಿತ್ತು.

ನನ್ನ ಸ್ನೇಹಿತನು ಹಿಂದಕ್ಕೆ ಹೋಗಿ ನೋಡಲು ನಿರ್ಧರಿಸಿದನು. ಪ್ರತಿಸಾರಿ ಕಾರು ಟ್ರಕ್‌ನ್ನು ದಾಟಿಹೋಗುವ ಸಮಯದಲ್ಲಿ ಅದು ಜೋಡಿ ಮಾರ್ಗವನ್ನು, ಗುಡ್ಡವನ್ನು ಅಥವಾ ತಿರುವನ್ನು ಅಥವಾ ವಿರುದ್ಧ ದಿಕ್ಕಿನಿಂದ ಬರುತ್ತಿರುವ ಇನ್ನೊಂದು ಕಾರನ್ನು ತಲುಪುತಿತ್ತು. ನನ್ನ ಸ್ನೇಹಿತನ ದೃಷ್ಟಿಕೋನದಲ್ಲಿ, ಅವನು ಕೆಳಗೆ ಹೆದ್ದಾರಿಯ ಹಲವು ಮೈಲುಗಳನ್ನು ನೋಡಬಹುದಾಗಿತ್ತು ಮತ್ತು ಅವನು ಯೋಚಿಸಿದ, "ಒಂದು ವೇಳೆ ನಾನು ಕಾರಿನಲ್ಲಿದ್ದ ಮನುಷ್ಯನೊಂದಿಗೆ ಮಾತನಾಡಲು ಪ್ರಯತ್ನಿಸಿದ್ದಲ್ಲಿ ನಾನು ಅವನಿಗೆ ದಾಟಿಹೋಗಲು

ಯಾವಾಗ ಸುರಕ್ಷಿತತೆ ಇದೆ ಮತ್ತು ಯಾವಾಗ ಸುರಕ್ಷಿತವಾಗಿಲ್ಲ ಎಂದು ಹೇಳಬಹುದಿತ್ತು ಎಂದು ಯೋಚಿಸಿದನು.

ನಾವು ಜೀವಿತವೆಂಬ ಈ ಮಹಾಸಾಹಸದಲ್ಲಿ ಹಾದು ಹೋಗುವಾಗ, ನಾವು ನಾಳೆ ಎನ್ನುವ ತಿರುವನ್ನು ನೋಡಲು ಸಾಧ್ಯವಿಲ್ಲ ಅಥವಾ ಮುಂದಿನವಾರ ಎಂಬ ಗುಡ್ಡವನ್ನು. ಅದೇ ರೀತಿಯಾಗಿ, ದಾಟಿಹೋಗಲು ಅದು ಯಾವಾಗ ಸುರಕ್ಷಿತವಾಗಿದೆ ಎಂಬುದು ನಮಗೆ ಗೊತ್ತಿಲ್ಲ. ಯಾಕಂದರೆ ಯೇಸು ಕ್ರಿಸ್ತನು ಎಲ್ಲದರ ಒಡೆಯನಾಗಿದ್ದಾನೆ, ಪ್ರಾರಂಭದಿಂದ ಕೊನೆಯವರೆಗೆ ನೋಡುವಾತನಾಗಿದ್ದಾನೆ ಮತ್ತು ಬಲ್ಲಾತನಾಗಿದ್ದಾನೆ.

ನಮ್ಮ ಒಡೆಯನಾಗಿರುವದಕ್ಕೆ ಆತನು ಸ್ವಯಂ-ಸಿದ್ದನಾಗಿರುವದು ಆತನು ನಮ್ಮ ಜೀವಿತದಲ್ಲಿ ತೊಡಗಿಸಿಕೊಳ್ಳಲು ಬಯಸುತ್ತಾನೆ ಎಂಬುದನ್ನು ಪ್ರಕಟಿಸುತ್ತದೆ. ಆದುದರಿಂದ ಆತನು ಯಾವಾಗ ಮುಂದೆ ಹೋಗುವದಕ್ಕೆ ಮತ್ತು ಯಾವಾಗ ಮುಂದೆ ಹೋಗಬಾರದು ಯಾವಾಗ ಸುರಕ್ಷಿತವಾಗಿದೆ ಎಂಬುದನ್ನು ಹೇಳಲು ಶಕ್ತನಾಗಿದ್ದಾನೆ. ಇಂಥಹ ಉತ್ತಮವಾದ ಕೊಡುಗೆಯನ್ನು ತಳ್ಳಿಹಾಕುವ ನಾವು ಮೂರ್ಖರಲ್ಲವೋ?



# 3. ಶಿಷ್ಯತ್ವದ ಬೆಲೆ

ಕೆಲವು ತಿಂಗಳುಗಳ ಹಿಂದೆ, ನಾನು ಮತ್ತು ಒಬ್ಬ ವ್ಯಾಪಾರಿ ಒಟ್ಟಾಗಿ ಮಧ್ಯಾಹ್ನದ ಊಟವನ್ನು ಮಾಡುತ್ತಿದ್ದೆವು. ಊಟದ ಸಮಯದಲ್ಲಿ, ಆತನ ಯೋಚನೆಯಲ್ಲಿ ಯಾವುದು ಶ್ರೇಷ್ಠವಾದದ್ದು ಎಂದು ಕೇಳಿದೆನು. ಆತನು, ಮಹಾನಗರಸಭೆಯ ಬೆಲೆ/ಫಲಿತಾಂಶಗಳ ಅನುಪಾತದ ಮರುಮೌಲ್ಯಮಾಪನದ ಪ್ರಕ್ರಿಯೆಯಲ್ಲಿ ತೊಡಗಿದ್ದೇನೆ ಎಂದು ಉತ್ತರಿಸಿದನು. ಈ ಒಂದು ಕಲ್ಪನೆ ಸರಳವಾಗಿದೆ. ವ್ಯಾಪಾರದಲ್ಲಿ ನಿಂತುಕೊಳ್ಳಬೇಕಾದರೆ ಅವನು ತನ್ನ ವಸ್ತುಗಳನ್ನು ತಯಾರಿಸುವದರ ಬೆಲೆ ಅವನು ಮಾರುವ ಬೆಲೆಗಿಂತ ಹೆಚ್ಚಾಗಿರಬಾರದು ಎಂಬುದನ್ನು ಆತನು ಖಚಿತಪಡಿಸಿಕೊಳ್ಳಬೇಕಾಗಿತ್ತು.

ನಾನು ಬೆಲೆ/ಫಲಿತಾಂಶದ ಅನುಪಾತದ ಮಹತ್ವವವನ್ನು ತಿಳಿದುಕೊಂಡಿದ್ದೇನೆ ಒಂದು ವೇಳೆ ತಯಾರಿಸುವ ಬೆಲೆ ನನಗೆ ರೂ. 5 ಆಗಿದ್ದಲ್ಲಿ ನಾನು ಅದನ್ನು ರೂ.4.50 ಕ್ಕೆ ಮಾರಿದರೆ ನಾನು ಬೇಗನೇ ವ್ಯಾಪಾರದಿಂದ ಹೊರಗೆ ಬರುತ್ತೇನೆ. ನಾನು ಈ ಕಲ್ಪನೆಯ ಕುರಿತು ವಿಚಾರ ಮಾಡುವಾಗ ಕ್ರೈಸ್ತರಾಗಿರುವದು ಎಷ್ಟರ ಮಟ್ಟಿಗೆ ಬೆಲೆಯನ್ನು ಮೀರಿದ್ದಾಗಿದೆ ಎಂದು ಯೋಚಿಸಿದೆನು. ನಿಜವಾಗಿಯು, ಶಿಷ್ಯತ್ವ ನಮ್ಮ ಹೃದಯದಲ್ಲಿರುವ ಉತ್ತಮವಾದ ಆಸಕ್ತಿಯಿಂದಾಗಿ ದೇವರಿಂದ ನೇಮಕವಾದದ್ದು. ಇದು "ದೇವರಿಗೆ ಹೊರಬರಲು ಸಹಾಯ ಮಾಡಲು" ಅಲ್ಲ ಬದಲಾಗಿ "ನಮಗೆ ಹೊರಬರಲು ಸಹಾಯ ಮಾಡುವದಾಗಿದೆ."

ದೇವರಿಗೆ ನಮ್ಮ ಸಹಾಯ ಬೇಕಾಗಿಲ್ಲ. ನಮಗೆ ದೇವರ ಸಹಾಯ ಬೇಕಾಗಿದೆ. ಶಿಷ್ಯತ್ವವು ದೇವರಿಂದ ನೇಮಿಸಲ್ಪಟ್ಟದ್ದು ನಮಗೆ ಅವಶ್ಯವಿರುವ ಸಹಾಯವನ್ನು ನೀಡುವದಕ್ಕಾಗಿ.

ವಸಂತ ಋತುವಿನ ಒಂದು ದಿನ ಐದು ಜನರಿರುವ ಒಂದು ಕುಟುಂಬ ಬಂಡಿಪೂರದಿಂದ ಮೈಸೂರಿಗೆ ಪ್ರಯಾಣಮಾಡುತ್ತಿದ್ದರು. ಬಹಳ ಕತ್ತಲಾಗಿತ್ತು ಮತ್ತು ಮಳೆ ಜೋರಾಗಿ ಬೀಳುತಿತ್ತು. ಅವರು ಕೆಳಗೆ ರಸ್ತೆಯಲ್ಲಿ ಕೇವಲ 100 ಅಡಿಗಳಷ್ಟು ಮಾತ್ರ ವೀಕ್ಷಿಸಬಹುದಾಗಿತ್ತು. ಅವರು ನಿಧಾನವಾಗಿ ಪ್ರಯಾಣಿಸುತ್ತಿರುವಾಗ, ಒಬ್ಬ ಪುರುಷ ಮತ್ತು ಮಹಿಳೆ ಹೆದ್ದಾರಿಯುದ್ದಕ್ಕೂ ಸುರಿಯುತ್ತಿರುವ ಮಳೆಯಲ್ಲಿ ನಡೆದು ಬರುತ್ತಿದ್ದರು. ಅವರು ಅವರ ಬಳಿಗೆ ಬಂದು ಏನಾದರು ಸಹಾಯ ಬೇಕೋ ಎಂದು ಕೇಳಿದರು. ಆಗ ನಾನು ಗಮನಿಸಿದೆ ಮಹಿಳೆಯ ಕೈಯಲ್ಲಿ ಒಂದು ಮಗು ಇತ್ತು.

ಅವಳು ಹೇಳಿದಳು ಅವರು ಕೆಲವು ಮೈಲುಗಳು ಹಿಂದೆ ಇರುವ ಪಟ್ಟಣದಲ್ಲಿ ನಾವು ವಾಸಿಸುತ್ತೇವೆ ಆದರೆ ವಿಧ್ಯುತ್ತಶಕ್ತಿಯ ತೊಂದರೆಯಿಂದಾಗಿ ಅವರ ಮನೆಯಲ್ಲಿರುವ ವೈರುಗಳಲ್ಲಿ ಬೆಂಕಿ ಹತ್ತಿ ಮನೆಯನ್ನು ಸುಟ್ಟುಬಿಟ್ಟಿದೆ ನಾವು ಸುದೈವದಿಂದ ತಪ್ಪಿಸಿಕೊಂಡಿದ್ದೇವೆ ಮತ್ತು ಸುಮಾರು ಏಳು ಮೈಲು ದೂರವಿರುವ ಮುಂದಿನ ಪಟ್ಟಣದಲ್ಲಿ ನಮ್ಮ ಸಹೋದರಿ ಮತ್ತು ಅವಳ ಕುಂಟುಂಬವಿದೆ ಮುಂದಿನ ವ್ಯವಸ್ಥೆಯಾಗುವವರೆಗೆ ಅಲ್ಲಿಗೆ ಹೋಗುತ್ತಿದ್ದೇವೆ ಎದು ಹೇಳಿದಳು. ನಿರಾಶ್ರಿತರಾದ ಕುಟುಂಬಕ್ಕಾಗಿ ಅನುತಾಪಪಟ್ಟು ಅವರಿಗೆ ಬಂಡಿಪೂರನಲ್ಲಿ ಸ್ಥಳವಿಲ್ಲ ಎಂದು ಅರಿತು, ಆ ಮನುಷ್ಯನು ತನ್ನ ಕೋಟಿನ ಕಿಸೆಗೆ ಕೈಹಾಕಿ ರೂ. 20 ತೆಗೆದು ಆ ಮಹಿಳೆಗೆ ನೀಡಿದನು ಮತ್ತು ಕತ್ತಲೆಯಲ್ಲಿ ತನ್ನ ವಾಹನವನ್ನು ತೆಗೆದುಕೊಂಡು ಹೋದನು.

ಹೆದ್ದಾರಿಯಲ್ಲಿ ಕೆಲವು ಮೈಲುಗಳು ಪ್ರಯಾಣಮಾಡುವಾಗ, ಆತನು ಕಾರನ್ನು ನಿಲ್ಲಿಸಿ ತನ್ನ ಕುಟುಂಬದವರನ್ನು ಕೇಳಿದನು, "ನಮ್ಮ ಹತ್ತಿರ ಎಷ್ಟು ಹಣವಿದೆ?" ಅವರು ಸಂಗ್ರಹಿಸಿಟ್ಟುಕೊಂಡ ಹಣ ಸುಮಾರು ರೂ. 100 ಆಗಿತ್ತು. ಅವನು ಆ ದಂಪತಿಗಳು

ಇನ್ನೂ ನಡೆದು ಹೋಗುತ್ತಿರುವ ಸ್ಥಳಕ್ಕೆ ಹಿಂದಕ್ಕೆ ಹೋಗಿ, "ನಾನು ಕೊಟ್ಟ ಹಣ ನಿಮ್ಮ ಬಳಿ ಇದೆಯೋ ಎಂದು ಕೇಳಿದನು"

ಆಶ್ಚರ್ಯಕರವಾಗಿ ಮಹಿಳೆ ಉತ್ತರಿಸಿದಳು, "ನಮ್ಮ ಹತ್ತಿರ ಇವೆ"

"ಹಾಗಿದ್ದಲ್ಲಿ ನನಗೆ ಕೊಡಿರಿ"

ಆಶ್ಚರ್ಯದೊಂದಿಗೆ ಅವಳು ತನ್ನ ಪರ್ಸ್‌ನಲ್ಲಿ ಕೈ ಹಾಕಿ ರೂ. 20 ರ ನೋಟನ್ನು ಹೊರಕ್ಕೆ ತೆಗೆದು ನನಗೆ ಕೊಟ್ಟಳು. ಅವನು ತಾನು ತಂದಿದ್ದ ಹಣದೊಂದಿಗೆ ಅದನ್ನು ಸೇರಿಸಿ ಅವಳಿಗೆ ಕೊಟ್ಟು ಹೀಗೆ ಹೇಳಿದನು, "ಇದನ್ನು ನನ್ನ ಕುಟುಂಬ ನಿನಗೆ ಕೊಡಲು ಇಚ್ಛಿಸಿದೆ ತೆಗೆದುಕೊ."

ಮೊದಲು ನಾನು ಈ ಕತೆಯನ್ನು ಕೇಳಿದಾಗ, ದೇವರು ನಮ್ಮನ್ನು ಹೇಗೆ ನೋಡಿಕೊಳ್ಳುತ್ತಾನೆ ಎಂಬುದಕ್ಕೆ ಎಂಥಹ ಸುಂದರವಾದ ಮತ್ತು ಸಂಕ್ಷಿಪ್ತವಾದ ಉದಾಹರಣೆ ಎಂದು ಅಂದುಕೊಂಡಿದ್ದೇನು. ನಮ್ಮ ಕರ್ತನು ನಮಗೆ ಅನೇಕ ಅದ್ಭುತವಾದ ವರಗಳನ್ನು ಕೊಡುತ್ತಾನೆ ಮತ್ತು ಆತನು ನಮ್ಮ ಹತ್ತಿರ ಬಂದು ಹೇಳುತ್ತಾನೆ, "ಅವೆಲ್ಲವನ್ನೂ ನಾನು ಹಿಂದಕ್ಕೆ ತೆಗೆದುಕೊಳ್ಳಲು ಬಯಸುತ್ತೇನೆ– ಪ್ರತಿಯೊಂದನ್ನೂ." ನಂತರ ಆತನು ತನ್ನ ಮಿತಿಯಿಲ್ಲದ ಸಂಪನ್ಮೂಲಗಳೊಂದಿಗೆ ಇದನ್ನು ಸೇರಿಸಿ ಎಲ್ಲವನ್ನೂ ನಮಗೆ ಕೊಡುತ್ತಾನೆ.

ಶಿಷ್ಯತ್ವ ಎಂದರೆ ದೇವರ ಅಪರಿಮಿತ ಸಂಪನ್ಮೂಲಗಳನ್ನು ಹೊಂದಿಕೊಳ್ಳಲು ಬಾಗಿಲನ್ನು ತಟ್ಟುವ ಅವಕಾಶವಾಗಿದೆ. ನಮ್ಮ ಜೀವಿತವನ್ನು ಮಧ್ಯಮದರ್ಜೆಯಲ್ಲಿ ಇಡುವದಕ್ಕಿಂತ ವಿಶಿಷ್ಟವಾದದ್ದನ್ನು ನೀಡಬೇಕು. ಶಿಷ್ಯತ್ವದಲ್ಲಿ ನಾವು ದೇವರಿಗೆ ದಯೆಯನ್ನು ತೋರಿಸುವದಿಲ್ಲ. ಆತನು ನಮಗೆ ದಯೆತೋರಿಸುವವನಾಗಿದ್ದಾನೆ. ಶಿಷ್ಯರು ಈ ಮಹತ್ವದ ಕಲ್ಪನೆಯನ್ನು ಗ್ರಹಿಸಿಕೊಳ್ಳುವದು ಪ್ರಾಮುಖ್ಯವಾಗಿದೆ.

ಹೇಗಿದ್ದರೂ, ಯೇಸು ನಮಗೆ, ಯಾಕಂದರೆ ಶಿಷ್ಯತ್ವವು ನಮ್ಮಿಂದ ಬೆಲೆಯನ್ನು ನಿರೀಕ್ಷಿಸುವದಾಗಿದೆ. ಅದು ನಮ್ಮ ಜೀವಿತದ ಬೆಲೆಯಾಗಿದೆ. ಆದರೆ ಫಲಿತಾಂಶವು ಖಂಡಿತವಾಗಿಯೂ ಬೆಲೆಗಿಂತ ಹೆಚ್ಚಿನದಾಗಿರುತ್ತದೆ. ಎಷ್ಟು ದೊಡ್ಡದಾಗಿರುತ್ತದೆಂದರೆ ಯಾರಾದರೂ ಅದನ್ನು ತಳ್ಳಿಹಾಕಿದರೆ ಮೂರ್ಖರಾಗುತ್ತಾರೆ.

ಲೂಕ 14ನೇ ಅಧ್ಯಾಯದಲ್ಲಿ ಒಟ್ಟಾಗಿ ನಡೆಯೋಣ ಮತ್ತು ಶಿಷ್ಯತ್ವದ ಕೆಲವು ತತ್ವಗಳನ್ನು ಗಮನಿಸೋಣ ಯೇಸು ಈ ಶ್ರೇಷ್ಠವಾದ ಕಲ್ಪನೆಯನ್ನು ಏಕಾಗ್ರಗೊಳಿಸಿದಂತೆ.

ವಚನ 1: "ಆತನು ಸಬ್ಬತ್ ದಿನದಲ್ಲಿ ಫರಿಸಾಯರ ಮುಖ್ಯಸ್ಥರಲ್ಲಿ ಒಬ್ಬನ ಮನೆಗೆ ಊಟಕ್ಕೆ ಹೋದಾಗ ಅವರು ಆತನನ್ನು ಹೊಂಚಿನೋಡುತ್ತಿದ್ದರು." ಯೇಸು ಎಲ್ಲೆಲ್ಲಿ ಹೋಗುತ್ತಿದ್ದನೋ ಜನರ ದೃಷ್ಟಿ ಆತನ ಮೇಲೆ ಇತ್ತು. ಆತನು ಭಿನ್ನವಾಗಿದ್ದನು, ಆತನು ಹೊಸ ಮಾರ್ಗದ ಸೃಷ್ಟಿಕರ್ತನಾಗಿ ಕಂಡುಬಂದನು, ಆತನು ಹೇಳಿದನು, "ನಾನು ಅವುಗಳಿಗೆ ಜೀವ ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು." (ಯೋಹಾನ 10:10) ಎಂದು ಹೇಳಿದನು. ಅವನ ಹೇಳಿಕೆ ವಿಶಿಷ್ಟವಾಗಿದ್ದದರಿಂದ ಅವನು ಯಥಾರ್ಥವಾಗಿದ್ದಾನೋ ಏನೋ ಎಂಬುದನ್ನು ಕಂಡುಕೊಳ್ಳಲು ಆತನ ಪ್ರತಿಯೊಂದು ಚಲನವಲನವನ್ನು ವೀಕ್ಷಿಸುತ್ತಿದ್ದರು.

ರಕ್ಷಕನಿಗೆ ಯಾವುದು ಸರಿಯೆಂದು ತೋರುತಿತ್ತೋ ಅದು ಎಲ್ಲ ದೈವೀಕ ಜನರಿಗೆ ಸರಿಯೆಂದು ತೋರುತಿತ್ತು. ಕ್ರೈಸ್ತನು ಯೇಸು ಕ್ರಿಸ್ತನ ರಾಯಭಾರಿಯಾಗಿದ್ದಾನೆ. ಅವನ

ಶಿಷ್ಯರಾದ ನಾವು ನೈಜ್ಯತೆಯೊಂದಿಗೆ ಸಂಪರ್ಕವನ್ನು ಇಟ್ಟುಕೊಳ್ಳುತ್ತೇವೆ ಎಂದು ಹೇಳುತ್ತೇವೆ; ಅದೇ ರೀತಿಯಾಗಿ ಲೋಕವು ನಮ್ಮನ್ನು ಸಹ ವೀಕ್ಷಿಸುತ್ತದೆ.

ನಮ್ಮ ಕರ್ತನು ಯಾವಾಗಲೂ ತತ್ವಗಳಿಗೆ ಅನುಸಾರವಾಗಿ ನಡೆದನು, ಪರಿಸ್ಥಿತಿಗೆ ಅನುಸಾರವಾಗಿ ಅಲ್ಲ. ಆತನ ಶಿಷ್ಯರಾದ ನಾವು ಹೇಗೆ ಜೀವಿಸುತ್ತಿದ್ದೇವೆ? ಪರಿಸ್ಥಿತಿಗೆ ಅನುಗುಣವಾಗಿಯೋ ಅಥವಾ ತತ್ವಗಳಿಗೆ ಅನುಗುಣವಾಗಿಯೋ?

ನಿಮ್ಮ ಕಾರು ಹಳೆಯದಾಗಿದೆ; ವಸ್ತುಗಳು ಹಳತಾಗಿ ಹೋಗುತ್ತಿವೆ ಮತ್ತು ನಿಮಗೆ ತೊಂದರೆಯನ್ನು ನೀಡಲು ಪ್ರಾರಂಭಿಸಿವೆ. ಅದನ್ನು ವ್ಯಾಪಾರಮಾಡುವ ಸಮಯ ಈಗ ಬಂದಿದೆ ಇದರಿಂದಾಗಿ ನೀವು ಚಿರಪರಿಚಿತವಾದ ಬಂಡಿಯನ್ನು ವ್ಯಾಪಾರಿಗೆ ನೀಡಬಹುದು. ಮಾರಾಟಮಾಡುವವನು ನಿಮ್ಮ ಕಣ್ಣಿನಲ್ಲಿ ಕಣ್ಣಿಟ್ಟು ನೋಡುತ್ತಾನೆ, "ಇದರಲ್ಲಿ ಏನಾದರೂ ತೊಂದರೆ ಇದೆಯೋ?" ನಿಮಗೆ ಈಗ ತತ್ವಗಳಿಗೆ ಅನುಗುಣವಾಗಿ ಜೀವಿಸುವ ಇಲ್ಲವೇ ಪರಿಸ್ಥಿತಿಗನುಗುಣವಾಗಿ ಜೀವಿಸುವ ಆಯ್ಕೆಯಿದೆ. ನೀವು ಆತನಿಗೆ ಸತ್ಯವನ್ನು ಹೇಳುತ್ತೀರೋ ಇಲ್ಲವೇ ಸುಳ್ಳನ್ನು? ಶಿಷ್ಯರೆಂದರೆ ತನ್ನ ಜೀವಿತದ ಪ್ರತಿಯೊಂದು ಕ್ಷೇತ್ರದಲ್ಲಿ, ಪರಿಸ್ಥಿತಿ ತನ್ನ ನಡತೆಯನ್ನು ರೂಪಿಸುವದಕ್ಕೆ ಅನುಮತಿಸದೇ ಸತ್ಯವೇದವು ಯಾವುದು ಸರಿ ಎಂದು ಹೇಳುತ್ತದೋ ಅದರಂತೆ ನಿರಂತರವಾಗಿ ಜೀವಿಸುವವನಾಗಿರುತ್ತಾನೆ.

ವಚನ 2: "ಆಗ ಯೇಸು ತನ್ನೆದುರಿಗೆ ಜಲೋದರವುಳ್ಳ ಒಬ್ಬ ಮನುಷ್ಯ ಬರುವದನ್ನು ನೋಡಿದನು" ಯೇಸು ನಿರಂತರವಾಗಿ ಅವಶ್ಯಕತೆಯಿರುವವರ ಸಂಪರ್ಕದಲ್ಲಿದ್ದನು. ಅವರು ಯಾವಾಗಲೂ ಆತನ "ಎದುರಿನಲ್ಲಿದ್ದರು". ಅಪರೂಪಕೊಮ್ಮೆ ನಮ್ಮ ಕರ್ತನ ಸೇವೆಯಲ್ಲಿ ಒಬ್ಬ ವ್ಯಕ್ತಿ ಸಹಾಯವನ್ನು ಕೇಳಿಬಂದು ಹಾಗೇ ಹೊರಟುಹೋಗಿರಬಹುದು. ಯೇಸು ಸುರೋಫೋಯಿನಿಕ್ಯರವಳನ್ನು ತಿರಸ್ಕರಿಸಿದನು ಆದರೆ ಕೊನೆಗೆ ಅವಳ ಅವಶ್ಯಕತೆಗಳನ್ನು ಪೂರೈಸಿದನು.

ಶಿಷ್ಯತ್ವದ ಇನ್ನೊಂದು ದೊಡ್ಡ ತತ್ವ ನಮ್ಮ ಮುಂದೆ ಇದೆ. ಶಿಷ್ಯನು ಯಾರೆಂದರೆ ಯಾರು ಜನರೊಂದಿಗೆ ನಿರಂತರವಾಗಿ ಸಂಪರ್ಕಬೆಳೆಸುತ್ತಾರೋ ಅವರು. ಯೇಸುವಿನ ಶಿಷ್ಯರಾಗಿ ನೀವು ನಿರಂತರವಾಗಿ ಜನರ ಅವಶ್ಯಕತೆಯನ್ನು ಪೂರೈಸುತ್ತಿದ್ದೀರೋ?

ವಚನ 8–10 "ಯಾವನಾದರೂ ನಿನ್ನನ್ನು ಮದುವೆ ಊಟಕ್ಕೆ ಕರೆದರೆ ಪಂಕ್ತಿಯೊಳಗೆ ಮೊದಲನೆಯ ಸ್ಥಾನದಲ್ಲಿ ಕೂತುಕೊಳ್ಳಬೇಡ; ಒಂದುವೇಳೆ ನಿನಗಿಂತ ಮಾನವುಳ್ಳವನನ್ನು ಅವನು ಕರೆದಿರಬಹುದು, ಮತ್ತು ನಿನ್ನನ್ನೂ ಅವನನ್ನೂ ಕರೆದವನು ಬಂದು ಇವನಿಗೆ ಸ್ಥಳಬಿಡು ಎಂದು ನಿನಗೆ ಹೇಳುವಾಗ ನೀನು ನಾಚಿಕೊಂಡು ಕಡೆಯ ಸ್ಥಾನದಲ್ಲಿ ಕೂತುಕೊಳ್ಳುವದಕ್ಕೆ ಹೋಗುವಿ. ಆದರೆ ಯಾವನಾದರೂ ನಿನ್ನನ್ನು ಕರೆದಾಗ ನೀನು ಹೋಗಿ ಕಡೆಯ ಸ್ಥಾನದಲ್ಲಿ ಕೂತುಕೋ; ಹೀಗೆ ಮಾಡಿದರೆ ನಿನ್ನನ್ನು ಕರೆದವನು ಬಂದು ನಿನ್ನನ್ನು ನೋಡಿ – ಸ್ನೇಹಿತನೇ, ಇನ್ನು ಮೇಲಕ್ಕೆ ಬಾ ಅನ್ನುವನು. ಆಗ ನಿನ್ನ ಸಂಗಡ ಕೂತಿರುವವರೆಲ್ಲರ ಮುಂದೆ ನಿನಗೆ ಮಾನ ಬರುವದು."

ಯೇಸು ಒಬ್ಬ ಮುಖ್ಯ ಫರಿಸಾಯನ ಮನೆಯಲ್ಲಿದ್ದಾನೆ. ಅದು ಊಟದ ಸಮಯ, ಜನರು ಮೇಜಿನ ಸುತ್ತಲೂ ಉತ್ತಮವಾದ ಸ್ಥಾನದಲ್ಲಿ ಕುಳಿತುಕೊಳ್ಳಲು ಮೊಣಕೈಯನ್ನು ತಿವಿಯುತ್ತಾ ಮಾರ್ಗಮಾಡಿಕೊಳ್ಳುತ್ತಿದ್ದರು. ಇದನ್ನು ವೀಕ್ಷಿಸಿದ, ಆತನು ತತ್ವಗಳನ್ನು ಬೋಧಿಸಲು ಸನ್ನಿವೇಶವನ್ನು ಉಪಯೋಗಿಸುತ್ತಾನೆ.

ನೀವು ಮೇಜಿನ ಬಳಿಗೆ ಬರುವಾಗ ಗೌರವದ ಸ್ಥಾನವನ್ನು ತೆಗೆದುಕೊಳ್ಳಬೇಡಿ. ಊಟಕ್ಕೆ ಕರೆದವನು ಅತಿಥಿಯೊಂದಿಗೆ ಬರುವಾಗ ನಿಮಗೆ ಸ್ಥಳವನ್ನು ಬಿಡಲು ಕೇಳಿಕೊಳ್ಳಬಹುದು. ಅತಿಥಿಗೆ ಸಹ ನಿಮ್ಮ ಸ್ಥಳದಲ್ಲಿ ಆಸೀನನಾಗಬೇಕಾಗಿರುವದರಿಂದ ಅವನಿಗೆ ಮಜುಗರವಾಗುತ್ತದೆ; ಉಳಿದ ಎಲ್ಲಾ ಅತಿಥಿಗಳಿಗೆ ಮಜುಗರವಾಗುತ್ತದೆ ಯಾಕಂದರೆ ಅವರು ಇದಕ್ಕೆ ಸಾಕ್ಷಿಯಾಗಿರುತ್ತಾರೆ, ಮತ್ತು ನೀವು ಮಜುಗರಕ್ಕೆ ಒಳಗಾಗುತ್ತೀರಿ ಯಾಕಂದರೆ ನೀವು ಸ್ಥಳವನ್ನು ಬಿಟ್ಟುಕೊಡಬೇಕಾಗುತ್ತದೆ.

ಬದಲಾಗಿ, ಯೇಸು ಹೇಳುತ್ತಾನೆ, ನೀವು ಮೇಜಿನ ಬಳಿಗೆ ಬರುವಾಗ ಕನಿಷ್ಠವಾದ ಆಸನವನ್ನು ಹುಡುಕಿ ಕುಳಿತುಕೊಳ್ಳಿರಿ. ಊಟಕ್ಕೆ ಕರೆದವನು ಬರುವಾಗ, ನೀವು ಕನಿಷ್ಠವಾದ ಸ್ಥಳದಲ್ಲಿ ಕುಳಿತಿರುವದನ್ನು ನೋಡಿ ಅವನು ನಿಮ್ಮನ್ನು ಗೌರವದ ಸ್ಥಾನದಲ್ಲಿ ಕುಳಿತುಕೊಳ್ಳಲು ಕರೆಯುತ್ತಾನೆ. ಆತನು ನಿಮ್ಮನ್ನು ಅಲ್ಲಿಗೆ ಕಳುಹಿಸುತ್ತಿರುವ ಹಾಗೆ ಆತನು ಯೋಚಿಸುತ್ತಾನೆ, ಈತನು ಎಷ್ಟು ದೀನನಾದ ಮನುಷ್ಯನಾಗಿದ್ದಾನೆ. ನೀವು ಕನಿಷ್ಠವಾದ ಸ್ಥಾನದಿಂದ ಉತ್ತಮವಾದ ಸ್ಥಾನಕ್ಕೆ ಚಲಿಸುವಾಗ ನೀವು ಪ್ರತಿಯೊಬ್ಬರ ಮುಂದೆ ಗೌರವವನ್ನು ಹೊಂದುತ್ತೀರಿ. ಎಷ್ಟು ಮನೋಹರ! ಯೇಸು ನೀಡುವ ಸೂಚನೆಗಳು ನಿಮ್ಮ ಭಾವನೆಯಲ್ಲಿ ಕೆಟ್ಟದಕ್ಕಿಂತ ಹೆಚ್ಚಾಗಿ ಒಳ್ಳೆಯ ಫಲಿತಾಂಶವನ್ನು ತರುತ್ತವೆ.

ಶಿಷ್ಯರಿಗೆ ಒಂದು ಮಹತ್ವದ ಪಾಠ ಈ ಮೂರು ವಚನಗಳಿಂದ ಸಿಕ್ಕುತ್ತದೆ; ಕ್ರಮವಾಗಿ ದೇವರ ಆಜ್ಞೆಗಳು ಭ್ರಾಂತಿಯನ್ನು ಹುಟ್ಟಿಸುವ ಅಥವಾ ಇಚ್ಛಾನುಸಾರಿಯಾಗಿ ಅಲ್ಲ ಅವು ನಮ್ಮ ಒಳ್ಳೇದಕ್ಕಾಗಿ ರಚಿಸಲ್ಪಟ್ಟಿವೆ. ದೇವರು ಪರಲೋಕದಲ್ಲಿ ನಾನು ಸೃಷ್ಟಿಸಿದ ಈ ಜೀವಿಗಳ ಜೀವಿತವನ್ನು ಹೇಗೆ ಕಷ್ಟದಾಯಕವಾಗಿ ಮಾಡಲಿ ಎಂದು ಯೋಚಿಸುತ್ತಾ ಕುಳಿತಿಲ್ಲ ಬದಲಾಗಿ ನಾನು ನನ್ನ ಮಕ್ಕಳಿಗೆ ಪರಿಪೂರ್ಣವಾದ ಜೀವಿತವನ್ನು ಹೇಗೆ ಜೀವಿಸಬೇಕು ಎಂಬುದಕ್ಕೆ ಯಾವ ಮಾರ್ಗಸೂಚಿಯನ್ನು ನೀಡಬಹುದು ಎಂದು ಯೋಚಿಸುತ್ತಿದ್ದಾನೆ. ದೇವರ ನಿಯಮಗಳು ಮತ್ತು ಆಜ್ಞೆಗಳು ನಮ್ಮನ್ನು ತಡೆಗಟ್ಟುವದಕ್ಕಲ್ಲ ನಮಗೆ ಸಹಾಯಮಾಡುವದಕ್ಕಾಗಿ ರಚಿಸಲ್ಪಟ್ಟಿವೆ. ಅವು ನಮಗೆ ಸಂತೋಷವನ್ನು ಮತ್ತು ತೃಪ್ತಿಯನ್ನು ನೀಡುವದಕ್ಕಾಗಿವೆ. ಅವು ನಮ್ಮನ್ನು ತೊಂದರೆಯಿಂದ ಬಿಡಿಸುವದಕ್ಕಾಗಿ ಬರೆಯಲ್ಪಟ್ಟಿವೆ. ಒಂದುವೇಳೆ ಶಿಷ್ಯರು ಈ ಒಂದು ಪಾಠವನ್ನು ಕಲಿಯುವದಾದರೆ, ಜೀವಿತದ ಅನೇಕ ಸಮಸ್ಯೆಗಳು ಪರಿಹರಿಸಲ್ಪಡುತ್ತವೆ.

ವಚನ 11 "ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಅಂದನು."

ಫುಟ್‌ಬಾಲ್‌ಗೆ ತಿರುಗಿಸುವ ಬಲ ಇಮ್ಮಡಿಯಾಗಿರುವಂತೆ ದೇವರಿಗೂ ಸಹ, ಅದು ಸರಳವಾದ ಸತ್ಯದ ರೂಪದಲ್ಲಿರುತ್ತದೆ ನಮ್ಮ ಆಕಾಂಕ್ಷೆಗಳು ಮತ್ತು ಮನಸ್ಸಿನ ಇಚ್ಛೆಗಳು ತಮಷ್ಟಕ್ಕೇ ಕೆಟ್ಟವುಗಳೇನಲ್ಲ ಅವುಗಳನ್ನು ದೇವರು ಸೃಷ್ಟಿಸಿದ್ದಾನೆ. ನಾವು ಅವುಗಳನ್ನು ಸತ್ಯವೇದದ ಮಾರ್ಗದಲ್ಲಿ ತೃಪ್ತಿಪಡಿಸದೇ ಅಥವಾ ನೆರವೇರಿಸದೇ ಹೋದಾಗ ಅವು ತಪ್ಪಾಗುತ್ತವೆ.

ಉದಾಹರಣೆಗೆ, ಉನ್ನತಿಗೇರಬೇಕು ಎಂದು ಬಯಸುವದರಲ್ಲಿ ತಪ್ಪೇನಿಲ್ಲ ಅಥವಾ ಮೊದಲನೆಯವರಾಗಬೇಕೆಂಬದು ಅಥವಾ ಜೀವಿಸಬೇಕೆಂಬುದು ಅಥವಾ ಸ್ವಂತಂತ್ರರಾಗಿರಬೇಕೆಂಬುದು ಅಥವಾ ನಾಯಕರಾಗಬೇಕೆಂಬುದು ಅಥವಾ ಡಜನ್‌ಗಟ್ಟಲೇ ಇರುವ ಉದ್ದೇಶ ಮತ್ತು ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವದು ತಪ್ಪೇನಲ್ಲ. ಯೇಸು ಹೇಳುವದು ಅವುಗಳನ್ನು ಆತನ ಮಾರ್ಗದಲ್ಲಿ ತೃಪ್ತಿಪಡಿಸಿಕೊಳ್ಳಬೇಕು. ಮೊದನೆಯವರಾಗಬೇಕಾದಲ್ಲಿ ಕಡೆಯರಾಗುವದು ಪ್ರಾಮುಖ್ಯವಾಗಿದೆ. ಜೀವಿಸಬೇಕಾದರೆ

ಸಾಯುವದು ಅವಶ್ಯವಾಗಿದೆ. ಸ್ವತಂತ್ರರಾಗಿ ಜೀವಿಸುವದಕ್ಕೆ ಕ್ರಿಸ್ತನ ಸೇವಕರಾಗುವದು ಅವಶ್ಯವಾಗಿದೆ. ಹೊಂದಿಕೊಳ್ಳಬೇಕಾದರೆ ನೀಡುವದು ಅವಶ್ಯವಾಗಿದೆ. ನಾಯಕರಾಗಬೇಕಾದರೆ ಸೇವಕರಾಗುವದು ಅವಶ್ಯವಾಗಿದೆ. ಉನ್ನತಿಗೇರಬೇಕಾದರೆ ದೀನತೆಯ ಜೀವಿತವನ್ನು ಜೀವಿಸುವದು ಅವಶ್ಯವಾಗಿದೆ.

ಪ್ರತಿಯೊಬ್ಬರೂ ಜೀವಿಸಲು ಬಯಸುತ್ತಾರೆ, ಯಾರೂ ಸಾಯಲು ಬಯಸುವದಿಲ್ಲ. ಪ್ರತಿಯೊಬ್ಬರು ಸ್ವತಂತ್ರರಾಗಿರಲು ಬಯಸುತ್ತಾರೆ ಆದರೆ ಯಾರೂ ಸೇವಕರಾಗಲು ಬಯಸುವದಿಲ್ಲ. ಪ್ರತಿಯೊಬ್ಬರು ಹೊಂದಿಕೊಳ್ಳಲು ಬಯಸುತ್ತಾರೆ ಆದರೆ ಯಾರೂ ಕೊಡುವದಕ್ಕೆ ಮನಸ್ಸು ಮಾಡುವದಿಲ್ಲ. ಸಂಕ್ಷಿಪ್ತವಾಗಿ ಇಲ್ಲಿಯೇ ನಾವು ದೇವರೊಂದಿಗೆ ಘರ್ಷಣೆಯಲ್ಲಿ ಬೀಳುತ್ತೇವೆ.

ಆತನು ಲೋಕವನ್ನು ಸೃಷ್ಟಿಸಿದ್ದಾನೆ, ಆತನು ನಮ್ಮನ್ನು ಸೃಷ್ಟಿಸಿದ್ದಾನೆ. ಆತನು ಜೀವವನ್ನು ನೀಡಿದ್ದಾನೆ, ಆತನು ನಿಯಮಗಳನ್ನು ಮಾಡಿದ್ದಾನೆ ಅದರಂತೆ ನಾವು ನಮ್ಮ ಜೀವಿತವನ್ನು ಜೀವಿಸಬೇಕು. ಅನೇಕಾವರ್ತಿ ನಮಗೆ ದೇವರ ವಾಗ್ದಾನಗಳ ಫಲಿತಾಂಶಬೇಕು, ಆದರೆ ನಾವು ಬೆಲೆಯನ್ನು ತೆರಲು ಸಿದ್ದರಾಗಿಲ್ಲ. ತಂತ್ರಗಳನ್ನು ರಚಿಸುವ ನಮ್ಮ ಚಿಕ್ಕ ಮನಗಳಲ್ಲಿ, ನಾವು "ಕೊಡದೇಯಿರುವಾಗಲು ಖಂಡಿತವಾಗಿ ಹೊಂದಿಕೊಳ್ಳಲು ಸಾಧ್ಯ, ಕೊನೆಯವರಾಗದೆ ಮೊದಲನೆಯವರಾಗಲು ಸಾಧ್ಯ, ನಿಜವಾಗಿ ಸಾಯದೇ ಜೀವಿಸಲು ಸಾಧ್ಯ ಎಂದು ಯೋಚಿಸುತ್ತೇವೆ. ಆದುದರಿಂದ ಜೀವಿತವೆಂಬ ಈ ಆಟದಲ್ಲಿ ನಾವು ದೇವರ ನಿಯಮಗಳನ್ನು ಕಡಿತಗೊಳಿಸುವ ಸಾಹಸಕ್ಕೆ ಕೈ ಹಾಕುತ್ತೇವೆ. ಆದರೆ ಸತ್ಯವೇದವು ನಮಗೆ ಬೋಧಿಸುತ್ತದೆ ಏನಂದರೆ ನಾವು ನಿಯಮಗಳನ್ನು ಕಡಿತಗೊಳಿಸುವಾಗ ವ್ಯವಸ್ಥೆಯನ್ನು ನಾಶಮಾಡುತ್ತೇವೆ. ಒಬ್ಬ ವ್ಯಕ್ತಿ ಯಾವುದೇ ಮಾರ್ಗದಲ್ಲಿ ಕೊಡದೇಯಿರುವಾಗ ಹೊಂದಿಕೊಳ್ಳಲು ಮತ್ತು ಸಾಯದೇ ಇರುವಾಗ ನಿಜವಾಗಿ ಜೀವಿಸಲು ಸಾಧ್ಯವಿಲ್ಲ. ಶಿಷ್ಯನು ಈ ಶ್ರೇಷ್ಠತತ್ವವನ್ನು ಕಲಿತವನಾಗಿರುತ್ತಾನೆ ಮತ್ತು ಈ ತತ್ವಕ್ಕೆ ಅನುಗುಣವಾಗಿ ಜೀವಿಸುತ್ತಾನೆ.

ವಚನ 15–24 "ಊಟಕ್ಕೆ ಕೂತವರಲ್ಲಿ ಒಬ್ಬನು ಈ ಮಾತುಗಳನ್ನು ಕೇಳಿ – ದೇವರ ರಾಜ್ಯದಲ್ಲಿ ಊಟ ಮಾಡುವವನೇ ಧನ್ಯನು ಎಂದು ಹೇಳಲು ಯೇಸು ಅವನಿಗೆ ಹೇಳಿದ್ದೇನಂದರೆ, 'ಒಬ್ಬಾನೊಬ್ಬ ಮನುಷ್ಯನು ದೊಡ್ಡ ಅಡಿಗೆ ಮಾಡಿಸಿ ಅನೇಕರಿಗೆ ಊಟಕ್ಕೆ ಹೇಳಿಸಿದನು. ಆ ಮೇಲೆ ಊಟದ ಹೊತ್ತಿಗೆ ಅವನು ಊಟಕ್ಕೆ ಹೇಳಿಸಿ ಕೊಂಡವರ ಬಳಿಗೆ ಈಗ ಸಿದ್ಧವಾಗಿದೆ, ಬರಬೇಕು ಎಂದು ಕರೆಯುವದಕ್ಕೆ ತನ್ನ ಆಳನ್ನು ಕಳುಹಿಸಿದನು ಆದರೆ ಅವರೆಲ್ಲರು ಕ್ಷಮಿಸಬೇಕೆಂದು ಒಂದೇ ಮನಸ್ಸಿನಿಂದ ಹೇಳುವದಕ್ಕೆ ತೊಡಗಿದರು. ಮೊದಲನೆಯವನು ಆ ಆಳನ್ನು ನೋಡಿ ಹೊಲವನ್ನು ಕ್ರಯಕ್ಕೆ ತಕ್ಕೊಂಡಿದ್ದೇನೆ. ಅದನ್ನು ಹೋಗಿ ನೋಡುವದಕ್ಕೆ ನನಗೆ ಅಗತ್ಯವಿದೆ, ನನ್ನನ್ನು ಕ್ಷಮಿಸಬೇಕೆಂದು ಕೇಳಿಕೊಂಡೆನೆಂಬದಾಗಿ ಹೇಳು ಅಂದನು. ಮತ್ತೊಬ್ಬನು – ನಾನು ಐದು ಜೋಡಿ ಎತ್ತುಗಳನ್ನು ತಕ್ಕೊಂಡಿದ್ದೇನೆ ಅವುಗಳನ್ನು ಪರೀಕ್ಷಿಸುವದಕ್ಕೆ ಹೋಗುತ್ತೇನೆ ನನ್ನನ್ನು ಕ್ಷಮಿಸಬೇಕೆಂದು ಕೇಳಿಕೊಂಡನೆಂಬದಾಗಿ ಹೇಳು ಅಂದನು. ಇನ್ನೊಬ್ಬನು ನಾನು ಮದುವೆ ಮಾಡಿಕೊಂಡಿದ್ದೇನೆ, ಆದದರಿಂದ ನಾನು ಬರಲಿಕ್ಕಾಗುವದಿಲ್ಲ ಅಂದನು. ಆ ಆಳು ಬಂದು ತನ್ನ ಯಜಮಾನನಿಗೆ ಈ ಸಂಗತಿಗಳನ್ನು ತಿಳಿಸಲು ಮನೆ ಯಜಮಾನನು ಸಿಟ್ಟುಗೊಂಡು ಆಳಿಗೆ – ನೀನು ತಟ್ಟನೆ ಈ ಊರಿನ ಊನವಾದವರು ಕುರುಡರು ಕುಂಟರು, ಇಂಥವರನ್ನು ಇಲ್ಲಿಗೆ ಕರಕೊಂಡು ಬಾ ಎಂದು ಹೇಳಿದನು. ಬಳಿಕ ಆ ಆಳು ಅಯ್ಯಾ ನೀನು ಅಪ್ಪಣೆ ಕೊಟ್ಟಂತೆ ಮಾಡಿದ್ದಾಯಿತು; ಆದರೂ ಇನ್ನೂ ಸ್ಥಳವದೆ ಅಂದನು. ಆಗ ಯಜಮಾನನು ತನ್ನ ಆಳಿಗೆ ಹೇಳಿದ್ದು – ನೀನು ಹಾದಿಗಳಿಗೂ

ಬೇಲಿಗಳ ಬಳಿಗೂ ಹೋಗಿ ಅಲ್ಲಿ ಸಿಕ್ಕಿದವರನ್ನು ಬಲವಂತಮಾಡಿ ಒಳಕ್ಕೆ ಕರಕೊಂಡು ಬಾ, ನನ್ನ ಮನೆ ತುಂಬಲಿ, ಆದರೆ ಊಟಕ್ಕೆ ಹೇಳಿಸಿಕೊಂಡವರಲ್ಲಿ ಒಬ್ಬನಾದರು ನಾನು ಮಾಡಿಸಿದ ಅಡುಗೆಯ ಸವಿಯನ್ನು ನೋಡಬಾರದು ಎಂದು ನಿಮಗೆ ಹೇಳುತ್ತೇನೆ ಅಂದನು."

ಯೇಸು ಪ್ರಧಾನ ಫರಿಸಾಯನ ಮನೆಯಲ್ಲಿ ಆತನ ಅತಿಥಿಗಳೊಂದಿಗೆ ಊಟಕ್ಕೆ ಕುಳಿತಿರುವಾಗ ಕೂತೂಹಲವನ್ನು ತಾಳಲಾರದೇ ಒಬ್ಬನು ಹೇಳುತ್ತಾನೆ, "ದೇವರರಾಜ್ಯದಲ್ಲಿ ಊಟಮಾಡುವವನೇ ಧನ್ಯನು." ಆಗ ಯೇಸು ದೊಡ್ಡ ಔತಣಕೂಟದ ಸಾಮ್ಯವನ್ನು ಹೇಳಲು ಪ್ರಾರಂಭಿಸುತ್ತಾನೆ. ಸಾಮ್ಯವು ಖಂಡಿತವಾಗಿ ಪರಲೋಕರಾಜ್ಯವನ್ನು ಮತ್ತು ತಂದೆಯಾದ ದೇವರು ಮತ್ತು ಕರ್ತನಾದ ಯೇಸು ಕ್ರಿಸ್ತನೊಂದಿಗೆ ನಡೆಯುವ ಆ ದೊಡ್ಡ ಔತಣವನ್ನು ಸೂಚಿಸುತ್ತದೆ. ಯಾವನಾದರೂ ಏಕೆ ದೇವರ ಮೇಜಿನಲ್ಲಿ ಊಟಮಾಡುವದನ್ನು ತಿರಸ್ಕರಿಸುತ್ತಾನೆ? ತಮಗೆ ಯಾರು ಆಮಂತ್ರಣ ನೀಡಿದ್ದಾರೆ ಎಂಬುದನ್ನು ಅರಿಯದೇ ಇದ್ದಾಗ ಮಾತ್ರ. ಪೌಲನು ಹೇಳುವಂತೆ, "ಇದನ್ನು ಇಹಲೋಕಾಧಿಕಾರಿಗಳಲ್ಲಿ ಯಾರೂ ಅರಿಯಲಿಲ್ಲ; ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆ ಹಾಕಿಸುತ್ತಿರಲಿಲ್ಲ." (1ಕೊರಿಂಥ 2:8). ರೋಮನ್‌ರು ಮತ್ತು ಯೆಹೂದಿ ಧಾರ್ಮಿಕ ನಾಯಕರು ಯೇಸು ಕ್ರಿಸ್ತನನ್ನು ಕ್ರೂಜೆಗೆ ಹಾಕಿದರು ಯಾಕಂದರೆ ಆತನು ಯಾರಾಗಿದ್ದಾನೆ ಎಂಬುದನ್ನು ಅವರು ಅರಿತಿರಲಿಲ್ಲ. ಇಂದು ಜನರು ದೇವರನ್ನು ನಿರಾಕರಿಸುತ್ತಾರೆ ಯಾಕಂದರೆ ಅವರಿಗೆ ತಮಗೆ ಆಮಂತ್ರಣವನ್ನು ನೀಡಿದವರು ಯಾರು ಎಂಬುದು ತಿಳಿದಿಲ್ಲ.

ಪ್ರಾಮುಖ್ಯವಲ್ಲದ ಸಂಗತಿಗಳಲ್ಲಿ ಮುಳುಗಿರುವಾಗ ಪ್ರಾಮುಖ್ಯವಾದ ಸಂಗತಿಗಳು ನೆನಪಿಗೆ ಬರುವುದಿಲ್ಲ ಎಂಬುದನ್ನು ದೊಡ್ಡ ಔತಣದ ಸಾಮ್ಯವು ಪ್ರಕಟಿಸುತ್ತದೆ.

ಬಹುಶಃ ನಮ್ಮ ಕರ್ತನಾದ ಯೇಸುವು ಈ ಸಾಮ್ಯವನ್ನು ಇಂದು ಹೇಳಬೇಕಾಗಿತ್ತು. ಆತನು ಒಂದು ತುಂಡು ಭೂಮಿಯನ್ನು ತೆಗೆದುಕೊಳ್ಳುವದಕ್ಕೆ ಬದಲಾಗಿ ಕನಸಿನ ಮನೆಯನ್ನು ಕಟ್ಟುವದರ ಕುರಿತು ಮಾತನಾಡುತ್ತಾನೆ. ಐದು ಜೋಡಿ ಎತ್ತುಗಳಿಗೆ ಬದಲಾಗಿ, ವ್ಯಾಪಾರದಲ್ಲಿ ಸಾಹಸ ಅಥವಾ ಶೇರು ಮಾರುಕಟ್ಟೆ ನಡೆಸುವದರ ಕುರಿತಾಗಿ. ಆತನ ಮದುವೆಯ ಉದಾಹರಣೆ ಹಾಗೇ ಇದೆ, ಶತಮಾನಗಳಿಂದ ಮದುವೆಯ ವಿಧಾನ ಬದಲಾಗಿಲ್ಲ.

ಕ್ರೈಸ್ತರಾಗುವದಕ್ಕೆ ಕ್ರಯವಿಲ್ಲ. ವಿಶ್ವಾಸಿ ಇದಕ್ಕಾಗಿ ಏನನ್ನೂ ನೀಡಬೇಕಾಗಿಲ್ಲ, "ನಂಬಿಕೆಯ ಮೂಲಕ ಕೃಪೆಯಿಂದಲೆ ರಕ್ಷಣೆ ಹೊಂದಿದವರಾಗಿದ್ದೀರಿ ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ, ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದುದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ. (ಎಫೆಸೆ 2:8–9). ಆದರೆ ಶಿಷ್ಯರಾಗಲು ನೀಡಬೇಕಾದ ಬೆಲೆ ಇದಕ್ಕೆ ಹೊಂದಿಕೊಂಡಿದೆ. ಬೆಲೆ ಏನಂದರೆ ನಮ್ಮ ಸಂಗತಿಗಳಿಗಿಂತ ಹೆಚ್ಚಾಗಿ ದೇವರ "ಸಂಗತಿಗಳಲ್ಲಿ" ತೊಡಗಿಸಿಕೊಳ್ಳುವದು. ಕ್ರೈಸ್ತರು ತಮ್ಮ ಕನಸುಗಳಲ್ಲಿ, ತಮ್ಮ ಆಕಾಂಕ್ಷೆಗಳಲ್ಲಿ, ತಮ್ಮ ಸ್ವಂತ ಚಿಕ್ಕ ವ್ಯವಹಾರದಲ್ಲಿ ವ್ಯಸ್ತರಾಗಿದ್ದು ತಮ್ಮ ಜೀವಿತಕ್ಕೆ ದೇವರ ಪರಿಪೂರ್ಣ ಯೋಜನೆಯಿಂದ ತಪ್ಪಿಸಿಕೊಳ್ಳುತ್ತಾರೆ.

ದೇವರ ಆತ್ಮನು ವಿರಳವಾಗಿ ಒಬ್ಬ ವ್ಯಕ್ತಿಯ ಮೇಲೆ ಕೂಗಾಡುತ್ತಾನೆ. ಆತನ ಧ್ವನಿಯು ಅಂತರಂಗದ ಚುಚ್ಚುವಿಕೆಯಿಂದ ಬರುತ್ತದೆ (ವಿಶ್ವಾಸಿಗಳು ಸತ್ಯವೇದವನ್ನು ಓದುತ್ತಿರುವ ಹಾಗೆ) ಶಿಷ್ಯನಾಗಿರುವವನು ದೇವರಾತ್ಮನ ಧ್ವನಿಯೊಂದಿಗೆ ಸಾಮರಸ್ಯದಲ್ಲಿರುತ್ತಾನೆ.

ವಚನ 25: "ಬಹುಜನರು ಗುಂಪುಗುಂಪಾಗಿ ಯೇಸುವಿನ ಸಂಗಡ ಹೋಗುತ್ತಾ ಇದ್ದರು." ಯೇಸು ಕ್ರಿಸ್ತನ ಕುರಿತಾಗಿ ಉತ್ತಮವಾದ ಮಾತನ್ನು ಮಾತನಾಡುವದು ವಾಡಿಕೆಯಾಗಿದೆ. ರಾಜಕೀಯ ವ್ಯಕ್ತಿಗೆ ಒಂದುವೇಳೆ ಆತನು ತನ್ನ ಪ್ರಚಾರದಲ್ಲಿ ಸತ್ಯವೇದದ ಒಂದು ಅಥವಾ ಎರಡು ಉಲ್ಲೇಖಗಳನ್ನು ಉಪಯೋಗಿಸಿದರೆ ಹೆಚ್ಚಿನ ಮತಗಳ ಭರವಸೆ ದೊರೆಯುತ್ತದೆ. ಗಾಂಧಿ ಸಂಪ್ರದಾಯಿಕ ಹಿಂದು ಆಗಿದ್ದರೂ, ಯೇಸು ಕ್ರಿಸ್ತನ ಭಕ್ತರಾಗಿದ್ದರು. ಹೌದು, ಜನಸಮೂಹವು ಯಾವಾಗಲೂ ಯೇಸುವನ್ನು ಹಿಂಬಾಲಿಸುತಿತ್ತು. ಆದರೆ ಯೇಸು ಕ್ರಿಸ್ತನನ್ನು ಆಲಿಸಿದವರು ಯಾರು ಎಂಬುದನ್ನು ಗಮನಿಸಿರಿ. "ಯೇಸುವಿನ ಉಪದೇಶವನ್ನು ಕೇಳಬೇಕೆಂದು ಎಲ್ಲಾ ಸುಂಕದವರೂ ಪಾಪಿಗಳೂ ಆತನ ಬಳಿಗೆ ಬರುತ್ತಾ ಇದ್ದರು." (ಲೂಕ 15:1). ಜನಸಮೂಹ ಆತನನ್ನು ಹಿಂಬಾಲಿಸಿತು ಸುಂಕದವರೂ ಪಾಪಿಗಳೂ ಆತನನ್ನು ಆಲಿಸಿದರು.

ಅದು ಯಾವಾಗಲೂ ಈ ರೀತಿಯಾಗಿತ್ತು ಮತ್ತು ಬಹುಶಃ ಇದು ಯಾವಾಗಲೂ ಈ ರೀತಿಯಾಗಿ ಇರುತ್ತದೆ. ಕ್ರೈಸ್ತತ್ವ ರಕ್ಷಿಸುವ ಧರ್ಮವಾಗಿದೆ. ಇದು ಹತಾಶೆಯಲ್ಲಿರುವವರಿಗಾಗಿ ರಚಿಸಲಾಗಿದೆ. ಇದು ತಮ್ಮ ಜೀವಿತದಿಂದ ತಮ್ಮಷ್ಟಕ್ಕೆ ತಾವೇ ಹೊಂದಿಕೊಳ್ಳಾರದ ಏನಾದರು ಹೆಚ್ಚಿನದನ್ನು ಹಂಬಲಿಸುವ ಜನರಿಗಾಗಿ ಇದೆ. ಅವರು ಯೇಸು ಕ್ರಿಸ್ತನು ಏನು ಹೇಳುತ್ತಾನೋ ಅದನ್ನು ಪ್ರತಿನಿಧಿಸುವವರಾಗಿದ್ದಾರೆ. ಅವರೇ ಆತನನ್ನು "ಆಲಿಸುವವರು" ಆಗಿದ್ದಾರೆ, ಅವರು ಕೇವಲ ಆತನು ಹೇಳುವದನ್ನು ಕೇಳುವವರಲ್ಲ ಆದರೆ ಅದರಂತೆ ನಡೆಯುವವರಾಗಿದ್ದಾರೆ. ನಿಜವಾದ ಶಿಷ್ಯತ್ವಕ್ಕೆ ಅವಶ್ಯವಾಗಿರುವ ಮೂಲ ಅವಶ್ಯಕತೆಯೆಂದರೆ ಆತ್ಮದಲ್ಲಿ ಆಳವಾಗಿ ಉರಿಯುವ ವೈರಾಗ್ಯದ ಭಾವನೆ.

ವಚನ 26–33 "ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣತಮ್ಮಂದಿರು ಅಕ್ಕತಂಗಿಯರು ಇವರನ್ನೂ ತನ್ನ ಪ್ರಾಣವನ್ನು ಸಹ ಹಗೆಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು. ಯಾವನಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬಂದ ಹೊರತು ಅವನು ನನ್ನ ಶಿಷ್ಯನಾಗಿರಲಾರನು, ನಿಮ್ಮಲ್ಲಿ ಯಾವನಾದರೂ ಒಂದು ಬುರುಜನ್ನು ಕಟ್ಟಿಸಬೇಕೆಂದು ಯೋಚಿಸಿದರೆ ಅವನು ಮೊದಲು ಕೂತುಕೊಂಡು ಅದಕ್ಕೆ ಎಷ್ಟು ಖರ್ಚು ಹಿಡಿದೀತು, ಅದನ್ನು ತೀರಿಸುವದಕ್ಕೆ ಸಾಕಾಗುವಷ್ಟು ಹಣ ನನ್ನಲ್ಲಿ ಉಂಟೋ ಎಂದು ಲೆಕ್ಕಮಾಡುವದಿಲ್ಲವೆ? ಹೀಗೆ ಲೆಕ್ಕಮಾಡದೆ ಅದಕ್ಕೆ ಅಸ್ತಿವಾರ ಹಾಕಿದ ಮೇಲೆ ಆ ಕೆಲಸವನ್ನು ಪೂರೈಸಲಾರದೆ ಹೋದರೆ ನೋಡುವವರೆಲ್ಲರು, ಈ ಮನುಷ್ಯನು ಕಟ್ಟಿಸುವದಕ್ಕಂತೂ ತೊಡಗಿದನು, ಕೆಲಸ ಪೂರೈಸಲಾರದೇ ಹೋದನು ಎಂದು ಅವನನ್ನು ಹಾಸ್ಯಮಾಡಾರು. ಇಲ್ಲವೇ ಯಾವ ಅರಸನಾದರೂ ಮತ್ತು ಅರಸನ ಸಂಗಡ ಯುದ್ಧ ಮಾಡುವದಕ್ಕೆ ಹೋಗುವಾಗ ತನ್ನ ಮೇಲೆ ಇಪ್ಪತ್ತು ಸಾವಿರ ದಂಡು ತೆಗೆದುಕೊಂಡು ಬರುವವನನ್ನು ತಾನು ಹತ್ತು ಸಾವಿರ ದಂಡಿನಿಂದ ಎದುರಿಸುವದಕ್ಕೆ ಶಕ್ತನಾಗುವೆನೋ ಇಲ್ಲವೋ ಎಂದು ಕೂತುಕೊಂಡು ಅಲೋಚಿಸುವದಿಲ್ಲವೇ? ತಾನು ಶಕ್ತನಲ್ಲದಿದ್ದರೆ ಬರುವ ಅರಸನು ಇನ್ನೂ ದೂರದಲ್ಲಿರುವಾಗಲೇ ರಾಯಭಾರಿಗಳನ್ನು ಕಳುಹಿಸಿ ಸಂಧಾನಕ್ಕೆ ಒಪ್ಪಂದವನ್ನು ಕೇಳಿಕೊಳ್ಳುವನು. ಹಾಗೆಯೇ ನಿಮ್ಮಲ್ಲಿ ಯಾವನೇ ಆಗಲಿ ತನಗಿರುವದನ್ನೆಲ್ಲಾ ಬಿಟ್ಟುಬಿಡದೆ ಹೋದರೆ ಅತನು ನನ್ನ ಶಿಷ್ಯನಾಗಿರಲಾರನು."

ಈಗ ನಾವು ಕ್ರಯದ ಕುರಿತಾಗಿ ಮಾತನಾಡೋಣ. ಯೇಸು ಕ್ರಿಸ್ತನಿಗೆ ಆದ್ಯತೆಯನ್ನು ನೀಡಲು ಎಲ್ಲಾ ಬಾಧ್ಯಸ್ಥತೆಗಳನ್ನು ಸ್ವ–ಇಚ್ಛೆಯಿಂದ ತ್ಯಜಿಸುವದರಿಂದ ಪ್ರಾರಂಭವಾಗುತ್ತದೆ.

ಅರಣ್ಯಕಾಂಡ 14 ಹೀಗೆ ವರ್ಣಿಸುತ್ತದೆ ಇಸ್ರಾಯೇಲರ ಸಂತಾನದವರು 12 ಜನ ಗುಪ್ತಚಾರರು "ಅಶುಭ ಸಮಾಚಾರದೊಂದಿಗೆ" ಹಿಂತಿರುಗಿದ ನಂತರ ಕಾದೇಶನಿಂದ ವಾಗ್ದತ್ತ ದೇಶವನ್ನು ಪ್ರವೇಶಿಸಲಿಕ್ಕಿದ್ದರು. ವಾಗ್ದಾತ್ತ ದೇಶವನ್ನು ಪ್ರವೇಶಿಸಲು ಅವರು ಹೆಚ್ಚಿನ ಬೆಲೆಯನ್ನು ತೆರಬೇಕಾಗಿತ್ತು, ಯಾಕಂದರೆ ಉನ್ನತ ಪುರುಷರು ಅಲ್ಲಿ ವಾಸಿಸುತ್ತಿದ್ದರು ಅವರು ನೆಫಿಲಿಯ ವಂಶದವರು. (ಅರಣ್ಯಕಾಂಡ 13:32–33). ಒಂದು ಕ್ಷಣ ಭಯದಲ್ಲಿ, ಆ ಉನ್ನತ ಪುರುಷರು ನಮ್ಮ ಹೆಂಡತಿ ಮಕ್ಕಳನ್ನು ಕೊಲ್ಲುತ್ತಾರೆ ಎಂದು ಜನರು ಹಿಂತಿರುಗಿಹೋಗಲು ನಿರ್ಧರಿಸಿದರು.

ಅಲ್ಲಿ ಉನ್ನತ ಪುರುಷರು ಇರುವದಿಲ್ಲ ಎಂದು ದೇವರು ವಾಗ್ದಾನ ಮಾಡಿರಲಿಲ್ಲ. ಆತನು ಅವರನ್ನು ಸುರಕ್ಷಿತವಾಗಿ ವಾಗ್ದತ್ತ ದೇಶಕ್ಕೆ ಸೇರಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದೇನೆಂದು ವಾಗ್ದಾನ ಮಾಡಿದ್ದನು. ಆದರೆ ಅವರು ತಮ್ಮಲ್ಲಿರುವ ಭಯದಿಂದಾಗಿ ಇಬ್ರಿಯರು ತಮ್ಮ ಹೆಂಡತಿ ಮತ್ತು ಮಕ್ಕಳ ಹಿಂದೆ ಅಡಗಿಕೊಂಡರು. ಅಪನಂಬಿಕೆಯ ಮೊದಲನೆಯ ಸಂಕೇತ, ಕುಟುಂಬದ ಕುರಿತಾದ ನ್ಯಾಯವಲ್ಲದ ಕಳಕಳಿ.

ಯೇಸು ಕ್ರಿಸ್ತನ ಶಿಷ್ಯರಾಗಲು ನಾವು ಆತನನ್ನು ಹಿಂಬಾಲಿಸಬೇಕು ಮತ್ತು ನಾನು ನನ್ನ ತಂದೆ ನನ್ನ ತಾಯಿ, ನನ್ನ ಹೆಂಡತಿ (ಅಥವಾ ಗಂಡ), ನನ್ನ ಮಕ್ಕಳನ್ನು ಕ್ರಯವಾಗಿ ನೀಡಬೇಕಾದರೂ ನಾವು ಆತನ ಆಜ್ಞೆಗೆ ವಿಧೇಯರಾಗಬೇಕು.

ಈ ಕ್ರಯದ ಪರಿಣಾಮವಾಗಿ ಮನೆಯನ್ನು ತ್ಯಜಿಸುವದರ ಕುರಿತು ಯೇಸು ಎರಡು ಉದಾಹರಣೆಗಳನ್ನು ನೀಡುತ್ತಾನೆ, ಬುರುಜನ್ನು ಕಟ್ಟಿಸುವದು ಮತ್ತು ಯುದ್ಧಕ್ಕೆ ಸಿದ್ಧರಾಗುವದು.

ವಚನ 28 ಬುರುಜನ್ನು ಕಟ್ಟಲು ಪ್ರಾರಂಭಿಸಿ ಅದನ್ನು ತೀರಿಸದೇ ಇರುವ ಮನುಷ್ಯನ ಕುರಿತು ಮಾತನಾಡುತ್ತದೆ. ನೀವು ಎಂದಾದರೂ ಏನನ್ನಾದರೂ ಪ್ರಾರಂಭ ಮಾಡಿ ಮುಗಿಸದೇ ಹೋಗಿದ್ದೀರೋ? ನೀವು ಎಂದಾದರೂ ಯಾವದಾದರೂ ವಾಗ್ದಾನ ಮಾಡಿ ನೆರವೇರಿಸದೇ ಹೋಗಿದ್ದೀರೋ? ಹಾಗಿದ್ದಲ್ಲಿ, ಸೊಲೊಮೋನನಿಗೆ ನಿಮಗೆ ಸಮಾಲೋಚನೆ ನೀಡಲು ಒಂದು ವಾಕ್ಯವಿದೆ, "ಬಾಯಿ ದುಡುಕಬೇಡ, ದೇವರ ಮುಂದೆ ಮಾತಾಡಲು ನಿನ್ನ ಹೃದಯದಲ್ಲಿ ಅತುರಪಡದಿರು; ದೇವರು ಆಕಾಶದಲ್ಲಿದ್ದಾನಲ್ಲವೆ, ನೀನು ಭೂಮಿಯಲ್ಲಿದ್ದೀ; ಆದಕಾರಣ ನಿನ್ನ ಮಾತುಗಳು ಕೊಂಚವಾಗಿರಲಿ. ನೀನು ದೇವರಿಗೆ ಹರಿಕೆಯನ್ನು ಕಟ್ಟಿದರೆ ಅದನ್ನು ತೀರಿಸಲು ತಡಮಾಡಬೇಡ: ಆತನು ಮೂಢರಿಗೆ ಒಲಿಯನು; ನಿನ್ನ ಹರಕೆಯನ್ನು ಒಪ್ಪಿಸು. ನೀನು ಹರಿಸಿಕೊಂಡು ತೀರಿಸದೆ ಇರುವದಕ್ಕಿಂತ ಹರಕೆ ಮಾಡಿಕೊಳ್ಳದೆ ಇರುವದು ವಾಸಿ." (ಪ್ರಸಂಗಿ 5:2, 4–5)

ನಾನು ಫೋರ್ಟ್ ವರ್ತ್‌ನಲ್ಲಿ ವಾಸಿಸುತ್ತಿದ್ದಾಗ ನಾನು ಡಲ್ಲಾಸ್‌ಗೆ ಮೇಲಿಂದ ಮೇಲೆ ಭೇಟಿ ನೀಡಬೇಕಾಗುತಿತ್ತು. ನಾನು ಮುಕ್ತವಾದ ಮಾರ್ಗದಲ್ಲಿ ಪ್ರಯಾಣಿಸುತ್ತಿರುವಾಗ ಅಪೂರ್ಣವಾದ ದೊಡ್ಡ ಮನೆಯನ್ನು ನೋಡುತ್ತಿದ್ದೆ. ಕೇವಲ ಅಸ್ತಿಪಂಜರ ಮಾತ್ರವಿತ್ತು ಕೆಲವು ಕಾರಣಗಳಿಂದ ಮನೆಯನ್ನು ಕಟ್ಟುವದು ಪೂರ್ತಿಯಾಗಿರಲಿಲ್ಲ. ತಿಂಗಳುಗಳು ಉರುಳಿದವು ಆದರೆ ಆ ಕಟ್ಟಡದಲ್ಲಿ ಖಚಿತವಾದ ಯಾವ ಪ್ರಗತಿ ಕಂಡುಬರಲಿಲ್ಲ. ನಂತರ ನಾನು ಕಂಡುಕೊಂಡೆ ಏನಂದರೆ, ಒಬ್ಬ ಮನುಷ್ಯನು ಅದನ್ನು ಕಟ್ಟಲು ಪ್ರಾರಂಭಿಸಿದನು ಆದರೆ ಆತನ ಲೆಕ್ಕಾಚಾರ ತಪ್ಪಾಗಿತ್ತು ಅವನು ತನ್ನ ಎಲ್ಲಾ ಹಣವನ್ನು ಬರಿದು ಮಾಡಿಕೊಂಡಿದ್ದನು ಮತ್ತು ಆ ಮನೆಯಿಂದ ಯಾವ ಆದಾಯವು ಆತನಿಗೆ ಇರಲಿಲ್ಲ. ಅದು ಆತನ ಬಲಹೀನ ಯೋಜನೆಗೆ ಸಾಕ್ಷಿಯಾಗಿ ಸ್ಮಾರಕದೋಪಾದಿಯಲ್ಲಿ ನಿಂತಿತ್ತು.

ಯೇಸು ಇಂತಹ ವಿಧದ ಉದಾಹರಣೆಗಳ ಮೂಲಕ ಯೇಸುವಿನ ಶಿಷ್ಯರಾಗಿ ನಾವು ಯಾವುದೇ ಕಾರ್ಯಕ್ಕೆ ಸಮರ್ಪಿಸಿಕೊಳ್ಳುವಾಗ ಅದಕ್ಕೆ ತಗಲುವ ವೆಚ್ಚವನ್ನು ಎಚ್ಚರಿಕೆಯಿಂದ ಎಣಿಕೆ ಮಾಡುವದರ ಮಹತ್ವದ ಕುರಿತು ಒತ್ತು ನೀಡುತ್ತಾನೆ. ನೀವು ಅದನ್ನು ಪೂರ್ತಿಗೊಳಿಸಲು ಅಸಮರ್ಥರಾಗಿದ್ದಲ್ಲಿ ಪ್ರಾರಂಭಿಸಬೇಡಿ.

ಯೇಸು ಹೇಳಿದ್ದನ್ನು ಗಮನಿಸಿರಿ "... ಕೆಲಸ ಪೂರೈಸಲಾರದೇ ಹೋದನು" ಡಲ್ಲಾಸ್‌ನಲ್ಲಿರುವ ಗುತ್ತಿಗೆದಾರನು ತನ್ನ ಕಟ್ಟಡವನ್ನು ಪೂರ್ತಿಗೊಳಿಸಲಾರದೇ ಹೋದನು. ಹೇಗಿದ್ದರೂ ಶಿಷ್ಯರಿಗೆ, ಉದ್ದೇಶವನ್ನು ಗುರುತಿಸುವ ಸಾಮರ್ಥ್ಯವಿರಬೇಕು. ನಾವು ಶಿಷ್ಯರಾಗಿರುವ ಸಾಮರ್ಥ್ಯ ಯೇಸು ಕ್ರಿಸ್ತನ ಸಂಪನ್ಮೂಲಗಳ ಮೂಲಕ (1ಪೇತ್ರ 1:3); ನಾವು ಈ ಸೂತ್ರಕ್ಕೆ ಸೇರಿಸಬೇಕಾದ ಒಂದೇ ಅಂಶವೆಂದರೆ ನಮ್ಮ ಸ್ವ-ಇಚ್ಛೆ.

ಕರ್ತನಾದ ಯೇಸು ಕ್ರಯವನ್ನು ಎಣಿಕೆ ಮಾಡುವದರ ಕುರಿತು ಎರಡನೆಯ ಉದಾಹರಣೆಯನ್ನು ನೀಡಿದನು: ಯುದ್ಧಕ್ಕೆ ಹೋಗುವ ಅರಸನ ಉದಾಹರಣೆ. ನಮ್ಮ ವೈರಿಯನ್ನು ಯುದ್ಧಭೂಮಿಯಲ್ಲಿ ಎದುರಿಸಲು, ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕು. ನಾನು ನನ್ನಲ್ಲಿರುವ ಸಂಪನ್ಮೂಲಗಳಿಂದ ಆತನನ್ನು ಜಯಿಸಬಹುದೋ? ಎರಡನೆಯದಾಗಿ, ನಾನು ಆತನನ್ನು ಸೋಲಿಸಲು ತೊಡಗಿಸಿಕೊಂಡಿರುವಾಗ ಕ್ರಯವನ್ನು ತೆರಬೇಕಾಗುತ್ತದೋ? ಈ ಎರಡೂ ಪ್ರಶ್ನೆಗಳಿಗೆ ಉತ್ತರ ಇಲ್ಲವೆಂದಾದಲ್ಲಿ ಒಬ್ಬ ರಾಯಭಾರಿಯನ್ನು ಕಳುಹಿಸಿ ಸಮಾಧಾನದ ಒಪ್ಪಂದವನ್ನು ಮಾಡಿಕೊಳ್ಳುವದು ಲೇಸು.

ಕರ್ತನಾದ ಯೇಸು ಹೇಳುತ್ತಾನೆ, "ಓ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು." (ಮತ್ತಾಯ 16:18). ಬಲವು ರಕ್ಷಣೆಗಾಗಿ ಉಲ್ಲಂಘನೆಗಾಗಿ ಅಲ್ಲ. ಒಂದು ಜೊತೆ ಸೈನ್ಯ ಬಲದೊಂದಿಗೆ ಯುದ್ಧಕ್ಕೆ ಹೋಗುವ ಮನುಷ್ಯನ ಕುರಿತು ಎಂದಾದರೂ ಕೇಳಿದ್ದೀರೋ? ಬಲವು ವೈರಿಯನ್ನು ಹೊರಗೆ ಇಡಲು ಉಪಯೋಗಿಸಲಾಗುತ್ತದೆ. ಶಿಷ್ಯರು ಸೈತಾನನ ಸಮೂಹ ಬಲದೊಂದಿಗೆ ಹೋರಾಡಲು ಕರೆಯಲ್ಪಟ್ಟಿದ್ದಾರೆ, ಪಾತಾಳದ ಬಲವನ್ನು ಮುರಿದು ಹಾಕಲು ಮತ್ತು ಯೇಸುವಿನ ನಾಮದಲ್ಲಿ ಸೆರೆಯಲ್ಲಿರುವವರನ್ನು ಬಿಡುಗಡೆಗೊಳಿಸುವದಕ್ಕಾಗಿ ಕರೆಯಲ್ಪಟ್ಟಿದ್ದಾರೆ, ನಾವು ಇಂಥಹ ಯುದ್ಧವನ್ನು ಮಾಡುವಾಗ ಪಾತಾಳ ಲೋಕದ ಬಲ ನಮ್ಮನ್ನು ಸೋಲಿಸಲಾರದು ಎಂದು ವಾಗ್ದಾನ ಮಾಡಿದ್ದಾನೆ. ಆದರೆ ಈ ಯುದ್ಧವನ್ನು ಮಾಡಲು ಕ್ರಯ ನೀಡುವದನ್ನು ಒಳಗೊಂಡಿದೆ.

"ನೀವು ಕ್ರಯವನ್ನು ನೀಡಲು ಸಿದ್ಧರಿಲ್ಲದೇ ಹೋದರೆ" ಕರ್ತನು ಹೇಳುತ್ತಾನೆ "ನಿಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಸಮಾಧಾನದ ಒಪ್ಪಂದವನ್ನು ಮಾಡಿಕೋ." ಕ್ರೈಸ್ತರಾಗಿ ನೀವು ಸೈತಾನನ ಬಳಿಗೆ ಹೋಗಿ, "ನೋಡು ಸೈತಾನನೇ ನಾನು ಈಗಾಗಲೇ ಕ್ರೈಸ್ತನಾಗಿದ್ದೇನೆ ನಾನು ಪರಲೋಕದ ದಾರಿಯಲ್ಲಿದ್ದೇನೆ; ಆದರೆ ನಾನು ನಿನ್ನೊಂದಿಗೆ ಒಂದು ವ್ಯಾಪಾರವನ್ನು ಮಾಡಲು ಬಯಸುತ್ತೇನೆ. ನೀನು ನನ್ನನ್ನು ನನ್ನಷ್ಟಕ್ಕೇ ಬಿಟ್ಟರೆ, ನಾನು ನಿನ್ನನ್ನು ನಿನ್ನಷ್ಟಕ್ಕೆ ಬಿಡುತ್ತೇನೆ. ನಾನು ಯೇಸು ಕ್ರಿಸ್ತನ ನಿಜವಾದ ಶಿಷ್ಯನಾಗುವದಿಲ್ಲ, ಜನರ ಮೇಲೆ ನಿನಗಿರುವ ಬಂಧನಕ್ಕೆ ನಾನು ಬೆದರಿಕೆಯನ್ನು ಹಾಕುವದಿಲ್ಲ ಅಥವಾ ನಿನ್ನ ರಾಜ್ಯವನ್ನು ಆಕ್ರಮಣಮಾಡುವದಿಲ್ಲ. ಅದಕ್ಕೆ ಬದಲಾಗಿ, ನೀನು ನನಗೆ ತೊಂದರೆ ಕೊಡಬೇಡ ನಾನು ನೆಮ್ಮದಿ ಮತ್ತು ಸಮಾಧಾನದಿಂದ ಜೀವಿಸಲು ನನ್ನನ್ನು ಬಿಡು"

ಆಗ ಸೈತಾನನು ಹೀಗೆ ಹೇಳುತ್ತಾನೆ, "ಸ್ನೇಹಿತನೇ ನೀನು ನಿನಗಾಗಿ ಮಾಡಿಕೊಂಡ ವ್ಯವಹಾರದಂತೆ ಆಗಲಿ."

ಆದರೆ ಜ್ಞಾಪಕದಲ್ಲಿರಲಿ, ಸೈತಾನನು ಸುಳ್ಳುಗಾರನಾಗಿದ್ದಾನೆ ಮತ್ತು ಸುಳ್ಳಿನ ತಂದೆಯಾಗಿದ್ದಾನೆ. ಆತನು ಥಕ್ಕನೇ ತಿರುಗಿ ಬೀಳುವದಿಲ್ಲ ಎಂಬುದರ ಕುರಿತು ಯಾವ ಭರವಸೆಯೂ ಇಲ್ಲ. ಶಿಷ್ಯರಾಗಿ ಇರದೇ ಇರುವದಕ್ಕೆ ನೀವು ತೆರಬೇಕಾದ ಬೆಲೆ ಖಂಡಿತವಾಗಿ ಶಿಷ್ಯರಾಗಿ ನೀವು ತೆರಬೇಕಾದ ಬೆಲೆಗಿಂತ ಹೆಚ್ಚಾಗಿರುತ್ತದೆ.

ವಚನ 34–35 “ಉಪ್ಪಂತೂ ಒಳ್ಳೆಯ ಪದಾರ್ಥವೇ; ಉಪ್ಪು ಸಹ ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ಉಪ್ಪಿನ ರುಚಿ ಬಂದೀತು: ಅದು ಭೂಮಿಗಾದರೂ ತಿಪ್ಪೇಗಾದರೂ ಉಪಯೋಗವಲ್ಲ; ಅದನ್ನು ಹೊರಗೆ ಬಿಸಾಡುತ್ತಾರೆ. ಕೇಳುವದಕ್ಕೆ ಕಿವಿಯುಳ್ಳವನು ಕೇಳಲಿ.”

ಯೇಸು ಶಿಷ್ಯರಿಗೆ ತನ್ನ ಉಪನ್ಯಾಸವನ್ನು ಸಪ್ಪಗಾದ ಉಪ್ಪಿನ ಈ ವಿಚಿತ್ರವಾದ ಸಾಮ್ಯದೊಂದಿಗೆ ಮುಕ್ತಾಯಗೊಳಿಸುತ್ತಾನೆ. ಬಹಳ ಸಮಯದ ವರೆಗೆ ನನಗೆ ಶಿಷ್ಯರೊಂದಿಗೆ ಇರುವ ಇದರ ಸಂಬಂದದ ಕುರಿತು ಅರ್ಥವಾಗಲಿಲ್ಲ. ಒಂದು ದಿವಸ ಈ ಸಾಮ್ಯವು ಶಿಷ್ಯನಾಗಿರುವದಕ್ಕೆ ನಿರಾಕರಿಸುವ ವಿಶ್ವಾಸಿಗೆ ಸಾಮ್ಯವು ಹೋಲಿಕೆಯಾಗಿದೆ ಎಂಬುದು ನನಗೆ ತಿಳಿದುಬಂತು. ಪ್ರತಿಯೊಬ್ಬ ವಿಶ್ವಾಸಿಯು ಶಿಷ್ಯನಾಗಿರಬೇಕೆಂದು ದೇವರ ಯೋಜನೆಯಾಗಿದೆ. ಆದರ ಒಬ್ಬನು ತನ್ನ ಸರ್ಮಪಣೆಯಿಂದ ಹಿಂತಿರುಗಿ ಹೋಗುವಾಗ ಆತನು ಅಪ್ರಯೋಜಕನಾಗುತ್ತಾನೆ. ನೀವು ಆತನನ್ನು ರಕ್ಷಿಸಲು ಸಾಧ್ಯವಿಲ್ಲ; ಆತನು ಈಗಾಗಲೇ ರಕ್ಷಣೆಯನ್ನು ಹೊಂದಿದ್ದಾನೆ. ನೀವು ಆತನನ್ನು ಉಪಯೋಗಿಸಲು ಸಾಧ್ಯವಿಲ್ಲ; ಆತನು ಲಭ್ಯವಿರುವದಿಲ್ಲ. ಆತನು ಸಪ್ಪೆಯಾದ ಉಪ್ಪಾಗಿದ್ದಾನೆ. “ಮನುಷ್ಯರು ಹೊರಗೆ ಬಿಸಾಡುತ್ತಾರೆ.”

ವಾರ ವಾರವೂ ಆತನು ದೇವಾಲಯಕ್ಕೆ ಹೋಗುವದನ್ನು ನೋಡಿದರೆ, ಆತನು ಏನೆಲ್ಲದಕ್ಕೂ ಮಾದರಿಯಾಗುತ್ತಾನೆ. ನಿಮ್ಮ “ತಿಮೋಥೆಯನನ್ನು” ನೋಡಿ ನೀವು ಹೇಳಬಹುದು “ಆ ಮನುಷ್ಯನನ್ನು ನೋಡಿರಿ” ಆತನು ವಿಶ್ವಾಸಿಯಾಗಿದ್ದಾನೆ ಆದರೆ ಶಿಷ್ಯತ್ವದ ಕ್ರಯವನ್ನು ನೀಡಲು ನಿರಾಕರಿಸಿದ್ದಾನೆ. ಆ ನಿರ್ಧಾರವನ್ನು ಮಾಡುವಲ್ಲಿ, ಆತನು ತನ್ನ ಜೀವಿತವನ್ನು ಕೆಳಗಿನ ದರ್ಜೆಗೆ ಇಳಿಸಿ ಮಧ್ಯಮವರ್ಗದ ಜೀವಿತಕ್ಕೆ ತಂದಿದ್ದಾನೆ. ಮೊದಲಿನವನಾಗಬೇಕೆಂದು ಆಯ್ದುಕೊಂಡಿದ್ದೇನೆ ಎಂಬ ಭಾವನೆಯಲ್ಲಿ ಕೊನೆಯವನಾಗುವದನ್ನು ಆಯ್ದುಕೊಂಡಿದ್ದಾನೆ ಕರ್ತನಾದ ಯೇಸು ಉಪಯೋಗಿಸಿದ ಮಾತುಗಳಲ್ಲಿ ಆತನು ಸಪ್ಪೆಯಾದ ಉಪ್ಪಾಗಿದ್ದಾನೆ. ನೀವು ಏನೇ ಮಾಡಿದರೂ ಆತನಂತಾಗಬೇಡಿರಿ.”

ಮೆಕ್ಸಿಕೋ ಮೇಲೆ ಪ್ರಭುತ್ವವನ್ನು ಸ್ಥಾಪಿಸುವದಕ್ಕೆ ಪ್ರಾರಂಭಿಸಲು 700 ಜನರ ಒಂದು ಚಿಕ್ಕ ಸೈನ್ಯದೊಂದಿಗೆ 1519 ರಲ್ಲಿ ವೆರಾ ಕ್ರೂಝ್‌ನ ಕೊರ್ಟೆಝ್ ದಡವನ್ನು ಮುಟ್ಟಿದಾಗ ಅವನು ಉದ್ದೇಶಪೂರ್ವಕವಾಗಿ ತನ್ನ 11 ಹಡಗು ಪಡೆಗಳಿಗೆ ಬೆಂಕಿ ಹಚ್ಚಿದನು. ಆತನ ಜನರು ತಾವು ಹಿಂತಿರುಗಿ ಹೋಗಲು ಇರುವ ಒಂದೇ ಮಾರ್ಗ ಮೆಕ್ಸಿಕೋದ ಕೊಲ್ಲಿಯಲ್ಲಿ ಮುಳುಗಿ ಹೋಗುತ್ತಿರುವದನ್ನು ನೋಡಿದರು. ಹಿಂತಿರುಗಿ ಹೋಗಲು ಯಾವುದೇ ಮಾರ್ಗವಿಲ್ಲದ್ದರಿಂದ ಅವರು ಮುಂದೆ ಹೋಗಬೇಕಾಗಿದ್ದ ಒಂದೇ ಮಾರ್ಗವೆಂದರೆ, ಮೆಕ್ಸಿಕೋ ದೇಶದ ಒಳಗೆ ಹೋಗಿ ತಮ್ಮ ಮಾರ್ಗದಲ್ಲಿ ಬರುವ ಎಲ್ಲವನ್ನೂ ಎದುರಿಸಬೇಕು.

ಕ್ರಿಸ್ತನ ಶಿಷ್ಯರಾಗಿ ಕ್ರಯವನ್ನು ಕೊಡಬೇಕಾದರೆ ನೀವು ಸಹ ಉದ್ದೇಶಪೂರ್ವಕವಾಗಿ ಹಿಂತಿರುಗಿ ಹೋಗಲು ಇರುವ ಎಲ್ಲಾ ಮಾರ್ಗಗಳನ್ನು ನಾಶಮಾಡಬೇಕು.

ಆತನ ಹಿಂಬಾಲಕರಾಗಿ ಯಾವುದೇ ಕ್ರಯವನ್ನು ನೀಡಬೇಕಾದರೂ, ನೀವು ಅದನ್ನು ನೀಡಲು ಸಿದ್ದರಾಗಿದ್ದೀರಿ ಎಂಬುದನ್ನು ಮನಸ್ಸಿನಲ್ಲಿ ನಿರ್ಣಯಿಸಿರಿ. ಇಲ್ಲವಾದಲ್ಲಿ ನಿಮ್ಮ ರಾಯಭಾರಿಯನ್ನು ಕಳುಹಿಸಿ ಸಮಾಧಾನದ ಒಪ್ಪಂದವನ್ನು ಮಾಡಿಕೊಳ್ಳಿರಿ.



# 4. ದೇವರು ಮತ್ತು ಮನುಷ್ಯನ ಕುರಿತಾದ ಸರಿಯಾದ ದೃಷ್ಟಿಕೋನ

ಒಬ್ಬ ವ್ಯಕ್ತಿಗೆ ಇರುವ ಎಲ್ಲಾ ಸಮಸ್ಯೆಗಳು ದೇವರ ಕಲ್ಪನೆಗಳೊಂದಿಗೆ ಸಂಬಂಧವನ್ನು ಹೊಂದಿವೆ. ನಿಮಗೆ ದೊಡ್ಡ ದೇವರಿದ್ದರೆ, ನಿಮ್ಮ ಸಮಸ್ಯೆ ಚಿಕ್ಕದಾಗಿರುತ್ತದೆ. ನಿಮಗೆ ಚಿಕ್ಕ ದೇವರಿದ್ದರೆ, ನಿಮ್ಮ ಸಮಸ್ಯೆ ದೊಡ್ಡದಾಗಿರುತ್ತದೆ. ಇದು ಅದರಷ್ಟೇ ಸರಳವಾಗಿರುತ್ತದೆ. ನಿಮ್ಮ ದೇವರು ದೊಡ್ಡವನಾಗಿರುವಾಗ ಬರುವ ಎಲ್ಲಾ ಸಮಸ್ಯೆಗಳು ಅವಕಾಶವಾಗಿ ಪರಿಣಮಿಸುತ್ತವೆ. ನಿಮ್ಮ ದೇವರು ಚಿಕ್ಕವನಾಗಿರುವಾಗ, ಪ್ರತಿಯೊಂದು ಸಮಸ್ಯೆ ಅಡತಡೆಯಾಗುತ್ತದೆ.

ಪ್ರತಿಯೊಬ್ಬ ಶಿಷ್ಯನು: (1) ದೇವರು ಯಾರು ಮತ್ತು (2) ದೇವರು ಯಾರಾಗಿದ್ದಾನೆ ಎಂಬ ಸ್ಪಷ್ಟ ತಿಳುವಳಿಕೆ ಇರಬೇಕು.

ನಿಮ್ಮನ್ನು ನೀವು ತಿಳಿದುಕೊಳ್ಳುವವರೆಗೆ ದೇವರು ಯಾರಾಗಿದ್ದಾನೆ ಎಂಬುದರ ಕುರಿತು ನಿಮಗೆ ಸರಿಯಾದ ತಿಳುವಳಿಕೆ ಇರಲು ಸಾಧ್ಯವಿಲ್ಲ. ಸಂಭಾಷಣೆ ಹೇಗಿದ್ದರೂ ನಿಜವಾಗಿದೆ. ನೀವು ದೇವರು ಯಾರು ಎಂಬುದನ್ನು ನೀವು ನಿಜವಾಗಿ ತಿಳಿದುಕೊಳ್ಳುವವರೆಗೆ ನಿಮಗೆ ನಿಮ್ಮನ್ನು ಕುರಿತು ನಿಜವಾದ ತಿಳುವಳಿಕೆ ಇರಲು ಸಾಧ್ಯವಿಲ್ಲ. ಈ ಎರಡೂ ವಿಚಾರಗಳು ಪರಸ್ಪರ ಅವಲಂಬಿತವಾಗಿವೆ. ದೇವರು ಯಾರಾಗಿದ್ದಾನೆ ಮತ್ತು ನಾವು ಯಾರಾಗಿದ್ದೇವೆ ಎಂಬುದಕ್ಕೆ ಎರಡು ಪ್ರಶ್ನೆಗಳು ಉತ್ತರವನ್ನು ಕಂಡುಕೊಳ್ಳಲು ಯೆಶಾಯ 40–66 ನೋಡೋಣ. ಕೆಲವು ಸತ್ಯವೇದದ ಭಾಗಗಳನ್ನು ಪರಿಗಣಿಸೋಣ.

### ದೇವರ ಗುಣಲಕ್ಷಣ ಮತ್ತು ಸ್ವರೂಪ

ಯೆಶಾಯ 40:3–5 "ಅರಣ್ಯದಲ್ಲಿ ಯೆಹೋವನ ದಾರಿಯನ್ನು ಸರಿಪಡಿಸಿರಿ, ಅಡವಿಯಲ್ಲಿ ನಮ್ಮ ದೇವರಿಗೆ ರಾಜ ಮಾರ್ಗವನ್ನು ನೆಟ್ಟಗೆ ಮಾಡಿರಿ; ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವವು, ಎಲ್ಲಾ ಬೆಟ್ಟಗುಡ್ಡಗಳು ತಗ್ಗಿಸಲ್ಪಡುವವು, ಮಲೆನಾಡು ಬೈಲುಸೀಮೆಯಾಗುವದು, ಕೊರಕಲ ನೆಲವು ಸಮವಾಗುವದು. ಯೆಹೋವನ ಮಹಿಮೆಯು ಗೋಚರವಾಗುವದು. ಎಲ್ಲಾ ಮನುಷ್ಯರೂ ಒಟ್ಟಿಗೆ ಅದನ್ನು ಕಾಣುವರು. ಯೆಹೋವನ ಬಾಯೇ ಇದನ್ನು ನುಡಿದದೆ ಎಂದು ಒಬ್ಬನು ಕೂಗುತ್ತಾನೆ."

ಸತ್ಯವೇದವು ದೇವರು ಮಹಿಮಾತಿಶಯನಾಗಿದ್ದಾನೆ, ಸ್ವಯಂಪ್ರಕಟಿಸಿಕೊಳ್ಳುವಾತನಾಗಿದ್ದಾನೆ ಎಂದು ಬೋಧಿಸುತ್ತದೆ. ಶ್ರದ್ಧಾಭಕ್ತಿಯ ಜೀವಿತದ ಸಂಪೂರ್ಣ ಉದ್ದೇಶ ಆತನ ಸಾರ್ವಭೌಮತ್ವವನ್ನು ನೋಡುವದು ಮತ್ತು ಆತನ ಮಹಿಮೆಯಲ್ಲಿ ತಲ್ಲೀನರಾಗುವದು. ನಾವು ವಚನ 4ರಲ್ಲಿ ಓದುತ್ತೇವೆ ನಾವು ಆತನೊಂದಿಗೆ ಅನ್ಯೋನ್ಯತೆಯಿಂದ ಇರಲು ಬರುವ ಎಲ್ಲಾ ಅಡೆತಡೆಗಳನ್ನು ದೇವರು ತೆಗೆದುಹಾಕಿದ್ದಾನೆ. ದೇವರು ಸಂಬಂಧಗಳನ್ನು ಪ್ರಾರಂಭಿಸಲು ನೇತೃತ್ವವಹಿಸುವನಾಗಿದ್ದಾನೆ. ನಾವು ಆತನನ್ನು ತಿಳಿದುಕೊಳ್ಳಬೇಕೆಂಬುದು ಆತನ ವಿಚಾರವಾಗಿದೆ, ನಮ್ಮದಲ್ಲ. ಲೋಕದಲ್ಲಿರುವ ಧರ್ಮಗಳಲ್ಲಿ ಕ್ರೈಸ್ತತ್ವವು ವಿಶಿಷ್ಟವಾಗಿದೆ ಅದು ಮನುಷ್ಯನು ದೇವರನ್ನು ಹುಡುಕುವದಲ್ಲ, ದೇವರು ಮನುಷ್ಯನನ್ನು ಹುಡುಕುವವನಾಗಿದ್ದಾನೆಂಬುದನ್ನು ಒಳಗೊಂಡಿದೆ

ಯೆಶಾಯ 40:10–11 ದೇವರು! ಆಹಾ, ಕರ್ತನಾದ ಯೆಹೋವನು ಶೂರನಾಗಿ ಬರುವನು, ತನ್ನ ಭುಜಬಲದಿಂದಲೇ ಆಳುವನು; ಇಗೋ, ಆತನ ಕ್ರಿಯಾಲಾಭವು ಆತನೊಂದಿಗಿದೆ, ಆತನ ಶ್ರಮದ ಫಲವು ಆತನ ಮುಂದಿದೆ. ಆತನು ಕುರುಬನಂತೆ ತನ್ನ ಮಂದೆಯನ್ನು ಮೇಯಿಸುವನು, ಮರಿಗಳನ್ನು ಕೈಯಿಂದ ಕೂಡಿಸಿ ಎದೆಗೆತ್ತಿಕೊಳ್ಳುವನು, ಹಾಲುಕುಡಿಸುವ ಕುರಿಗಳನ್ನು ಮೆಲ್ಲಗೆ ನಡಿಸುವನು ಎಂದು ಸಾರು."

ದೇವರ ಬಲ ಮತ್ತು ಅಧಿಕಾರ ಒಂದು ಕೈಯಲ್ಲಿ ಮತ್ತು ಆತನ ಮೀತಿಮೀರಿದ ಸಭ್ಯತೆ ಇನ್ನೊಂದು ಕೈಯಲ್ಲಿರುವ ಸಮಾನತೆಯ ಸೂಕ್ಷ್ಮತೆಯನ್ನು ಗಮನಿಸಿರಿ. ನಮ್ಮ ದೇವರು ಬಲಶಾಲಿಯಾದ ದೇವರಾಗಿದ್ದಾನೆ. ಆತನಿಂದಲೇ ಎಲ್ಲವೂ ಸೃಷ್ಟಿಸಲ್ಪಟ್ಟವು (ಯೆಶಾಯ 40:26,28 ನೋಡಿರಿ). ಕೀರ್ತನೆಗಾರನು ಹೇಳುತ್ತಾನೆ, "ಯೆಹೋವನ ಅಪ್ಪಣೆಯಿಂದಲೇ ಆಕಾಶವು ಉಂಟಾಯಿತು. ಅದರಲ್ಲಿರುವದೆಲ್ಲವೂ ಆತನ ಶ್ವಾಸದಿಂದ ನಿರ್ಮಿತವಾಯಿತು." (ಕೀರ್ತನೆ 33:6) ವಿಜ್ಞಾನವು ಶಕ್ತಿಯಿಂದಲೇ ಎಲ್ಲಾ ವಸ್ತುಗಳು ಉಂಟಾದವು ಎಂದು ಹೇಳುತ್ತದೆ. ದೇವರು ಲೋಕವನ್ನು ಕೇವಲ ತನ್ನ ಮಾತಿನಿಂದ ಉಂಟು ಮಾಡಿದನು. ಆತನ ವಾಕ್ಯಕ್ಕೆ ಸೃಜನಾತ್ಮಕ ಬಲವಿದೆ.

ಯೇಶಾಯ 40:11 ರಲ್ಲಿರುವ ಉದಾಹರಣೆಯು ಕುರುಬನು ತನ್ನ ಕುರಿ ಮಂದೆಯನ್ನು ಕಾಯುವದಾಗಿದೆ ಅದು ದೇವರು ಎರಡು ಸಂಗತಿಗಳನ್ನು ಮಾಡಲಿಕ್ಕಿದ್ದಾನೆ ಎಂಬುದನ್ನು ಬೋಧಿಸುತ್ತದೆ – ನಮ್ಮನ್ನು ಮೇಯಿಸುವದು ಮತ್ತು ನಡೆಸುವದು. ಆತನು ನಮ್ಮ ಎಲ್ಲಾ ಅವಶ್ಯಕತೆಗಳನ್ನು ತನ್ನ ಜವಾಬ್ದಾರಿಯಾಗಿ ಮಾಡಿಕೊಂಡಿದ್ದಾನೆ. ಅದರಂತೆ ನಮಗೆ ಮಾರ್ಗದರ್ಶನವನ್ನು ನೀಡಲು ನಮ್ಮ ಭಾರಗಳನ್ನೂ ಸಹ ತನ್ನ ಜವಾಬ್ದಾರಿಯಾಗಿ ಮಾಡಿಕೊಂಡಿದ್ದಾನೆ.

ಯೆಶಾಯ 40:13–14, "ಯೆಹೋವನ ಆತ್ಮಕ್ಕೆ ಯಾವನು ವಿಧಿಯನ್ನು ನೇಮಿಸಿದನು? ಯಾವನು ಆಲೋಚನಾ ಕರ್ತನಾಗಿ ಆತನಿಗೆ ಉಪದೇಶಿಸಿದನು? ಆತನು ಯಾವನ ಆಲೋಚನೆಯನ್ನು ಕೇಳಿದನು: ಯಾವನು ಆತನಿಗೆ ಬುದ್ಧಿಕಲಿಸಿ ನ್ಯಾಯಮಾರ್ಗದಲ್ಲಿ ನಡೆಯಿಸಿದನು? ಯಾವಾಗ ಆತನಿಗೆ ಜ್ಞಾನವನ್ನು ಬೋಧಿಸಿ ವಿವೇಕ ಮಾರ್ಗವನ್ನು ತೋರಿಸಿದನು?"

ಈ ಪ್ರಶ್ನೆಗಳು ಅಲಂಕಾರಿಕವಾಗಿ ತೋರಿಬರುತ್ತವೆ, ಉತ್ತರ ಖಂಡಿತವಾಗಿಯೂ ಯಾರೊಬ್ಬರಿಲ್ಲ. ಯಾಕೆ ಯಾರೊಬ್ಬರೂ ದೇವರ ಸಮಾಲೋಚಕರಾಗಿಲ್ಲ? ಅಥವಾ ಆತನಿಗೆ ಹೋಗಬೇಕಾದ ಮಾರ್ಗವನ್ನು ತೋರಿಸಿದವರು ಯಾರೂ ಇಲ್ಲವೇ? ಸರಳವಾಗಿ ಹೇಳಬೇಕೆಂದರೆ ಆತನಿಗೆ ಕೇಳಬೇಕಾದ ಅವಶ್ಯಕತೆಯೇ ಬರಲಿಲ್ಲ ಆತನು ತಾನೇ ಹೇಳಿದ್ದಾನೆ, ನಾನೇ ದೇವರು, ಇನ್ನು ಯಾರೂ ಅಲ್ಲ; ನಾನೇ ಪರಮದೇವರು ನನಗೆ ಸರಿಸಮಾನರಿಲ್ಲ, ಆರಂಭದಲ್ಲಿಯೇ ಅಂತ್ಯವನ್ನು ತಿಳಿಸುತ್ತೇನೆ ಮತ್ತು ಪ್ರಾಚೀನ ಕಾಲದಿಂದಲೂ ಇನ್ನೂ ಸಂಗತಿಗಳು ನಿರ್ಮಾಣವಾಗುವದಕ್ಕಿಂತ ಪೂರ್ವದಲ್ಲಿ, ಹೇಳುತ್ತಾನೆ, "ನನ್ನ ಸಂಕಲ್ಪವು ನಿಲ್ಲುವದು, ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು." (ಯೆಶಾಯ 46:9–10)

*ಯೆಶಾಯ 40:15–17* ಆಹಾ, ಆತನ ಗಣನೆಯಲ್ಲಿ ಜನಾಂಗಗಳು ಕಪಿಲೆಯಿಂದುದುರುವ ತುಂತುರಿನಂತೆಯೂ ತ್ರಾಸಿನ ತಟ್ಟೆಯ ಧೂಳಿನ ಹಾಗೂ ಇರುತ್ತವೆ; ಇಗೋ, ದ್ವೀಪಗಳನ್ನು ಅಣುರೇಣುವಿನಂತೆ ಎತ್ತುತ್ತಾನೆ (ಆತನಿಗರ್ಪಿಸತಕ್ಕ) ಹೋಮಕ್ಕೆ ಲೆಬನೋನಿನ ಪಶುಗಳು ಸಾಲವು, ಅಲ್ಲಿನ ವನವು ಸಮಿತ್ತಿಗೆ ಸಾಲದು. ಸಕಲ

ಜನಾಂಗಗಳು ಆತನ ದೃಷ್ಟಿಯಲ್ಲಿ ಏನೂ ಇಲ್ಲದಂತಿವೆ, ಅವು ಆತನ ಎಣಿಕೆಯಲ್ಲಿ ಶುದ್ಧಶೂನ್ಯವೇ."

ಇದು ಲೋಕವನ್ನು ಸರಿಯಾದ ದೃಷ್ಟಿಕೋನದಲ್ಲಿ ಇಡುತ್ತದೆ. ತಪ್ಪಾದ ಸಂಗತಿಗಳನ್ನು ನೋಡಿ ಅಧೈರ್ಯಪಡುವದು ಸರಳ. ಮನುಷ್ಯ ಕುಲದ ದುಷ್ಟತನ, ಕೆಟ್ಟತನಕ್ಕೆ ಸುಲಭವಾಗಿ ಬಿದ್ದುಹೋಗುವುದು, ನಮ್ಮನ್ನು ನಾವು ನಿಯಂತ್ರಿಸಿಕೊಳ್ಳುವದರಲ್ಲಿ ಅಸಮರ್ಥತತೆ, ಹೆಚ್ಚುತ್ತಿರುವ ತಂತ್ರಜ್ಞಾನ ತಂದಿರುವ ಸಮಸ್ಯೆಗಳು – ಇವೆಲ್ಲವುಗಳು ಅನೇಕ ಜನರನ್ನು ಸಂದೇಹಪಡುವವರನ್ನಾಗಿ ಮತ್ತು ಕಹಿಭಾವನೆಯುಳ್ಳವರನ್ನಾಗಿ ಮಾಡಿವೆ.

ಅದು ಯುದ್ಧವಾಗಿರದಿದ್ದಲ್ಲಿ, ಅದು ಅಪರಾಧವಾಗಿದೆ. ಅದು ಅಪರಾಧವಾಗಿರದೇ ಇದ್ದಲ್ಲಿ, ಅದು ಕಳಂಕವಾಗಿದೆ, ನಂತರ ಆದು ಪ್ರಕೃತಿ ವಿಕೋಪವಾಗಿದೆ. ಯಾವಾಗಲೂ ಅನೀತಿಯಾಗಿದೆ.

ಲೋಕದ ಬಲಗಳಾಗಲಿ, ಆರ್ಥಿಕ, ರಾಜಕೀಯ ನಾಯಕರುಗಳಾಗಲಿ ಅಥವಾ ತತ್ವಶಾಸ್ತ್ರಕ್ಕೆ ಸಂಬಂಧಿಸಿದವುಗಳಾಗಲಿ ಮನುಷ್ಯನ ಭವಿಷ್ಯವನ್ನು ರೂಪಿಸುವದಿಲ್ಲ. ದೇವರು ಹೇಳುತ್ತಾನೆ ಬಲಿಷ್ಟವಾದ ದೇಶಗಳು ಸಹ ಬಕೆಟ್‌ನಲ್ಲಿರುವ ಒಂದು ಹನಿನೀರಿಗೆ ಸಮಾನ ಮತ್ತು ತಕ್ಕಡಿಯಲ್ಲಿರುವ ತಟ್ಟೆಯಲ್ಲಿರುವ ಧೂಳಿನಂತೆ ನಿಷ್ಪ್ರಯೋಜಕವಾಗಿವೆ. ಆತನು ನಿಯಂತ್ರಣದಲ್ಲಿದ್ದಾನೆ!

*ಯೆಶಾಯ 40:28* "ನೀನು ಗ್ರಹಿಸಲಿಲ್ಲವೋ? ಯೆಹೋವನು ನಿರಂತರ ದೇವರೂ ಭೂಮಿಯ ಕಟ್ಟಕಡೆಗಳನ್ನು ನಿರ್ಮಿಸಿದವನೂ ಆಗಿದ್ದಾನೆ; ಆತನು ದಣಿದು ಬಳಲುವದಿಲ್ಲ; ಆತನ ವಿವೇಕವು ಪರಿಶೋಧನೆಗೆ ಅಗಮ್ಯ." ತಂದೆಯಾದ ದೇವರು ಎಂದಿಗೂ ದಣಿದು ಬಳಲುವದಿಲ್ಲ ಆತನ ಯೋಚನೆಗಳು ಮುಗಿದುಹೋಗುವದಿಲ್ಲ, ಏನು ಮಾಡಬೇಕು ಅಥವಾ ಎಲ್ಲಿಗೆ ಹೋಗಬೇಕು ಎಂಬುದರಲ್ಲಿ ಆತನು ಎಂದಿಗೂ ವಿಫಲನಾಗುವದಿಲ್ಲ. ಆತನು ಪರಿಪೂರ್ಣವಾಗಿ ಮತ್ತು ಸಂಪೂರ್ಣ ನಿಯಂತ್ರಣದಲ್ಲಿದ್ದಾನೆ. ಆತನು ತಪ್ಪು ಮಾಡುವವನಲ್ಲ. ನಾವು ಇದನ್ನು ನಂಬುವದಾದರೆ, ನಮ್ಮ ಜೀವಿತದಲ್ಲಿರುವ ಬಹಳ ಸಮಸ್ಯೆಗಳು ಪರಿಹಾರವಾಗುತ್ತವೆ.

ಕೇವಲ ಇಬ್ಬರು ವ್ಯಕ್ತಿಗಳು ನಿಮಗೆ ನೋವನ್ನುಂಟುಮಾಡಬಹುದು – ನೀವು ಮತ್ತು ದೇವರು, ಸೈತಾನನು ನಿಮಗೆ ನೋವನ್ನುಂಟು ಮಾಡಲು ಸಾಧ್ಯವಿಲ್ಲ. ಈ ಸತ್ಯವು ಯೋಬನ ಪುಸ್ತಕದಲ್ಲಿ ಸ್ಪಷ್ಟವಾಗಿ ತಿಳಿದುಬರುತ್ತದೆ. ನಾವು ದೇವರ ಮತ್ತು ಸೈತಾನನ ಮಧ್ಯದಲ್ಲಿ ನಡೆದ ಸಂಭಾಷಣೆಯನ್ನು ಓದಿದ್ದೇವೆ (ಯೋಬನ ಪುಸ್ತಕ 1ನೇ ಅಧ್ಯಾಯವನ್ನು ನೋಡಿರಿ), ಅದರಲ್ಲಿ ಸೈತಾನನು ಹೇಳುತ್ತಾನೆ ಅವನು ಯೋಬನನ್ನು ಮುಟ್ಟಲು ಸಾಧ್ಯವಿಲ್ಲ ಯಾಕಂದರೆ ದೇವರು ಅವನ ಸುತ್ತಲೂ "ಬೇಲಿಯನ್ನು" ಹಾಕಿದ್ದಾನೆ. ಇದು ಎಲ್ಲಾ ವಿಶ್ವಾಸಿಗಳ ವಿಷಯದಲ್ಲಿ ಸತ್ಯವಾಗಿದೆ. ಸೈತಾನನು ದೈವೀಕ ಅಪ್ಪಣೆಯಿಲ್ಲದೆ ಆತನನ್ನು ಮುಟ್ಟಲು ಸಾಧ್ಯವಿಲ್ಲ.

ಸತ್ಯವೇದದಲ್ಲಿರುವ ಸುಂದರವಾದ ವೇದಭಾಗವು ಯಾವುದೆಂದರೆ ದೇವರು ನಮ್ಮ ವಿಷಯದಲ್ಲಿ ಉತ್ತಮವಾದ ಯೋಚನೆಯನ್ನು ತನ್ನ ಹೃದಯದಲ್ಲಿ ಹೊಂದಿದ್ದಾನೆ. ಆತನು ನಮಗೆ ನೋವನ್ನುಂಟು ಮಾಡಲು ಬಯಸುವದಿಲ್ಲ. ಆತನು ನಮ್ಮ ಕುರಿತಾಗಿ ಒಳ್ಳೇದನ್ನೇ ಯೋಚಿಸುತ್ತಾನೆ. ಆತನು ನಮ್ಮಲ್ಲಿ ಪ್ರತಿಯೊಬ್ಬರಿಗಾಗಿ ಒಳ್ಳೇದನ್ನೇ ಬಯಸುತ್ತಾನೆ. ಆದುದರಿಂದ ದೇವರು ತನ್ನನ್ನು ತಾನು ಅಷ್ಟಕ್ಕೆ ಸೀಮಿತಗೊಳಿಸಿದ್ದಾನೆ

ಆತನು ನಮಗೆ ಮಾಡಿದ ವಾಗ್ದಾನದಿಂದಾಗಿ ನಮಗೆ ನೋವನ್ನುಂಟು ಮಾಡಲು ಸಾಧ್ಯವಿಲ್ಲ.

ಆದುದರಿಂದ ಈ ಕ್ಷೇತ್ರವನ್ನು ಸಂಕುಚಿತಗೊಳಿಸುತ್ತಾನೆ. ನಿಮ್ಮ ಜೀವಿತವನ್ನು ಹಾಳು ಮಾಡಿಕೊಳ್ಳುವ ಏಕೈಕ ವ್ಯಕ್ತಿ ಎಂದರೆ ನೀವೇ – ಬೇರೆ ಯಾರೂ ಅಲ್ಲ. ಇತರರು ದೇವರ ಅನುಮತಿಯಿಲ್ಲದೆ ಖಂಡಿತವಾಗಿ ನಿಮಗೆ ನೋವನ್ನುಂಟುಮಾಡಲು ಸಾಧ್ಯವಿಲ್ಲ. ಒಂದು ವೇಳೆ ಇದು ಸರಿಯಲ್ಲ ಎಂದಾಗಿದ್ದಲ್ಲಿ, ಇದರ ಅರ್ಥ ದೇವರು ತನ್ನ ಜನರ ಭವಿಷ್ಯತ್ತಿನ ಮೇಲೆ ನಿಯಂತ್ರಣವನ್ನು ಹೊಂದಿಲ್ಲ ಎಂದು ಅರ್ಥ. ಹಾಗಿದ್ದಲ್ಲಿ ನಾವು ಹಾಸ್ಯಾಸ್ಪದವಾದ ಸನ್ನಿವೇಶದಲ್ಲಿರುತ್ತೇವೆ, ದೇವರು ಪರಲೋಕದಲ್ಲಿ ತನ್ನ ಕೈಯನ್ನು ಬೀಸುತ್ತಾ, "ನನ್ನ ಸೇವಕನು ಖಂಡಿತವಾಗಿ ವಾಹನ ಅಪಘಾತಕ್ಕೆ ಒಳಗಾಗುವದಿಲ್ಲ ಇಲ್ಲವೇ ವಿಮಾನ ಅಪಘಾತಕ್ಕೆ ಒಳಗಾಗುವದಿಲ್ಲ" ಎಂದು ಹೇಳುತ್ತಿರುವಂತೆ ದೇವರನ್ನು ಚಿತ್ರಿಸಿಕೊಳ್ಳುತ್ತೇವೆ.

ನಿಮ್ಮ ಜೀವವನ್ನು ಯಾರೂ ಮುಟ್ಟಲೂ ಸಾಧ್ಯವಿಲ್ಲ ಮತ್ತು ಸತ್ಯವೇದವು ಒಬ್ಬ ವ್ಯಕ್ತಿಗೆ ತನ್ನನ್ನು ತಾನು ನಾಶಮಾಡಿಕೊಳ್ಳುವದು ಸಾಧ್ಯವಿದೆ ಎಂದು ಬೋಧಿಸುತ್ತದೆ. ನೀವೇ ನಿಮ್ಮ ಕೆಟ್ಟ ವೈರಿಯಾಗಿದ್ದೀರಿ. ಆದರೆ ನೀವು ನಂಬಿಕೆ ಮತ್ತು ವಿಧೇಯತೆಯಲ್ಲಿ ನಡೆಯುತ್ತಿದ್ದಲ್ಲಿ ಮತ್ತು ದೇವರು ತಾನು ಯಾರಾಗಿದ್ದಾನೆ ಎಂದು ಹೇಳುವ ಹಾಗೆ ಇದ್ದಲ್ಲಿ, ನಿಮ್ಮ ಜೀವಿತವನ್ನು ಯಾರೂ ನಾಶಮಾಡಲು ಸಾಧ್ಯವಿಲ್ಲ; ಯಾರೂ ನಿಮ್ಮನ್ನು ದೇವರ ಪರಿಪೂರ್ಣವಾದ ಚಿತ್ತದಿಂದ ತಪ್ಪಿಸಿಕೊಳ್ಳುವಂತೆ ಮಾಡಲು ಸಾಧ್ಯವಿಲ್ಲ.

*ಯೆಶಾಯ 42:1–4* "ಇಗೋ, ನನ್ನ ಸೇವಕನು! ಇವನಿಗೆ ನಾನೇ ಆಧಾರ; ಇವನು ನನಗೆ ಇಷ್ಟನು; ನನ್ನ ಪ್ರಾಣಪ್ರಿಯನು, ಇವನಲ್ಲಿ ನನ್ನ ಆತ್ಮವನ್ನು ಇರಿಸಿದ್ದೇನೆ' ಇವನು ಅನ್ಯ ಜನಗಳಲ್ಲಿಯೂ ಸದ್ಧರ್ಮವನ್ನು ಪ್ರಚುರ ಪಡಿಸುವನು. ಇವನು ಕೂಗಾಡುವದಿಲ್ಲ. ಅರ್ಭಟಿಸುವದಿಲ್ಲ, ಬೀದಿಗಳಲ್ಲಿ ಇವನ ಧ್ವನಿಯೇ ಕೇಳಿಸುವದಿಲ್ಲ. ಜಜ್ಜಿದ ದಂಟನ್ನು ಮುರಿದು ಹಾಕದೆ ಕಳೆಗುಂದಿದ ದೀಪವನ್ನು ನಂದಿಸದೆ ಸದ್ಧರ್ಮವನ್ನು ಪ್ರಚುರಪಡಿಸಿ ಸಿದ್ಧಿಗೆ ತರುವನು. ಲೋಕದಲ್ಲಿ ಸದ್ಧರ್ಮವನ್ನು ಸ್ಥಾಪಿಸುವ ತನಕ ಇವನು ಕಳೆಗುಂದದೆಯೂ ಜಜ್ಜಿಹೋಗದೆಯೂ (ತನ್ನ ಕಾರ್ಯದಲ್ಲಿ ನಿರತನಾಗಿರುವನು). ದ್ವೀಪದ್ವೀಪಾಂತರಗಳು ಇವನ ಧರ್ಮಪ್ರಮಾಣಕ್ಕೆ ಕಾದಿರುವವು."

ಈ ವೇದಭಾಗವು ಯೇಸು ಕ್ರಿಸ್ತನ ಕುರಿತಾದ ಪ್ರವಾದನೆಯಾಗಿದೆ. ಯೇಸು ನ್ಯಾಯತೀರ್ಪು ತನ್ನದು ಎಂದು ಹೇಳುತ್ತಾನೆ (ಯೋಹಾನ 5:22–23 ನೋಡಿರಿ). ಆತನು ನೀಡುವ ನ್ಯಾಯತೀರ್ಪು ಸತ್ಯಕ್ಕನುಗುಣವಾಗಿದೆ, ಮತ್ತು ಅದು ಸಂಪೂರ್ಣವಾಗಿ ಆತನೊಂದಿಗೆ ಸ್ಥಿರವಾಗಿದೆ. ಆತನು ಲೋಕದಲ್ಲಿರುವ ಅನ್ಯಾಯವನ್ನು ನೋಡಿ ಅಧೈರ್ಯಪಡುವದಿಲ್ಲ ಅಥವಾ ಸುಲಭವಾಗಿ ಅಂಜುವದಿಲ್ಲ ಎಂದು ನಾವು ಈಗಾಗಲೇ ನೋಡಿದ್ದೇವೆ. ನಮ್ಮ ದೇವರು ನ್ಯಾಯವನ್ನು ಸ್ಥಾಪಿಸುವವನಾಗಿದ್ದಾನೆ ಮತ್ತು ಭೂಮಿ ಎಂಬ ಈ ಗ್ರಹದ ಮೇಲೆ ಸಮಾನತೆಯನ್ನು ತರುವವನಾಗಿದ್ದಾನೆ.

*ಯೆಶಾಯ 42:8* "ನಾನೇ ಯೆಹೋವನು; ಇದೇ ನನ್ನ ನಾಮವು; ನನ್ನ ಮಹಿಮೆಯನ್ನು ಮತ್ತೊಬ್ಬನಿಗೆ ಸಲ್ಲಗೊಡಿಸೆನು, ನನ್ನ ಸ್ತೋತ್ರವನ್ನು ವಿಗ್ರಹಗಳ ಪಾಲು ಮಾಡೆನು." ದೇವರು ಮೇಲಿಂದ ಮೇಲೆ ನಮಗೆ ಆತನು ತನ್ನ ಮಹಿಮೆಯನ್ನು ಮತ್ತೊಬ್ಬನೊಂದಿಗೆ ಹಂಚಿಕೊಳ್ಳುವದಿಲ್ಲ ಎಂಬುದನ್ನು ಜ್ಞಾಪಿಸುತ್ತಾನೆ. ಪೌಲನು ಸಹ ಕೊರಿಂಥದವರಿಗೆ ಬರೆಯುವಾಗ ಇದನ್ನೇ ಹೇಳುತ್ತಾನೆ, ದೇವರರಾಜ್ಯದಲ್ಲಿ ಜ್ಞಾನಿಗಳು ಅನೇಕರಿಲ್ಲ ಮತ್ತು ಕುಲೀನರೂ ಅನೇಕರಿಲ್ಲ (1ಕೊರಿಂಥ 1:26–29 ನೋಡಿರಿ) ಬದಲಾಗಿ ದೇವರ

ಮಹಿಮೆಗಾಗಿ ಉಪಯೋಗಿಸಲ್ಪಡಲು ದೇವರು ಬುದ್ಧಿಹೀನರಿಗೆ ಮತ್ತು ಬಲಹೀನರಿಗೆ ಜ್ಞಾನವನ್ನು ಕೊಡುತ್ತಾನೆ.

ಯೆಹೂದಿ ನಾಯಕರು ಪೇತ್ರ ಮತ್ತು ಯೋಹಾನರನ್ನು ಅಶಿಕ್ಷಿತರು ಮತ್ತು ಅಜ್ಞಾನಿಗಳು ಎಂದು ಕರೆಯುತ್ತಿದ್ದರು (ಅ.ಕೃ. 4:13), ಆದಾಗ್ಯೂ, ಅಶಿಕ್ಷಿತರು, ಅಜ್ಞಾನಿಗಳು ಆದ ಈ ಬೆಸ್ತರು ಹೊಸ ಒಡಂಬಡಿಕೆಯ ಏಳು ಪುಸ್ತಕಗಳನ್ನು ಬರೆದರು. ಈ ಏಳು ಪುಸ್ತಕಗಳು ಎಷ್ಟು ಅಗಾಧವಾಗಿವೆಯೆಂದರೆ ಶತಮಾನಗಳಿಂದ ದೊಡ್ಡ ಪಂಡಿತರು ಸಹ ಇದರ ಆಳವನ್ನು ಅಳತೆಮಾಡಲು ಆಗಿಲ್ಲ.

*ಯೆಶಾಯ 43:11–13:* ನಾನೇ, ನಾನೇ, ಯೆಹೋವನು; ನಾನು ಹೊರತು ಯಾವ ರಕ್ಷಕನೂ ಇಲ್ಲ. ನಾನೇ ರಕ್ಷಣೆಯನ್ನು ಮುಂತಿಳಿಸಿ ನೆರವೇರಿಸಿ ಪ್ರಕಟಿಸಿದ್ದೇನೆ, ನಿಮ್ಮಲ್ಲಿ ಅನ್ಯ ದೇವರು ಯಾರೂ ಇರಲಿಲ್ಲವಲ್ಲ; ಹೌದು, ಇಂದಿನಿಂದ ನಾನೇ ಪರಮಾತ್ಮನು; ನನ್ನ ಕೈಯಿಂದ ಬಿಡಿಸಬಲವರು ಯಾರೂ ಇಲ್ಲ; ನನ್ನ ಕೆಲಸಕ್ಕೆ ಯಾರು ಅಡ್ಡ ಬಂದಾರು? ಎಂಬದೇ ಯೆಹೋವನ ಮಾತು.”

ಸತ್ಯವೇದವು ದೇವರು ಮನುಷ್ಯನ ರಕ್ಷಕನು ಎಂಬುದನ್ನು ಬೋಧಿಸುತ್ತದೆ. ಆತನು ಮತ್ತು ಆತನು ಮಾತ್ರ ರಕ್ಷಿಸಬಲ್ಲನು. ಅದೇ ರೀತಿಯಾಗಿ, ಆತನೇ ನಮ್ಮ ಭದ್ರತೆಯಾಗಿದ್ದಾನೆ. ಆತನು ಇಲ್ಲಿ ಹೇಳುತ್ತಿರುವದೇನಂದರೆ, “ನನ್ನನ್ನು ಬಿಟ್ಟರೆ ನಿಮಗೆ ಯಾವ ಭದ್ರತೆಯಿಲ್ಲ.” ನಮ್ಮ ಸರಕಾರವು ತಮ್ಮ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಿಂದ ನಾಗರಿಕರಿಗೆ ಭದ್ರತೆಯನ್ನು ನೀಡಲು ಪ್ರಯತ್ನಿಸುತ್ತದೆ. ಸಂಸ್ಥೆಗಳು ಪಿಂಚಣಿ ಯೋಜನೆಯ ಮೂಲಕ, ವೈದ್ಯಕೀಯ ಕಾರ್ಯಕ್ರಮಗಳು, ವೇತನದಲ್ಲಿ ಹೆಚ್ಚಳ, ಉತ್ತಮವಾದ ಉದ್ಯೋಗಾವಕಾಶಗಳು, ಮತ್ತು ಶೇರಿನ ಆಯ್ಕೆಗಳನ್ನು ವಾಗ್ದಾನ ಮಾಡುವದರ ಮೂಲಕ ಕಾರ್ಮಿಕರಿಗೆ ಭದ್ರತೆಯನ್ನು ನೀಡುತ್ತವೆ. ಮನುಷ್ಯನು ತನ್ನ ಭದ್ರತೆಯ ವಾಹನವನ್ನು ತಾನೇ ಸೃಷ್ಟಿಸಬಲ್ಲನು ಎಂದು ನಮಗೆ ಹೇಳಲಾಗಿದೆ. ನೈಜ್ಯತೆಯಲ್ಲಿ ದೇವರು ಮಾತ್ರ ರಕ್ಷಿಸಬಲ್ಲನು, ದೇವರು ಮಾತ್ರ ಬಿಡುಗಡೆ ನೀಡ ಬಲ್ಲನು, ದೇವರು ಮಾತ್ರ ವಿಮೋಚಿಸಬಲ್ಲನು. ಕೇವಲ ದೇವರು ಮಾತ್ರ ಮನುಷ್ಯನಿಗೆ ಭದ್ರತೆಯನ್ನು ನೀಡಬಲ್ಲನು.

ದೇವರ ಗುಣಲಕ್ಷಣ ಮತ್ತು ಸ್ವರೂಪವನ್ನು ವಿವರಿಸುವ ಯೆಶಾಯನ ಪ್ರವಾದನೆಯ ಗ್ರಂಥದ ಈ ಅಧ್ಯಾಯಗಳನ್ನು ನಾವು ಹೊರನೋಟಕ್ಕೆ ಮಾತ್ರ ವಿರಳವಾಗಿ ಓದಿದ್ದೇವೆ. ಆತನ ಶ್ರೇಷ್ಠತೆಯ ದರ್ಶನವನ್ನು ನಾವು ಹೊಂದಿಕೊಳ್ಳಲು ಶಕ್ತರಾಗುವಾಗ ಇದು ಎಷ್ಟು ಸರಳವಾಗುತ್ತದೆ – ನಮ್ಮ ಎಲ್ಲಾ ಸಮಸ್ಯೆಗಳು ಮತ್ತು ವ್ಯಾಕುಲತೆಗಳು ನಿಷ್ಪ್ರಯೋಜಕವಾಗುತ್ತವೆ.

## ಮನುಷ್ಯನ ಗುಣಲಕ್ಷಣ ಮತ್ತು ಸ್ವಭಾವ

ಯೆಶಾಯ 40:6–7 “ಆಹಾ, ವಾಣಿಯು ಮತ್ತೆ ಕೇಳಿಸಿ – ಕೂಗು ಎನ್ನುತ್ತದೆ ಅದಕ್ಕೆ ನಾನು ಏನು ಕೂಗಲಿ ಎಂದು ಕೇಳಲು ನರಜಾತಿಯೆಲ್ಲಾ ಹುಲ್ಲಿನ ಹಾಗಿದೆ, ಅದರ ಲಾವಣ್ಯವೆಲ್ಲಾ ಅಡವಿಯ ಹೂವಿನಂತಿದೆ. ಯೆಹೋವನ ಶ್ವಾಸವು ಅದರ ಮೇಲೆ ಬೀಸುವದರಿಂದ ಹುಲ್ಲು ಒಣಗಿ ಹೋಗುವದು, ಹೂವು ಬಾಡಿ ಹೋಗುವದು ಜನವು ಹುಲ್ಲೇ ಹುಲ್ಲು.” ಈ ರೀತಿಯಲ್ಲಿ ದೇವರು ಮತ್ತು ಸತ್ಯವೇದ ಮನುಷ್ಯನನ್ನು ದೃಷ್ಟಿಸುತ್ತವೆ. ಶ್ರೇಷ್ಠ ಸಂತೃಪ್ತನಾಗಿರುವ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವವನಾಗಿ ಅಲ್ಲ ಆದರೆ ಇಂದು ಇರುವ ನಾಳೆ ಬಾಡಿಹೋಗುವ, ಹೊಲದ ಹುಲ್ಲಿಗೆ ಸಮಾನವಾಗಿ. ಯೇಸು

ಕ್ರಿಸ್ತನ ಸಹೋದರನಾದ ಯಾಕೋಬ ಈ ರೀತಿಯಾಗೆ ಬರೆಯುತ್ತಾನೆ, "ನಿಮ್ಮ ಜೀವಮಾನ ಎಂಥದು? ನೀವು ಸ್ವಲ್ಪಹೊತ್ತು ಕಾಣಿಸಿಕೊಂಡು ಆಮೇಲೆ ಕಾಣದೆ ಹೋಗುವ ಹಬೆಯಂತಿರುತ್ತಿರಿ (ಯಾಕೋಬ 4:14). ಮನುಷ್ಯನನ್ನು ತಿಳಿದುಕೊಳ್ಳಲು, ನಾವು ಇಲ್ಲಿಂದಲೇ ಪ್ರಾರಂಭಿಸಬೇಕು.

ಜೀವಿತದ ಸಂಕ್ಷಿಪ್ತತೆ ನಮ್ಮನ್ನು ನಾವು ಸರಿಯಾದ ಸಂಗತಿಗಳಿಗೆ ಸಮರ್ಪಿಸಿಕೊಳ್ಳುವದರ ಮಹತ್ವವನ್ನು ತಿಳಿಸುತ್ತದೆ. ಕೀರ್ತನೆಗಾರನು ಹೇಳುತ್ತಾನೆ, "ಸುಜ್ಞಾನಿಗಳು ಸಾಯುವದನ್ನು ನೋಡುತ್ತೇವಲ್ಲಾ; ಹಾಗೆಯೇ ಪಶುಗಳಂತಿರುವ ಜ್ಞಾನಹೀನರೂ ನಾಶವಾಗುತ್ತಾರೆ. ಅವರು ನಂಬಿದ್ದ ಆಸ್ತಿಯು ಇತರರ ಪಾಲಾಗುತ್ತದೆ. ಯಾರು ವಿಸ್ತಾರವಾದ ಭೂಸ್ಥಿತಿಗಳಿಗೆ ತಮ್ಮ ಹೆಸರುಗಳನ್ನು ಕೊಟ್ಟಿದ್ದಾರೋ ಅಂಥವರಿಗೂ ಸಮಾಧಿಯೇ ಶಾಶ್ವತಮಂದಿರವು; ಅದೇ ಅವರ ನಿತ್ಯನಿವಾಸ ಸ್ಥಾನ. ಮನುಷ್ಯನು ಎಷ್ಟು ಘನವಾದ ಪದವಿಯಲ್ಲಿದ್ದರೂ ಸ್ಥಿರವಿಲ್ಲ; ಪಶುಗಳಂತೆಯೇ ಇಲ್ಲವಾಗುತ್ತಾನೆ. ಒಬ್ಬನ ಐಶ್ವರ್ಯವೂ ಗೃಹವೈಭವವೂ ವೃದ್ಧಿಯಾದಾಗ ಕಳವಳಿಸಬೇಡ. ಅವನು ಸಾಯುವಾಗ ಏನೂ ತೆಗೆದುಕೊಂಡು ಹೋಗಲಾರನಷ್ಟೆ; ಅವನ ವೈಭವವು ಅವನೊಡನೆ ಹೋಗುವದಿಲ್ಲ (ಕೀರ್ತನೆ 49:10–12, 16–17).

ಕೀರ್ತನೆಗಾರನ ಸಮಯದಲ್ಲಿ ಯಾವುದು ನಿಜವಾಗಿತ್ತೋ ಅದು ಇಂದು ಸಹ ನಿಜವಾಗಿದೆ, "ಅವರು ತಮ್ಮ ದೇಶಗಳನ್ನು ತಮ್ಮ ಹೆಸರಿನಿಂದ ಕರೆಯುತ್ತಿದ್ದರು."ದೇಶಗಳಾದ ಆನಂದನಗರ, ವಿಜಯನಗರ, ಸದಾಶಿವನಗರ, ಶಿವಾಜಿನಗರ, ಭಾರತಿನಗರ ಇವೆಲ್ಲವೂ ಇದಕ್ಕೆ ಸಾಕ್ಷಿಯಾಗಿವೆ. ಕೋಲಕ್ಕತ್ತಾ ಪಟ್ಟಣದಲ್ಲಿದ್ದ ಒಬ್ಬ ಮನುಷ್ಯನಿಗೆ ಬಹಳ ಸಂಪತ್ತು ಇತ್ತು. ಶಾಲೆಗಳು ಮತ್ತು ಗ್ರಂಥಾಲಯಗಳಿಗೆ ಅವನ ಕೊಡುಗೆಯಿಂದಾಗಿ ಕೋಟ್ಯಾಧಿಪತಿ ಎಂಬ ಆತನ ಹೆಸರು ಇಡಲ್ಪಟ್ಟಿತ್ತು, ತನ್ನ ಮರಣದ ಪೂರ್ವದಲ್ಲಿ ಆತನು ಆ ಪಟ್ಟಣದಲ್ಲಿರುವ ತಂದೆಗಳ ಬಳಿಗೆ ಬಂದು ಅವರು ಆತನ ಹೆಸರನ್ನು ಆ ಪಟ್ಟಣಕ್ಕೆ ಇಡುವದಾದರೆ ತನ್ನ ಎಲ್ಲಾ ಸಂಪತ್ತನ್ನು ಅವರಿಗೆ ನೀಡುವದಾಗಿ ಹೇಳಿದನು. ಸಂಕ್ಷಿಪ್ತ ಜೀವಿತ ಕಾಲ ಮನುಷ್ಯನಿಗೆ ಇಂತಹ ಸಂಗತಿಗಳಿಗೆ ಆತುಕೊಳ್ಳಲು ಮತ್ತು ಯಾವುದೇ ಮಾರ್ಗದಲ್ಲಿ ಶಾಶ್ವತವಾಗಬೇಕೆಂಬ ಬಯಕೆಗೆ ಕಾರಣವಾಗುತ್ತದೆ.

*ಯೆಶಾಯ 47:8–10:* "ನಾನೇ ಇರುವವಳು ನನ್ನ ಹೊರತು ಇನ್ನು ಯಾರೂ ಇಲ್ಲ. ನಾನು ವಿಧವೆಯಾಗಿ ಕೂತುಕೊಳ್ಳುವದಿಲ್ಲ. ಪುತ್ರಶೋಕವನ್ನು ಅನುಭವಿಸುವದಿಲ್ಲ ಅಂದು ಕೊಳ್ಳುವವಳೇ, ಭೋಗಾಸಕ್ತಳೇ, ನೆಮ್ಮದಿಯಾಗಿ ನೆಲೆಗೊಂಡಿರುವವಳೇ, ಈಗ ಇದನ್ನು ಕೇಳು ಒಂದೇ ದಿನದೊಳಗೆ, ಒಂದು ಕ್ಷಣದಲ್ಲಿ, ಪುತ್ರಶೋಕ, ವೈಧವ್ಯ, ಇವೆರಡೂ ನಿನಗುಂಟಾಗುವವವು. ನೀನು ಎಷ್ಟು ಮಾಡಮಾಡಿದರೂ ಎಷ್ಟೇ ಮಂತ್ರ ತಂತ್ರಗಳನ್ನು ನಡಿಸಿದರೂ ಇವುಗಳನ್ನು ಸಂಪೂರ್ಣವಾಗಿ ಅನುಭವಿಸುವಿ. ನೀನು ಮಾಡಿದ ಕೇಡಿಗೆ ಭಯಪಡದೆ ನನ್ನನ್ನು ಯಾರೂ ನೋಡರು ಎಂದುಕೊಂಡಿದ್ದೀ; ನಿನ್ನ ಜ್ಞಾನವಿವೇಕಗಳು ನಿನ್ನನ್ನು ಸೊಟ್ಟಗೆ ತಿರುಗಿಸಿದ್ದರಿಂದ ನಾನೇ ಇರುವವಳು, ನನ್ನ ಹೊರತು ಇನ್ನು ಯಾರೂ ಇಲ್ಲವೆಂದು ಯೋಚಿಸಿಕೊಂಡಿದ್ದೀ." ಯಾಕಂದರೆ ಮನುಷ್ಯನು ಅಮರತ್ವವನ್ನು ತಪ್ಪಾದ ಮಾರ್ಗದಲ್ಲಿ ಹಂಬಲಿಸುತ್ತಾನೆ. ಆತನು ದೇವರ ಉದ್ದೇಶಗಳಿಗೆ ವಿರುದ್ಧವಾಗಿ ಹೋಗುತ್ತಾನೆ. ಈ ವೇದಭಾಗದ ವಿಷಯ ಬಾಬೇಲ ಪಟ್ಟಣವಾಗಿದೆ, ಆದರೆ ಇದನ್ನು ಎಲ್ಲಾ ಮಾನವ ಕುಲಕ್ಕೆ ಅಳವಡಿಸಬಹುದು.

ಯೇಸು ಕ್ರಿಸ್ತನು ತಿರುಗಿ ಬರುವದರ ಕುರಿತಾಗಿರುವ ಜನಪ್ರಿಯ ವೇದಭಾಗದಲ್ಲಿ ಯೆಶಾಯನು ಹೀಗೆ ಬರೆಯುತ್ತಾನೆ, "ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು. ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು." (53:6) ಮತ್ತೆ ಪ್ರವಾದಿಯು ಹೀಗೆ ಬರೆಯುತ್ತಾನೆ, "ನಾವೆಲ್ಲರೂ ಅಶುದ್ಧನ ಹಾಗಿದ್ದೇವೆ, ನಮ್ಮ ಧರ್ಮಕಾರ್ಯಗಳೆಲ್ಲಾ, ಹೊಲೆಯ ಬಟ್ಟೆಯಂತಿವೆ; ನಾವೆಲ್ಲರೂ ತರಗಲೆಯೋಪಾದಿಯಲ್ಲಿ ಒಣಗಿ ಹೋಗಿದ್ದೇವೆ; ನಮ್ಮ ಅಪರಾಧಗಳು ಬಿರುಗಾಳಿಯ ಪ್ರಕಾರ ನಮ್ಮನ್ನು ಬಡಿದುಕೊಂಡು ಹೋಗಿವೆ." (64:6).

ದೇವರ ಮತ್ತು ಮನುಷ್ಯನ ಸರಿಯಾದ ದೃಷ್ಟಿಕೋನ, ಮನುಷ್ಯನ ಮೇಲೆ ಬೀಳುವ ಎಲ್ಲಾ ದುಷ್ಟತನ ಮತ್ತು ಪ್ರಕೃತಿ ವಿಕೋಪಗಳು ಆತನ ಸ್ವಂತ ಮೂರ್ಖತನ ಮತ್ತು ಅಪರಾಧದಿಂದಾಗಿವೆ. ಇದಕ್ಕೆ ವ್ಯತಿರಿಕ್ತವಾಗಿ ಮನುಷ್ಯನಿಗೆ ಸಂಭವಿಸುವ ಎಲ್ಲಾ ಒಳ್ಳೇ ಸಂಗತಿಗಳು ದೇವರ ಕೃಪೆ ಮತ್ತು ಕರುಣೆಯ ಫಲವಾಗಿವೆ. ಸ್ವಾಭಾವಿಕ ಮನುಷ್ಯನು ಇದರಿಂದ ಕಲಿಯುತ್ತಾನೆ. ಆತನು ಉಗ್ರವಾದ ಅಸಮ್ಮತಿಯಿಂದ ಇದನ್ನು ಸುತ್ತಲೂ ತಿರುಗಿಸಿ ಮನುಷ್ಯನ ಎಲ್ಲಾ ಸಾಧನೆಗಳು, ಆತನ ಆಶೀರ್ವಾದಗಳು, ಆತನ ಪ್ರಗತಿ ಆತನ ಸ್ವಂತ ಯುಕ್ತಿ ಮತ್ತು ಶ್ರೇಷ್ಠತೆಗೆ ಸಲ್ಲುತ್ತವೆ. ಹೇಗಿದ್ದರೂ, ದುರ್ದೆಶೆ ಮತ್ತು ವಿಪತ್ತು ಬರುವಾಗ, ಆತನು ದೇವರನ್ನು ದೂರುವದರಲ್ಲಿ ಮುಂದಿರುತ್ತಾನೆ.

ದೇವರಿಗೆ ಎಲ್ಲಾ ಉತ್ತಮವಾದದ್ದಾಗಿರುತ್ತದೆ ಮತ್ತು ಸಮಸ್ಯೆಯನ್ನು ಹೊರಿಸುವ ಜನರಿಗೆ, ಪಾಪದ ಸ್ವಭಾವಕ್ಕೆ ಎಲ್ಲಾ ಕೆಟ್ಟದ್ದು ಮತ್ತು ತಪ್ಪಾಗಿರುತ್ತದೆ, ಮನುಷ್ಯನು ದೇವರ ಅಥವಾ ಮನುಷ್ಯನ ಗುಣಲಕ್ಷಣವನ್ನು ತಿಳಿದುಕೊಳ್ಳಲಾರನು. ಈಗ ನಾವು ನಮ್ಮಷ್ಟಕ್ಕೆ ಅತಿ ಬೇಗನೇ ಜ್ಞಾಪಿಸಿಕೊಳ್ಳಬೇಕು, ಪರಿಸ್ಥಿತಿಗಳು ಆಗಾಗ್ಗೆ ನಮ್ಮ ಜೀವಿತವನ್ನು ಪ್ರವೇಶಿಸುತ್ತವೆ. ಅವು ದೇವರ ಪರಿಪೂರ್ಣವಾದ ಯೋಜನೆಯ ಪ್ರತಿಬಂಬವಾಗಿವೆ ಅದರೆ ನಮ್ಮಲ್ಲಿರುವ ದೃಷ್ಟಿಕೋನದ ಕೊರತೆಯಿಂದ, ಅವು ಕೆಟ್ಟವುಗಳೆಂದು ಅರ್ಥೈಸುತ್ತವೆ. ಉದಾಹರಣೆಗೆ, ಕಲ್ವಾರಿ ಕ್ರೂಜೆ. ಆ ಸಂಗತಿ ನಡೆದ ಸಂದರ್ಬದಲ್ಲಿ ನಾನು ಮತ್ತು ನೀವು ಶಿಷ್ಯರೊಂದಿಗೆ ಅಲ್ಲಿದ್ದಿದ್ದರೆ, ಅವರಂತೆ, ನಾವು ಸಹ ಕ್ರೂಜೆಯ ಮರಣವನ್ನು ರುದ್ರನಾಟಕವಾಗಿ ಕಾಣುತ್ತಿದ್ದೆವು. ಅದರಂತೆ, ನಾವು ಭಾನುವಾರದ ಆ ಬೆಳಗಿನ ಸಮಯದಲ್ಲಿ ಸಮಾಧಿಯ ಬಳಿಯಲ್ಲಿದ್ದ ಸ್ತ್ರೀಯರು ಅದು ಖಾಲಿಯಾಗಿರುವದನ್ನು ನೋಡುವಾಗ ಅವರೊಂದಿಗಿದ್ದರೆ, ನಾವು ಅವರಂತೆ, ಮುಂದೆ ಸಂಭವಿಸಿದ್ದ ದುರ್ದೆಶೆಯನ್ನು ನೋಡಿದ್ದರೆ, ಯಾರೋ ದೇಹವನ್ನು ಕದ್ದುಕೊಂಡು ಹೋಗಿದ್ದಾರೆ ಎಂಬ ತೀರ್ಮಾನಕ್ಕೆ ಬರುತ್ತಿದ್ದೆವು.

ಹೇಗಿದ್ದರೂ, 2000 ವರ್ಷಗಳ ದೃಷ್ಟಿಕೋನದಲ್ಲಿ ನಾವು ಕ್ರೂಜೆ ಮತ್ತು ಖಾಲಿಯಿರುವ ಸಮಾಧಿ ಎರಡನ್ನೂ ನೋಡುತ್ತೇವೆ ದುರ್ದೆಶೆ ಅಥವಾ ವಿಪತ್ತು ಎಂಬುದಾಗಿ ಅಲ್ಲ ಬದಲಾಗಿ ವಿಜಯೋತ್ಸವ ಮತ್ತು ಗೆಲುವನ್ನಾಗಿ ನೋಡುತ್ತಿದ್ದೆವು. ಅನೇಕಾವರ್ತಿ ಹೊರತೋರಿಕೆಗೆ ವಿರೋಧ ಪರಿಸ್ಥಿತಿಗಳು ಪ್ರಕಟವಾಗುತ್ತವೆ. ಉದಾಹರಣೆಗೆ, ಪ್ರೀತಿಪಾತ್ರರನ್ನು ಕಳೆದುಕೊಳ್ಳವದು, ಮತ್ತು ನಮ್ಮ ದೃಷ್ಟಿಕೋನದಲ್ಲಿ ಇದು ರುದ್ರನಾಟಕ ಎಲ್ಲಾ ಕುರುಹುಗಳನ್ನು ಹೊಂದಿರುತ್ತದೆ. ಆದರೆ ದೇವರ ದೃಷ್ಟಿಕೋನದಲ್ಲಿ, ಅದು ಉನ್ನತವಾದ ಮತ್ತು ಹೆಚ್ಚು ಸುಂದರವಾದ ದೇವರ ಯೋಜನೆಯನ್ನು ಪ್ರಕಟಿಸುವದಾಗಿದೆ.

**ಮನುಷ್ಯನಿಗೆ ದೇವರ ಸರ್ಮಪಣೆ**

ಯೆಶಾಯನ ಪ್ರವಾದನೆಯ 40–66 ಅಧ್ಯಾಯಗಳಲ್ಲಿ ಮೆಸ್ಸಿಯನ ಮತ್ತು ಈ ಅಧ್ಯಾಯದಲ್ಲಿ ಒಳಗೊಂಡಿರುವ ವಾಗ್ದಾನಗಳು ಮೆಸ್ಸಿಯನ ಕುರಿತಾಗಲಿ ಇಲ್ಲವೇ ಇಸ್ರಾಯೇಲ ದೇಶದ ಕುರಿತಾಗಲಿ ಅವೆ. ಹೇಗಿದ್ದರೂ, ಪವಿತ್ರಾತ್ಮನು ವಾಗ್ದಾನ ಮಾಡುತ್ತಾನೆ, "ಯೆಹೋವನ ಆಲೋಚನೆಯೋ ಶಾಶ್ವತವಾಗಿಯೇ ನಿಲ್ಲುವದು; ಆತನ ಸಂಕಲ್ಪವು ಎಂದಿಗೂ ಕದಲುವದಿಲ್ಲ." (ಕೀರ್ತನೆ 33:11). ಈ ಶ್ರೇಷ್ಠವಾದ ಅಧ್ಯಾಯಗಳಲ್ಲಿ ದೇವರ ಮತ್ತು ಮನುಷ್ಯರ ಸ್ವಭಾವವನ್ನು ನೋಡುತ್ತಿರುವ ಹಾಗೆ, ನಾವು ಸಹ ಕೆಲವು ತತ್ವಗಳನ್ನು ಮತ್ತು ವಾಗ್ದಾನಗಳನ್ನು ನಮ್ಮ ಸ್ವಂತ ಜೀವಿತಕ್ಕಾಗಿ ತೆಗೆದುಕೊಳ್ಳಬಹುದು.

ಯೆಶಾಯ 58:10–12 ರಲ್ಲಿ ದೇವರು ನಮಗೆ ಮಾಡುವ ವಾಗ್ದಾನವನ್ನು ಪರಿಗಣಿಸಿರಿ, "ನಿಮಗೆ ಪ್ರಿಯವಾದದ್ದನ್ನು ಹಸಿದವರಿಗೆ ಒದಗಿಸಿ ಕುಗ್ಗಿದವರ ಆಶೆಯನ್ನು ನೆರವೇರಿಸಿದರೆ ಆಗ ನಿಮಗೆ ಕತ್ತಲಲ್ಲಿ ಬೆಳಕು ಉದಯಿಸುವದು, ನಿಮ್ಮ ಅಂಧಕಾರವು ಪರಿಹಾರವಾಗಿ ಮಧ್ಯಾಹ್ನವಾಗುವದು ಮತ್ತು ಯೆಹೋವನು ನಿಮ್ಮನ್ನು ನಿತ್ಯವೂ ನಡಿಸುತ್ತಾ ಮರುಭೂಮಿಯಲ್ಲಿಯೂ ನಿಮ್ಮ ಆತ್ಮವನ್ನು ತೃಪ್ತಿಗೊಳಿಸಿ ನಿಮ್ಮ ಎಲುಬುಗಳನ್ನು ಸಸಾರಮಾಡುವನು; ನೀವು ತಂಪಾದ ತೋಟಕ್ಕೂ ನೀರಿಗೆ ಮೋಸವಿಲ್ಲದ ಬುಗ್ಗೆಗೂ ಸಮಾನವಾಗುವಿರಿ. ನಿಮ್ಮ ಸಂತಾನದವರು ಪುರಾತನಕಾಲದಲ್ಲಿ ಹಾಳಾದ ನಿವೇಶನಗಳನ್ನು ತಿರುಗಿ ಕಟ್ಟುವರು. ನೀವು ತಲತಲಾಂತರಗಳಿಂದ ಪಾಳುಬಿದ್ದರುವ ಅಸ್ತಿವಾರಗಳ ಮೇಲೆ ಕಟ್ಟಡಗಳನ್ನು ಎಬ್ಬಿಸುವಿರಿ; ಬಿದ್ದ ಗೋಡೆಯನ್ನು ಹಾಕುವ ಜನಾಂಗ, ಹಾದಿಗಳನ್ನು ತಿರುಗಾಡುವ ಸ್ಥಿತಿಗೆ ತರುವ ಜನಾಂಗ ಎಂಬೀ ಬಿರುದುಗಳು ನಿಮಗುಂಟಾಗುವವು."

ನಿಮ್ಮ ಬೆಳಕು ಕತ್ತಲಲ್ಲಿ ಪ್ರಕಾಶಿಸುವದು. ನಿಮಗೆ ಮಾರ್ಗದರ್ಶನ ಮಾಡುವ ಜವಾಬ್ದಾರಿಯನ್ನು ಕರ್ತನು ಹೊತ್ತುಕೊಳ್ಳುವನು. ನಿಮ್ಮ ಜೀವಿತದ ಒಣಗಿಹೋದ ಅವಧಿಯಲ್ಲಿ ಕರ್ತನು ನಿಮ್ಮ ಆತ್ಮನನ್ನು ತೃಪ್ತಿಗೊಳಿಸುವನು. ನೀವು ಅನೇಕ ಜನಾಂಗಗಳಿಗೆ ಅಸ್ತಿವಾರವಾಗುವ ಸೌಭಾಗ್ಯವನ್ನು ಹೊಂದುವಿರಿ. ಆದರೆ ಇವೆಲ್ಲವುಗಳ ಹಿಂದೆ ಷರತ್ತುಗಳ ಅನ್ವಯವಿದೆ. ನೀವು ನಿಮ್ಮ ಆತ್ಮವನ್ನು ಹಸಿವು ಮತ್ತು ವೇದನೆಯಲ್ಲಿದ್ದವರೆಡೆಗೆ ನಡೆಸಿದರೆ, ನೀವು ನಿಮ್ಮ ಜೀವಿತವನ್ನು ಈ ವಿಧದ ಗುರಿ ಮತ್ತು ವಾಸ್ತವತೆಯೆಡೆಗೆ ನಡೆಸಿದರೆ. ಇದಕ್ಕೆ ಬದಲಾಗಿ ದೇವರು ನಿಮ್ಮನ್ನು ನಿಮ್ಮ ಕಲ್ಪನೆಗೆ ಮೀರಿ ಆಶೀರ್ವದಿಸುವನು.

ಇದು ಮನುಷ್ಯನಿಗೆ ದೇವರ ಸರ್ಮಪಣೆ. ತನ್ನ ಪ್ರೀತಿಯಲ್ಲಿ, ಆತನು ನಮ್ಮನ್ನು ಯೇಸು ಕ್ರಿಸ್ತನು ನೆರವೇರಿಸಿದ ಕಾರ್ಯದ ಮೂಲಕ ರಕ್ಷಿಸುತ್ತಾನೆ ನಂತರ ಆತನು ನಮ್ಮನ್ನು ಆಶೀರ್ವದಿಸುತ್ತಾನೆ ಮತ್ತು ಅಭಿವೃದ್ಧಿಪಡಿಸುತ್ತಾನೆ ಇದರಿಂದಾಗಿ ನಾವು ಯೇಸು ಕ್ರಿಸ್ತನ ಗುಣಲಕ್ಷಣಗಳನ್ನು ಹೊಂದಿ, ಇತರರ ಜೀವಿತದಲ್ಲಿ ಬದಲಾವಣೆಯನ್ನು ತರಬಹುದು. ಇವೆಲ್ಲವೂ ವಿಶ್ವಾಸಿಗಳಿಗೆ "ಉದ್ದೇಶಗಳಾಗಿವೆ". ಇದೇ ಶಿಷ್ಯತ್ವವಾಗಿದೆ.

ಯೆಶಾಯ 40–66 ರನ್ನು ಇನ್ನೂ ಹೆಚ್ಚಾಗಿ ಅಧ್ಯಯನ ಮಾಡಿರಿ ಎಂದು ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಈ ಶ್ರೇಷ್ಠ ಅಧ್ಯಾಯಗಳನ್ನು ಮೂರು ಪ್ರತ್ಯೇಕ ಸಮಯದಲ್ಲಿ ಓದಿರಿ. ಮೊದಲನೆಯ ಸಾರಿ ಓದುವಾಗ ನೀವು ದೇವರ ಸ್ವಭಾವ ಮತ್ತು ಗುಣ ಲಕ್ಷಣದ ಕುರಿತು ಏನನ್ನು ಕಲಿಯುತ್ತೀರೋ ಅದನ್ನು ಬರೆಯಿರಿ. ಎರಡನೆಯ ಸಾರಿ ಓದುವಾಗ ನೀವು ಮನುಷ್ಯನ ಸ್ವಭಾವ ಮತ್ತು ಗುಣ ಲಕ್ಷಣದ ಕುರಿತು ಏನನ್ನು ಕಲಿಯುತ್ತೀರೋ

ಅದನ್ನು ಬರೆಯಿರಿ. ಮೂರನೆಯ ಸಾರಿ ಓದುವಾಗ ನೀವು ಮನುಷ್ಯನಿಗೆ ದೇವರ ಸರ್ಮಪಣೆಯ ಕುರಿತು ಕಲಿತಿರುವದನ್ನು ಬರೆಯಿರಿ ಮೂರನೆಯ ಸಾರಿ ಓದುವದು ನಿಮ್ಮನ್ನು ಆತನ ಶ್ರೇಷ್ಠತೆ ಮತ್ತು ನಮ್ಮ ಪಾಪ ಪ್ರವೃತ್ತಿಯ ಕುರಿತು ಕಲಿತ ಮೇಲೆ ಆತನು ನಮ್ಮೊಂದಿಗೆ ಎಷ್ಟು ಕರುಣೆಯಿಂದ ವ್ಯವಹರಿಸಿದ್ದಾನೆ ಎಂಬುದು ಅರ್ಥಮಾಡಿಕೊಳ್ಳುವತ್ತ ನಡೆಸುತ್ತದೆ.



# 5. ಪ್ರಾರ್ಥನೆ

ಪ್ರಾರ್ಥನೆಯು ನಮ್ಮ ಕ್ರಿಸ್ತೀಯ ಜೀವಿತದ ಬಲವಾದ ಮತ್ತು ಅದೇ ಸಮಯದಲ್ಲಿ ಬಲಹೀನವಾದ ಆಯಾಮವಾಗಿದೆ. ಇದು ದೇವರೊಂದಿಗೆ ಜೋಡಣೆಯ– ಜೀವಿತವಾಗಿದೆ. ಕೊಂಡಿ ಎಷ್ಟು ಬಲವಾಗಿರುತ್ತದೋ, ನಮ್ಮ ಆತ್ಮೀಕ ಜೀವಿತ ಅಷ್ಟೇ ಬಲವಾಗಿರುತ್ತದೆ. ದೇವರು ಮೂರು ಕಾರಣಗಳಿಂದಾಗಿ ನಾವು ಪ್ರಾರ್ಥಿಸಬೇಕೆಂದು ಬಯಸುವಾತನಾಗಿದ್ದಾನೆ.

ಮೊದಲನೆದಾಗಿ, ಪ್ರಾರ್ಥನೆ ದೇವರ ಮೇಲೆ ನಮ್ಮ ಅವಲಂಬನೆಯನ್ನು ಜ್ಞಾಪಿಸುತ್ತದೆ. ನಾವು ನಮ್ಮ ಅವಶ್ಯಕತೆಗಳನ್ನು ತಿಳಿಸಲು ನಾವು ಪ್ರಾರ್ಥಿಸುವದಿಲ್ಲ; ಆತನಿಗೆ ಅದು ಗೊತ್ತಿದೆ. ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬುದು ಆತನಿಗೆ ತಿಳಿದದೆ (ಮತ್ತಾಯ 6:8). ಆತನು ನಮ್ಮ ಸಹಾಯದ ಮೂಲಾಧಾರನೆಂದು ಅರಿತುಕೊಂಡು ನಾವು ಆತನಿಗೆ ನಮ್ಮ ಬೇಡಿಕೆಯನ್ನು ಹೇಳುತ್ತೇವೆ.

ಆತನು ನಮಗಿರುವ ಕೊರತೆಯನ್ನು ಪೂರೈಸ ಶಕ್ತನು ಎಂಬ ಭರವಸೆಯನ್ನು ಪ್ರಾರ್ಥನೆಯು ವ್ಯಕ್ತ ಪಡಿಸುತ್ತದೆ. ಯಾಕಂದರೆ ಆತನು ನಮಗೆ ಕುರುಬನಾಗಿದ್ದಾನೆ, ನಮಗೆ ಕೊರತೆಯಿಲ್ಲ (ಕೀರ್ತನೆ 23:1).

ಪ್ರಾರ್ಥನೆಯು ಸುಂದರವಾದ ಸಮಯ, ಪ್ರಾರ್ಥನೆಯು ಸುಂದರವಾದ ಸಮಯ

ಲೋಕದ ಚಿಂತೆಯಿಂದ ನನ್ನನ್ನು ಕರೆಯುತ್ತದೆ

ಮತ್ತು ನನ್ನನ್ನು ನನ್ನ ತಂದೆಯ ಸಿಂಹಾಸನದ ಬಳಿ ನಡೆಸುತ್ತದೆ

ನನ್ನ ಎಲ್ಲಾ ಬಯಕೆಗಳನ್ನು ಮತ್ತು ಇಚ್ಛೆಗಳನ್ನು ತಿಳಿಯಪಡಿಸುತ್ತದೆ– ಡಬ್ಲಿವ್,ಎಮ್.ವಾಲ್ ಫರ್ಡ್.

ಎರಡನೆಯದಾಗಿ, ಪ್ರಾರ್ಥನೆ ದೇವರೊಂದಿಗೆ ಅನ್ಯೋನ್ಯ ಸಂಬಂಧದಲ್ಲಿ ನಡೆಸುತ್ತದೆ (ಕೀರ್ತನೆ 91). ಆತನ ಸನ್ನಿಧಾನದಲ್ಲಿ ಸಮಯವನ್ನು ಕಳೆಯಲು, ಆತನ ಮೇಲೆ ಮತ್ತು ಆತನ ಚಿತ್ತದ ಮೇಲೆ ಕೇಂದ್ರಿಕರಿಸಲು ಅನುಮತಿಸುತ್ತದೆ. ಪ್ರಾರ್ಥನೆಯು ಬೇಡಿಕೆಯ ಮೇಲೆ ಅಲ್ಲ, ಸಂಬಂಧಗಳ ಮೇಲೆ ಕೇಂದ್ರಿಕೃತವಾಗಿರುತ್ತದೆ (ಇಬ್ರಿಯ 10:22). ನಾವು ನಮ್ಮ ಪ್ರೀತಿ ಮತ್ತು ಭಕ್ತಿಯನ್ನು ವ್ಯಕ್ತಪಡಿಸಲು ಆತನನ್ನು ಸಂಧಿಸಬೇಕು. ಇಲ್ಲಿ ಪವಿತ್ರಾತ್ಮನು ನಮ್ಮನ್ನು ಕ್ರಿಸ್ತನ ಸ್ವರೂಪಕ್ಕೆ ನಡೆಸುತ್ತಿರುವ ಹಾಗೆ ನಾವು ಕ್ಷಮಾಪಣೆಯನ್ನು, ಶುದ್ಧತೆಯನ್ನು, ಉಜ್ಜೀವನವನ್ನು, ಬಲವನ್ನು ಹೊಂದುತ್ತೇವೆ (ರೋಮಾ. 8:29; 1ಕೊರಿಂಥ 2:18).

ಮೂರನೆಯದಾಗಿ, ಪ್ರಾರ್ಥನೆಯು ದೇವರ ರಾಜ್ಯದ ಕಾರ್ಯದಲ್ಲಿ ಭಾಗವಹಿಸಲು ನಮ್ಮನ್ನು ಅನುಮತಿಸುತ್ತದೆ. ಆತ್ಮೀಕ ಯುದ್ಧಗಳು ಪ್ರಾರ್ಥನೆಯ ಮೂಲಕ ನಡೆಯುತ್ತವೆ (ಎಫೆಸೆ 6:10–18). ಸುವಾರ್ತೆಯನ್ನು ಸಾರುವದಕ್ಕೆ ಬಾಗಿಲುಗಳು ತೆರೆಯಲ್ಪಡುತ್ತವೆ. ಪಾಪದಿಂದ ತುಂಬಿದ ಹೃದಯದಲ್ಲಿ ಅರಿವು ಉಂಟಾಗುತ್ತದೆ; ದೇವರ ರಾಜ್ಯವನ್ನು ವಿಸ್ತರಿಸುವದಕ್ಕೆ ಇರುವ ಅಡತಡೆಗಳು ತೆಗೆದುಹಾಕಲ್ಪಡುತ್ತವೆ. ಪ್ರಾರ್ಥನೆಯ ಮೂಲಕ ಸಭೆಯು ಬಲ ಹೊಂದುತ್ತದೆ; ದೇವರ ರಾಜ್ಯವು ವಿಸ್ತರಿಸಲ್ಪಡುತ್ತದೆ ಮತ್ತು ದೇವರ ಅದ್ಭುತದ ಬಲವು ಪ್ರದರ್ಶಿಸಲ್ಪಡುತ್ತದೆ (ಅ.ಕೃ. 4:23–31). ನಾವು ಪ್ರಾರ್ಥಿಸುತ್ತಿರುವ

ಹಾಗೆ ನಿತ್ಯತ್ವದ ಕಾರ್ಯ ನೆರವೇರುತ್ತದೆ. ನಾವು ನಿಜವಾಗಿಯೂ ದೇವರ ಜೊತೆ ಕೆಲಸದವರಾಗುತ್ತೇವೆ (1ಕೊರಿಂಥ 3:9).

ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ." ಫಿಲಿಪ್ಪಿ 4:6

**ನಾವು ಯಾರಿಗೆ ಪ್ರಾರ್ಥನೆ ಮಾಡಬೇಕು?**

ಭಾರತದೇಶದಲ್ಲಿ ಗಂಭೀರವಾದ ಅನಾವೃಷ್ಟಿಯ ಸಮಯದಲ್ಲಿ ನನ್ನ ಹೆಂಡತಿ ವಸತಿನಿಲಯದ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದಳು. ಅವಳು ತರಗತಿಗೆ ಈ ರೀತಿಯಾಗಿ ಹೇಳಿದಳು, "ಮಳೆಗಾಗಿ ನಾವು ದೇವರಿಗೆ ಪ್ರಾರ್ಥನೆ ಮಾಡಬೇಕಾಗಿದೆ." ಅವಳು ಹೇಳಿ ಮುಗಿಸಿದ ನಂತರ ಒಬ್ಬ ಸೇವಕರ ಮಗನು ಕೇಳಿದನು, "ನಾವು ಯಾವ ದೇವರಿಗೆ ಪ್ರಾರ್ಥಿಸಬೇಕು?" ಲೋಕದಲ್ಲಿರುವ ಅಸಂಖ್ಯಾತ ದೇವರುಗಳು ನಮ್ಮ ಪ್ರಾರ್ಥನೆಗಳನ್ನು ಆಲಿಸಿ ಉತ್ತರಿಸುವದರ ಕುರಿತು ಭರವಸೆಯ ಬದಲಾಗಿ ಭರವಸೆಯಿಲ್ಲದಂತೆ ಮಾಡಿವೆ.

ಪ್ರವಾದಿಯಾದ ಯೆಶಾಯನು ವಿಗ್ರಹಗಳನ್ನು ದೃಷ್ಟಿಸುವವರಿಗೆ ಹೀಗೆ ಹೇಳುತ್ತಾನೆ. "ಇಂಥವರು ಏನೂ ತಿಳಿಯದವರು, ಏನೂ ಗ್ರಹಿಸಲಾರದವರು; ಅವರ ಕಣ್ಣು ಕಾಣದಂತೆಯೂ ಹೃದಯ ಗ್ರಹಿಸದಂತೆಯೂ ಯೆಹೋವನು ಅಂಟು ಬಳಿದಿದ್ದಾನಲ್ಲಾ" (ಯೆಶಾಯ 44:18). ಅವರು ಪ್ರಾರ್ಥನೆಗಾಗಿ ತಮ್ಮ ದೇವಾಲಯಕ್ಕೆ ಬಂದರೂ ಪ್ರಾರ್ಥನೆಯು ಸಫಲವಾಗದು (ಯೆಶಾಯ 16:12). ಕೆಲವೊಂದು ಧರ್ಮದವರು ತಮ್ಮ ದೇವರ ಕುರಿತಾದ ವಿಷಯಾನುಭವವನ್ನು ಕಂಠಪಾಠ ಮಾಡುತ್ತಾರೆ, ಆದರೆ ದೇವರು ಅವುಗಳನ್ನು ಆಲಿಸುತ್ತಾನೆ ಮತ್ತು ತಮ್ಮ ಬೇಡಿಕೆಗಳ ಕುರಿತು ಕಳಕಳಿಯುಳ್ಳವನಾಗಿರುತ್ತಾನೆ ಎಂಬ ಭರವಸೆ ಇರುವದಿಲ್ಲ.

ಹೇಗೂ, ಸತ್ಯವೇದದ ದೇವರು ತನ್ನನ್ನು, ಪ್ರೀತಿಸುವ, ಕಾಳಜಿವಹಿಸುವ ಮತ್ತು ತನ್ನ ಮಕ್ಕಳ ಕೂಗನ್ನು ಆಲಿಸುವ ತಂದೆಯಾಗಿ ತೋರ್ಪಡುತ್ತಾನೆ (ಕೀರ್ತನೆ 40:1). ಯೆಹೋವನು ನೀತಿವಂತರ ಕೂಗನ್ನು ಕೇಳಿ ಎಲ್ಲಾ ಕಷ್ಟಗಳಿಂದ ಅವರನ್ನು ಬಿಡಿಸುತ್ತಾನೆ" (ಕೀರ್ತನೆ 34:17). ಆತನ ಆಮಂತ್ರಣ, "ನನ್ನನ್ನು ಕೇಳಿಕೋ, ನಾನು ನಿನಗೆ ಸದುತ್ತರವನ್ನು ದಯಪಾಲಿಸುವೆನು........" (ಯೆರೆಮೀಯ 33:3). ನಮ್ಮ ಪ್ರಾರ್ಥನೆಗಳು ಭರವಸೆಯಿಲ್ಲದ ನಿರೀಕ್ಷೆಗಳನ್ನು ಮತ್ತು ಆಸಕ್ತಿಯುಳ್ಳ ಯೊಚನೆಗಳನ್ನು ಅವಲಂಭಿಸಿರುವದಿಲ್ಲ. ಆತನು ನಾವು ನಮ್ಮ ಬೇಡಿಕೆಗಳೊಂದಿಗೆ ಆತನ ಬಳಿಗೆ ಬರಬೇಕೆಂದು ಇಚ್ಛಿಸುತ್ತಾನೆ. ನಮ್ಮ ಪ್ರಾರ್ಥನೆಗಳು ಆತನ ಗುಣಲಕ್ಷಣ ಮತ್ತು ವಾಗ್ದಾನಗಳನ್ನು ಅವಲಂಭಿಸಿರಬೇಕು.

ಕೀರ್ತನೆಗಾರನು ದೇವರಲ್ಲಿ ಆನಂದಿಸುತ್ತಾನೆ, "ದೇವರು ನನ್ನ ಮೊರೆಯನ್ನು ಲಕ್ಷಿಸಿ ಕೇಳಿದ್ದಾನಲ್ಲಾ, ಆತನು ನನ್ನ ಬಿನ್ನಹವನ್ನು ತಿರಸ್ಕರಿಸಲಿಲ್ಲ; ನನ್ನ ಮೇಲಿನ ತನ್ನ ದಯೆಯನ್ನು ತಪ್ಪಿಸಿಬಿಡಲಿಲ್ಲ, ದೇವರಿಗೆ ಸ್ತೋತ್ರವಾಗಲಿ!" ಎಂದು ಹೇಳುತ್ತಾನೆ (ಕೀರ್ತನೆ 66:19, 20). ಸತ್ಯವೇದದ ದೇವರು ನಮಗೆ ಆಸಕ್ತಿರಹಿತನಾದ ಅಪರಿಚಿತನಲ್ಲ. ನಮ್ಮ ಪ್ರಾರ್ಥನೆ "ನನ್ನ ಜೀವಿತದ ದೇವರಿಗೆ ನನ್ನ ಪ್ರಾರ್ಥನೆಯಾಗಿದೆ" (ಕೀರ್ತನೆ 43:8). ನಾವು ಯಾರಿಗೆ ಪ್ರಾರ್ಥಿಸುತ್ತೇವೆ ಎಂಬುದರಲ್ಲಿ ಸಂದೇಹವಿಲ್ಲ – ನಾವು ಆತನ ಆಮಂತ್ರಣದ ಮೇರೆಗೆ ಬಂದಿದ್ದೇವೆ.

ಯೆಹೋವನನ್ನು ಪ್ರೀತಿಸುತ್ತೇನೆ; ಆತನು ನನ್ನ ಮೊರೆಯನ್ನು ಕೇಳುವವನು, ಆತನು ನನ್ನ ವಿಜ್ಞಾಪನೆಗೆ ಕಿವಿಗೊಟ್ಟಿದ್ದಾನೆ; ಜೀವದಿಂದಿರುವ ವರೆಗೂ ಆತನನ್ನೇ ಪ್ರಾರ್ಥಿಸುವೆನು (ಕೀರ್ತನೆ 116:1, 2).

**ಪ್ರಾರ್ಥನೆಗೆ ಮೂರು ಮುಖ್ಯ ಅಂಶಗಳು**

ಪರಿಣಾಮಕಾರಿ ಪ್ರಾರ್ಥನೆಗಳು ಅದರ ಉದ್ದ ಅಥವಾ ಭಂಗಿ ಅಥವಾ ಸುಂದರವಾದ ಧಾರ್ಮಿಕ ಪದವಿನ್ಯಾಸವನ್ನು ಅವಲಂಭಿಸಿರುವದಿಲ್ಲ. ಆದಾಗ್ಯೂ ಅದರಲ್ಲಿ ಸತ್ಯವೇದದ ಕೆಲವು ಘಟಕಾಂಶಗಳಿವೆ. ಪರಿಣಾಮಕಾರಿ ಪ್ರಾರ್ಥನೆಗೆ ಕೆಳಗಿನ ಮೂರು ಮುಖ್ಯಾಂಶಗಳನ್ನು ಪರಿಗಣಿಸಿರಿ.

ಮೊದಲನೆಯದಾಗಿ, ದೀನತೆ ಎಂಬ ಮುಖ್ಯವಾದ ಅಂಶ. ನಾವು ದೇವರ ಬಳಿಗೆ ನಮ್ಮ ಬೇಡಿಕೆಗಳನ್ನು ನಮ್ಮ ಅರ್ಹತೆಗಳನ್ನು ಅಥವಾ ನಾವು ಆತನ ಸಹಾಯ ಮತ್ತು ಸೌಲಭ್ಯವನ್ನು ಹೊಂದಿದ್ದೇವೆಂದು ಮಂಡಿಸಲು ಬರುವದಿಲ್ಲ. ನಾವು ಆತನ ಕೃಪಾಸನದ ಮುಂದೆ ಬರುವವರಾಗಿದ್ದೇವೆ. ಯೇಸು ಕ್ರಿಸ್ತನು ಕ್ರೂಜೆಯ ಮೇಲೆ ತನ್ನ ರಕ್ತವನ್ನು ಸುರಿಸುವದರ ಮೂಲಕ ನಮಗೆ ಮಾರ್ಗವನ್ನು ತೆರೆದಿಟ್ಟಿರುವದರಿಂದ ನಾವು ದೇವರನ್ನು ಸಂಧಿಸಬಹುದು. ನಾವು ನಮಗಿರುವ ಸ್ಥಾನದ ಅಹಂಕಾರದಿಂದ ಬರುವದಲ್ಲ. ಬದಲಾಗಿ ನಮ್ಮ ಅವಶ್ಯಕತೆಯ ಸಮಯದಲ್ಲಿ ದೀನತೆಯಿಂದ ಆತನ ಕೃಪೆ ಮತ್ತು ಕರುಣೆಗಳನ್ನು ಹುಡುಕಿ ಆತನ ಸನ್ನಿಧಿಗೆ ಬರಬೇಕು. ಆದುದರಿಂದ ನಾವು ನಮ್ಮ ಬೇಡಿಕೆಗಳನ್ನು ದೇವರ ಮುಂದೆ ಇಡುವಾಗ ಅದನ್ನು “ಕೃತಜ್ಞತಾಭಾವದಿಂದ” ಮಾಡಬೇಕು (ಫಿಲಿಪ್ಪಿ 4:6). ಆತನು ತನ್ನ ಪ್ರಸನ್ನತೆಯಲ್ಲಿ ನಮ್ಮನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸಿದರೂ, ಕ್ರಿಸ್ತನನ್ನು ಬಿಟ್ಟು ಅಲ್ಲಿರುವದಕ್ಕೆ ನಮಗೆ ಯಾವ ಹಕ್ಕೂ ಇಲ್ಲ. “ನಾವು ನಮ್ಮ ಎಲ್ಲಾ ಚಿಂತಾಭಾರಗಳನ್ನು ಆತನ ಮೇಲೆ ಹಾಕಬೇಕು, ಯಾಕಂದರೆ ನಾವು ದೇವರ ಬಲವಾದ ಹಸ್ತದ ಕೆಳಗೆ ನಮ್ಮನ್ನು ತಗ್ಗಿಸಿಕೊಂಡ ನಂತರವೇ, ಆತನು ನಮಗೋಸ್ಕರ ಚಿಂತಿಸುತ್ತಾನೆ” (1ಪೇತ್ರ 5:6, 7).

ಎರಡನೆಯದಾಗಿ, ನಂಬಿಕೆ ಎಂಬ ಮುಖ್ಯವಾದ ಅಂಶ. ಅನೇಕಾವರ್ತಿ ಯೇಸು ವ್ಯಕ್ತಿಯ ಸ್ವಸ್ಥತೆಗೆ ಪ್ರತಿಕ್ರಿಯಿಸುವಾಗ ಆತನು ಈ ರೀತಿಯಾಗಿ ಹೇಳುತ್ತಿದ್ದನು, “ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿದೆ...” (ಮತ್ತಾಯ 9:29). ಆತನು ಸಹಾಯಮಾಡಲು ಶಕ್ತನು ಮತ್ತು ಸಿದ್ಧನಿದ್ದಾನೆ ಎಂಬುದನ್ನು ನಾವು ನಂಬಬೇಕು. ಯೇಸು ಬೋಧಿಸಿದ್ದು, ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ ಅಂದನು (ಮತ್ತಾಯ 21:22). ನಾವು ನಮ್ಮ ಪ್ರಾರ್ಥನೆಗೆ ಉತ್ತರ ದೊರೆಯಬೇಕೆಂದು ನಿರೀಕ್ಷಿಸಿದರೆ, ಸಂಶಯಪಡದೆ ನಂಬಿಕೆಯಿಂದ ಬೇಡಿಕೊಳ್ಳಬೇಕು (ಮತ್ತಯ 21:21; ಯಾಕೋಬ 1:6). ನಂಬಿಕೆಯು ಸಾಸಿವೆ ಕಾಳಿನಷ್ಟು ಚಿಕ್ಕದಾಗಿದ್ದರು ಅದ್ಭುತವಾದ ಫಲಿತಾಂಶವನ್ನು ಹೊಂದಿರುತ್ತದೆ (ಮತ್ತಾಯ 17:20–21). ಆದಾಗ್ಯೂ, ನಮ್ಮ ನಂಬಿಕೆಯು ನಂಬಿಕೆಯಲ್ಲಿ ಮಾತ್ರ ಅಲ್ಲ, ನಮ್ಮ ಅದ್ಭುತಸ್ವರೂಪನಾದ ದೇವರಲ್ಲಿ ಮತ್ತು ಆತನ ವಾಗ್ದಾನಗಳಲ್ಲಿ ಇರಬೇಕು.

ಮೂರನೆಯದಾಗಿ, ಭರವಸೆ ಎಂಬ ಮುಖ್ಯಾಂಶ, “ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ

ವಿಜ್ಞಾಪನೆಯನ್ನು ಕೇಳುತ್ತಾನೆಂಬದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ." (1 ಯೋಹಾನ 5:14, 15). ಪ್ರಾರ್ಥನೆಯು ನಮ್ಮ ಸನ್ನಿವೇಶ, ನಮ್ಮ ಅವಶ್ಯಕತೆಗಳೊಂದಿಗೆ ದೇವರಲ್ಲಿ ಭರವಸವಿಡುವದಾಗಿದೆ, ಮತ್ತು ಆತನ ಚಿತ್ತ ನಮ್ಮ ಉತ್ತಮವಾದ ಉತ್ತರವಾಗಿದೆ ಎಂದು ಭರವಸವಿಡುವದಾಗಿದೆ.

ದೇವರ ಬಳಿಗೆಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ. (ಇಬ್ರಿಯ 11:6)

**ನಂಬಿಕೆ ಮತ್ತು ಪ್ರಾರ್ಥನೆ**

ಪ್ರಾರ್ಥನೆ ಕಾರ್ಯ ಮಾಡುತ್ತದೋ, ಪ್ರಾರ್ಥನೆ ಕೇವಲ ನಮಗೆ ನೆಮ್ಮದಿಯನ್ನು ತರುತ್ತದೋ ಅಥವಾ ಅದು ನಿಜವಾಗಿಯೂ ಸಂಗತಿಗಳನ್ನು ಮತ್ತು ಜನರನ್ನು ಬದಲಾಯಿಸುತ್ತದೋ? ಎಂದು ನಾವು ಆಶ್ಚರ್ಯಪಡಬಹುದು. ಕೆಲವರು ನಮ್ಮಲ್ಲಿ ಸಾಕಷ್ಟು ನಂಬಿಕೆ ಇದ್ದರೆ ಪಾರ್ಥನೆ ಕಾರ್ಯಮಾಡುತ್ತದೆ ಎಂದು ಸಲಹೆ ನೀಡುತ್ತಾರೆ. ಬಹುಶಃ ಪ್ರಾರ್ಥನೆ ಕಾರ್ಯ ಮಾಡುತ್ತದೋ ಎಂಬುದು ಪ್ರಾಮುಖ್ಯವಲ್ಲ, ಆದರೆ ದೇವರು ನಮ್ಮ ಪ್ರಾರ್ಥನೆಗೆ ಉತ್ತರವಾಗಿ ದೇವರು ಕಾರ್ಯಮಾಡುತ್ತಾನೋ ಎಂಬುದು ಪ್ರಾಮುಖ್ಯವಾಗಿದೆ. ನಂಬಿಕೆ ಅತ್ಯಾಸಕ್ತಿಯು ಆತ್ಮೀಕ ಯೋಚನೆಯಲ್ಲ, ಆದರೆ ಪ್ರೀತಿಸುವ ಮತ್ತು ಪೋಷಿಸುವ ದೇವರಲ್ಲಿ ಸ್ಥಿರವಾದ ವಿಶ್ವಾಸದಿಂದ ಹೊರಹೊಮ್ಮುವ ಭರವಸೆಯಾಗಿದೆ (2 ಪೂರ್ವಕಾಲವೃತ್ತಾಂತ 20:20).

ಅನೇಕಾವರ್ತಿ ನಾವು ನಂಬಿಕೆಯನ್ನು ಒಂದು ರೀತಿಯ ಆತ್ಮೀಕ ಚಮತ್ಕಾರವಾಗಿ ನೋಡುತ್ತೇವೆ. ಚಮತ್ಕಾರಗಳು ನಿಸರ್ಗದ ಮೇಲೆ ನಿಯಂತ್ರಣ ಹೊಂದವ ಮಾತುಗಳ, ಮೋಡಿ, ಸೂತ್ರಗಳ ಮೂಲಕ ಮಾಡುವ ಪ್ರಯತ್ನಗಳಾಗಿವೆ. ನಂಬಿಕೆ ಸಂಗತಿಗಳು ನಡೆಯುವಂತೆ ಮಾಡುವ ಚಮತ್ಕಾರದ ಸೂತ್ರವಾಗಿ ತೋರಿಬರುತ್ತದೆ. ನಾವು ನಮ್ಮ ಜೀವಿತದಲ್ಲಿ ಏನು ನಡೆಯುತ್ತದೋ ಅದರ ಮೇಲೆ ನಿಯಂತ್ರಣವನ್ನು ಹೊಂದಲು ನಾವು ಬಯಸುತ್ತೇವೆ ಮತ್ತು ನಮ್ಮ ನಂಬಿಕೆಯೆಂಬ ಅಧಿಕಾರದಿಂದ ಲೋಕವನ್ನು ನಿಯಂತ್ರಿಸಲು ಬಯಸುತ್ತೇವೆ. ಹೇಗೂ, ಸತ್ಯವೇದದ ನಂಬಿಕೆಯು ದೇವರ ಪಾತ್ರವನ್ನು ಕಿತ್ತುಕೊಳ್ಳಲು ಎಂದಿಗೂ ಪ್ರಯತ್ನಿಸುವದಿಲ್ಲ. ನಿಯಂತ್ರಣವು ನಮ್ಮ ನಂಬಿಕೆಯಲಿಲ್ಲ, ಬದಲಾಗಿ ಆತನ ಹಸ್ತದಲ್ಲಿದೆ. ನಂಬಿಕೆಯ ಮೂಲಕ ನಾವು ಆತನು ಏನು ಮಾಡಬೇಕೆಂದು ಬಯಸುತ್ತೇವೋ ಅದನ್ನು ಮಾಡುವಂತೆ ದೇವರನ್ನು ಒಡಂಬಡಿಸಲು ಬಯಸುವದು ತಪ್ಪು. ಆತನು ಅದ್ಭುತ ಸ್ವರೂಪನಾದ ದೇವರು, ನಮ್ಮ ಸೇವಕನಲ್ಲ. ನಾವು ಆತನನ್ನು ನಿಯಂತ್ರಿಸುವದಾಗಲಿ, ಆಜ್ಞಾಪಿಸುವದಾಗಲಿ ಸಾಧ್ಯವಿಲ್ಲ. ನಂಬಿಕೆಯನ್ನು ಚಮತ್ಕಾರದಂತೆ ಉಪಯೋಗಿಸಿ ಪ್ರಾರ್ಥನೆಯಲ್ಲಿ ತೊಡಗುವದು ಏಕದೇವರಾಗಿರುವ, ಸಾರ್ವಭೌಮ ಮತ್ತು ಪರಿಶುದ್ಧನಾದ ದೇವರನ್ನು ತಿರಸ್ಕರಿಸುವದಾಗಿದೆ (ದಾನಿಯೇಲ 4:24).

ಬದಲಾಗಿ, ನಂಬಿಕೆಯು ಸರ್ವಜ್ಞಾನಿಯಾದ, ಸರ್ವಶಕ್ತನಾದ, ಪ್ರೀತಿಸ್ವರೂಪನಾದ ದೇವರನ್ನು ನಮ್ಮ ಪರವಾಗಿ ಕಾರ್ಯವನ್ನು ಮಾಡಲು ಭರವಸವಿಡುವದಾಗಿದೆ (ಕೀರ್ತನೆ 56:4). ನಂಬಿಕೆಯ ಮೂಲಕ ದೇವರನ್ನು ನಿಯಂತ್ರಣದಲ್ಲಿಡುವದು ಸಾಧ್ಯವಿಲ್ಲ, ಆದರೆ ನಮ್ಮ ಜೀವಿತ ಮತ್ತು ಸನ್ನಿವೇಶಗಳ ಮೇಲೆ ದೇವರ ನಿಯಂತ್ರಣವನ್ನು

ಬಯಸುವದಾಗಿದೆ (ರೋಮಾ 8:6). ನಂಬಿಕೆ ದೇವರ ಚಿತ್ತವನ್ನು ಖಚಿತಪಡಿಸಿಕೊಂಡು ಮತ್ತು ಅದಕ್ಕೆ ವಿಧೇಯರಾಗಿ ನಡೆಯುವದಾಗಿದೆ (ಎಫೆಸೆ 5:17). ನಂಬಿಕೆ ಆತನ ಜೀವಿತವನ್ನು ನಮ್ಮ ಮೂಲಕ ಜೀವಿಸಲು ನಮ್ಮನ್ನು ಕ್ರಿಸ್ತನೊಂದಿಗೆ ಐಕ್ಯದಲ್ಲಿ ಸೇರಿಸುತ್ತದೆ (ಗಲಾತ್ಯ 2:20).

> ನನ್ನ ನಂಬಿಕೆ ನಿನ್ನನ್ನೇ ದೃಷ್ಟಿಸುತ್ತದೆ.
>
> ಓ ಕಲ್ವಾರಿಯ ಕುರಿಮರಿಯೇ, ದೈವಿಕ ರಕ್ಷಕನೇ
>
> ನಾನು ಪ್ರಾರ್ಥಿಸುವಾಗ ನನ್ನನ್ನು ಆಲಿಸು
>
> ನನ್ನ ಎಲ್ಲಾ ಅಪರಾಧಿ ಮನೋಭಾವನೆಯನ್ನು ತೆಗೆದುಹಾಕು
>
> ಓ, ಈ ದಿವಸದಿಂದ ನಾನು ಸಂಪೂರ್ಣವಾಗಿ ನಿನ್ನವನಾಗುವಂತಾಗಲಿ!– ರೇ ಪಾಲ್ಮರ್.

ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವಾದದರಿಂದ ........ ನಾವು ದೇಹವೆಂಬ ಮನೆಯಲ್ಲಿದ್ದರೂ ಸರಿಯೇ, ಅದನ್ನು ಬಿಟ್ಟಿದ್ದರೂ ಸರಿಯೇ, ಕರ್ತನಿಗೆ ಮೆಚ್ಚುವವರಾಗಿರಬೇಕೆಂಬದೇ ನಮ್ಮ ಗುರಿಯಾಗಿದೆ (2ಕೊರಿಂಥ 5:7, 9).

**ಪ್ರಾರ್ಥನೆಯ ವಿಧಗಳು**

ಪ್ರಾರ್ಥನೆಯು ದೇವರಿಗೆ ನಮ್ಮ ವೈಯಕ್ತಿಕ ನಿವೇದನೆಯನ್ನು ವರ್ಣಿಸುವ ವಿಶೇಷವಾದ ಪದವಾಗಿದೆ. ಹೇಗೂ, ಸತ್ಯವೇದವು ಹಲವು ವಿಧದ ಪ್ರಾರ್ಥನೆಯನ್ನು ಉಲ್ಲೇಖಿಸುತ್ತದೆ. ಸಂಕ್ಷಿಪ್ತವಾಗಿ, ಅವು ಈ ಕೆಳಗಿನವುಗಳನ್ನು ಒಳಗೊಂಡಿವೆ:

**ಪಾಪದ ಅರಿಕೆಯ ಪ್ರಾರ್ಥನೆ** – ನಮ್ಮ ಪಾಪಗಳನ್ನು ಅರಿಕೆಮಾಡುವದು ಮತ್ತು ಯೇಸು ಕ್ರಿಸ್ತನ ರಕ್ಷಣೆಯಲ್ಲಿ ಭರವಸವಿಡುವದು. ಕ್ರಿಸ್ತನ ಬಳಿಗೆ ಬಂದನಂತರವೂ, ದೇವರಲ್ಲಿ ನಮ್ಮ ವಿಧೇಯತೆ ಪರಿಪೂರ್ಣವಾಗಿರುವದಿಲ್ಲ. ನಾವು ಪಾಪ ಮಾಡುವದನ್ನು ಮುಂದುವರೆಸುತ್ತೇವೆ ಮತ್ತು ನಮಗೆ ಆತನ ಕ್ಷಮಾಪಣೆಯ ಅಗತ್ಯತೆಯಿದೆ. ನಮ್ಮ "ಹೊಸ" ಪಾಪಗಳನ್ನು ಅರಿಕೆ ಮಾಡುವದು ನಮ್ಮನ್ನು ತಿರುಗಿ "ರಕ್ಷಿಸುವದಕ್ಕಾಗಿ" ಅಲ್ಲ ಆದರೆ ದೇವರೊಂದಿಗೆ ಇರುವ ನಮ್ಮ ಸಂಬಂಧವನ್ನು ಉಜ್ಜೀವನಗೊಳಿಸುವದಾಗಿದೆ. ಯಾವುದೇ ಪಾಪವು ನನ್ನ ಮತ್ತು ಆತನೊಂದಿಗಿರುವ ಪ್ರೀತಿಯ ಮತ್ತು ಸಂತೋಷದ ಸಂಬಂಧದ ಮಧ್ಯದಲ್ಲಿ ಬರುವದು ನಮಗೆ ಇಷ್ಟವಿಲ್ಲ (ಮತ್ತಾಯ 6:12; 1ಯೋಹಾನ 1:9). ತಿಳಿದಿರುವ ಪಾಪಗಳನ್ನು ಅರಿಕೆ ಮಾಡುವದರ ಮೂಲಕ ನಾವು "ನಮ್ಮ ಗುಪ್ತ ಪಾಪಗಳನ್ನು ಕ್ಷಮಿಸು" ಎಂದು ಪ್ರಾರ್ಥಿಸಬೇಕು (ಕೀರ್ತನೆ 19:12).

**ಬೇಡಿಕೆಯ ಪ್ರಾರ್ಥನೆಗಳು** – ನಮ್ಮ ಪ್ರತಿನಿತ್ಯದ ಅವಶ್ಯಕತೆಗಳನ್ನು ಮತ್ತು ಬೇಡಿಕೆಗಳನ್ನು ದೇವರ ಸನ್ನಿಧಿಗೆ ತರುವದು, "ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ನಮಗೆ ದಯಪಾಲಿಸು (ಮತ್ತಾಯ 6:1). ನಾವು ಆತನು ನಮ್ಮ ಕುರಿತು ನಮ್ಮ ಅವಶ್ಯಕತೆಗಳಿಗಾಗಿ ಚಿಂತಿಸುತ್ತಾನೆ ಎಂದು ತಿಳಿದು ನಮ್ಮ ಚಿಂತಾಭಾರವನ್ನು ಯೇಸುವಿನ

ಮೇಲೆ ಹಾಕುತ್ತೇವೆ (1ಪೇತ್ರ 5:7). ನಮ್ಮ ಪ್ರಾರ್ಥನೆಯು ಕೇವಲ "ವಸ್ತುಗಳನ್ನು ಹೊಂದಿಕೊಳ್ಳುವ ಪಟ್ಟಿಯಾಗಿರಬಾರದು" ಬದಲಾಗಿ ನಿಜವಾಗಿಯೂ ನಮ್ಮ ಜೀವಿತಕ್ಕೆ ಅರ್ಥಪೂರ್ಣವಾಗಿರುವ ಮಾತುಗಳಾಗಿರಬೇಕು.

**ಪರಾರ್ಥ ಪ್ರಾರ್ಥನೆಗಳು** – ಇನ್ನೊಬ್ಬ ವ್ಯಕ್ತಿ ಅಥವಾ ಗುಂಪಿನ ನಿರ್ದಿಷ್ಟವಾದ ಬೇಡಿಕೆಗಳೊಂದಿಗೆ ದೇವರ ಸನ್ನಿಧಿಗೆ ಬರುವದು (ವಿಮೋಚನಾಕಾಂಡ 32:9–12; 2ಪೂರ್ವಕಾಲವೃತ್ತಾಂತ 7:14). ಸಭೆಗೆ ಯಾವಾಗಲೂ "ಪ್ರಾರ್ಥನಾ ವೀರರ" ಅವಶ್ಯಕತೆಯಿದೆ ಅವರು ದೇವರ ಮಕ್ಕಳ ಪರವಾಗಿ ಕೆಡುಕನ ಸೈನ್ಯದ ವಿರುದ್ಧವಾಗಿ ಯುದ್ಧಮಾಡುವವರಾಗಿದ್ದಾರೆ; ಇನ್ನೊಬ್ಬರ ಅತ್ಯವಶ್ಯವಾದ ಬೇಡಿಕೆಗಳೊಂದಿಗೆ ದೇವರನ್ನು ಸ್ಪರ್ಶಿಸುವವರಾಗಿದ್ದಾರೆ. ದೇವರ ಮತ್ತು ಮನುಷ್ಯರ ಮಧ್ಯದಲ್ಲಿ ಯೇಸು ಒಬ್ಬನೇ ನಿಜವಾದ ಮಧ್ಯಸ್ತಗಾರನಾಗಿದ್ದಾನೆ, ಆದಾಗ್ಯೂ ನಾವು ಆತನ ಕಾರ್ಯದಲ್ಲಿ ಸಹಭಾಗಿಗಳಾಗುವ ಸೌಭಾಗ್ಯವನ್ನು ಹೊಂದಿದ್ದೇವೆ (1 ತಿಮೋಥಿ 2:5).

**ಸ್ತುತಿ ಮತ್ತು ಕೃತಜ್ಞತಾಸ್ತುತಿಯ ಪ್ರಾರ್ಥನೆಗಳು** – ಉಪಾಸನೆ, ಆರಾಧನೆ ಮತ್ತು ಕೃತಜ್ಞತಾಸ್ತುತಿಯ ಪದಗಳ ಪ್ರಾರ್ಥನೆಗಳು (ಕೀರ್ತನೆ 33:1; ಕೀರ್ತನೆ 95:2; ಇಬ್ರಿಯ 13:15; 1ಪೂರ್ವಕಾಲ ವೃತ್ತಾಂತ 16:29). ನಾವು ನಮ್ಮ ಜೀವಿತದ ಪ್ರತಿಯೊಂದು ಕ್ಷೇತ್ರದಲ್ಲಿ ದೇವರ ಕೃಪೆ ಮತ್ತು ಒಳ್ಳೆಯತನಕ್ಕೆ, ಆಳವಾದ ಪ್ರೀತಿಯನ್ನು ಮತ್ತು ಮೆಚ್ಚಿಕೆಯನ್ನು ವ್ಯಕ್ತಪಡಿಸುವದಾಗಿದೆ, "ಕೃತಜ್ಞತಾಸ್ತುತಿಯೊಡನೆ ಆತನ ಮಂದಿರ ದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ, ಆತನ ಉಪಕಾರ ಸ್ಮರಿಸಿರಿ; ಆತನ ನಾಮವನ್ನು ಕೊಂಡಾಡಿರಿ. ಯೆಹೋವನು ಒಳ್ಳೆಯವನು; ಆತನ ಕೃಪೆಯು ಯುಗಯುಗಾಂತರಕ್ಕೂ ಆತನ ಸತ್ಯತೆಯು ತಲತಲಾಂತರಕ್ಕೂ ಇರುವವು" (ಕೀರ್ತನೆ 100:4, 5).

ಎಲ್ಲಾ ಆಶೀರ್ವಾದಗಳ ಮೂಲನಾದ ದೇವರಿಗೆ ಸ್ತೋತ್ರ ಮಾಡಿರಿ;

ಭೋಲೋಕದಲ್ಲಿರುವ ಎಲ್ಲಾ ಸೃಷ್ಟಿಗಳೇ ಆತನಿಗೆ ಸ್ತೋತ್ರ ಮಾಡಿರಿ.

ಪರಲೋಕದಲ್ಲಿರುವ ದೂತಗಣಗಳೇ ಆತನಿಗೆ ಸ್ತೋತ್ರ ಮಾಡಿರಿ.

ತಂದೆ, ಮಗ ಮತ್ತು ಪರಿಶುದ್ಧಾತ್ಮನಿಗೆ ಸ್ತೋತ್ರ ಮಾಡಿರಿ– ಥಾಮಸ್ ಕೇನ್.

ಯೆಹೋವನೇ ನನ್ನ ಶರಣನೇ, ನನ್ನ ವಿಮೋಚಕನೇ, ನನ್ನ ಮಾತುಗಳೂ ನನ್ನ ಹೃದಯದ ಧ್ಯಾನವೂ ನಿನಗೆ ಸಮರ್ಪಕವಾಗಿರಲಿ (ಕೀರ್ತನೆ 19:14).

### ದೇವರ ಯೋಚನೆಗಳನ್ನು ಯೋಚಿಸುವದು

ಪ್ರಾರ್ಥನೆ ಯಾವಾಗಲೂ ದೇವರ ವಾಕ್ಯದೊಂದಿಗೆ ಸಂಬಂಧವನ್ನು ಹೊಂದಿರಬೇಕು. ವಾಕ್ಯವು ನಮ್ಮ ದೇವರು ಯಾರು ಎಂಬುದನ್ನು ಪ್ರಕಟಿಸುವದರ ಮೂಲಕ ನಮ್ಮ ಪ್ರಾರ್ಥನೆಯನ್ನು ಆತನ ಮೇಲೆ ಕೇಂದ್ರಿಕರಿಸುವಂತೆ ಮತ್ತು ನಾವು ಆತನನ್ನು ಮೆಚ್ಚಿಸುವಂತೆ ಹೇಗೆ ಜೀವಿಸಬೇಕೆಂಬುದನ್ನು ತಿಳಿಸುತ್ತದೆ. ದೇವರವಾಕ್ಯವಿಲ್ಲದ

ಪ್ರಾರ್ಥನೆಯು ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಹಿಡಿತವಿಲ್ಲದ ಅನುಭವಗಳ ಮೇಲೆ ಕೇಂದ್ರಿಕರಿಸುತ್ತದೆ. ಪ್ರಾಚೀನ ತತ್ವಜ್ಞಾನಿಗಳು "ದೇವರ ಯೋಚನೆಗಳನ್ನು ಅನುಸರಿಸಿ ಯೋಚಿಸುವದು" ಎಂದು ಮೇಲಿಂದ ಮೇಲೆ ಪ್ರಾರ್ಥನೆಯ ಕುರಿತಾಗಿ ಹೇಳಿದ್ದಾರೆ. ದೇವರ ವಿಚಾರಗಳನ್ನು ತಿಳಿದುಕೊಳ್ಳಲು ನಾವು ಪ್ರಕಟಿಸಲ್ಪಟ್ಟ ಆತನ ವಾಕ್ಯಗಳಿಗೆ ಹೋಗಬೇಕು.

ವಾಕ್ಯವು ದೇವರ ಚಿತ್ತಕ್ಕೆ ಅನುಗುಣವಾಗಿ ಪ್ರಾರ್ಥಿಸಲು ಸಹಾಯ ಮಾಡುತ್ತದೆ. ಎಲ್ಲಾ ಪ್ರಾರ್ಥನೆಗಳು ಉತ್ತರಿಸಲ್ಪಡುವದಿಲ್ಲ, "ಹೌದು" ಆತನ ಚಿತ್ತ ಮತ್ತು ಉದ್ದೇಶಕ್ಕನುಗುಣವಾಗಿ ಮಾಡಿದ ಪ್ರಾರ್ಥನೆಗಳು ಮಾತ್ರ ಉತ್ತರಿಸಲ್ಪಡುತ್ತವೆ(1 ಯೋಹಾನ 5:14; ಮತ್ತಾಯ 6:10). ಸತ್ಯವೇದವು ನಾವು ತತ್ವಗಳನ್ನು ಮತ್ತು ನಿರ್ಧಿಷ್ಟವಾದ ದೇವರ ಚಿತ್ತವನ್ನು ತಿಳಿದುಕೊಳ್ಳುವ ಸ್ಥಳವಾಗಿದೆ. ದೇವರ ಚಿತ್ತದ ಕೆಲವೊಂದು ಅಂಶಗಳು ಸ್ಪಷ್ಟವಾಗಿರುತ್ತವೆ ಮತ್ತು ಹೇಗೆ ಪ್ರಾರ್ಥಿಸಬೇಕು ಎಂಬುದು ಸರಳವಾಗಿರುತ್ತದೆ. (ಉದಾಹರಣೆಗೆ ವ್ಯಕ್ತಿಯ ರಕ್ಷಣೆಗಾಗಿ ಪ್ರಾರ್ಥಿಸುವದು – 2ಪೇತ್ರ 3:9). ಆದರೆ ಉಳಿದ ಸಮಯದಲ್ಲಿ ನಾವು ಅಷ್ಟೊಂದು ಖಚಿತವಾಗಿರುವದಿಲ್ಲ, ಆದುದರಿಂದ ಪ್ರಾರ್ಥಿಸುತ್ತೇವೆ "ನಿನ್ನ ಚಿತ್ತವಾದರೆ" ಆತನ ಜ್ಞಾನ ಮತ್ತು ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸುತ್ತೇವೆ. ನಾವು ನಮ್ಮ ಪ್ರಾರ್ಥನೆಯಲ್ಲಿ ಪವಿತ್ರಾತ್ಮನ ಸಹಾಯದ ಮೇಲೆ ಅವಲಂಭಿಸಿರುತ್ತೇವೆ, "....... ಆತ್ಮನು ನಮ್ಮ ಬಲಹೀನತೆಯಲ್ಲಿ ಸಹಾಯಮಾಡುತ್ತಾನೆ, ನಮಗೆ ಏನು ಪ್ರಾರ್ಥನೆ ಮಾಡಬೇಕು ಎಂಬುದು ತಿಳಿದಿರುವದಿಲ್ಲ, ಆದರೆ ಪವಿತ್ರಾತ್ಮನು ತಾನೆ ಮಾತಿಲ್ಲದ ನರಳಾಟದಿಂದ ನಮಗೋಸ್ಕರ ವಿಜ್ಞಾಪನೆಯನ್ನು ಮಾಡುತ್ತಾನೆ (ರೋಮಾ 8:26).

ದೇವರ ಚಿತ್ತಕ್ಕನುಗುಣವಾಗಿ ಪ್ರಾರ್ಥಿಸುವದನ್ನು ನಂಬಿಕೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಉಪಯೋಗಿಸಬಾರದು ಮತ್ತು ಅದು ನಂಬಿಕೆಯನ್ನು ಕಡೆಗಣಿಸುವದಕ್ಕಾಗಿ ಅಥವಾ ನಾಶಮಾಡುವದಕ್ಕಾಗಿ ಉದ್ದೇಶಿಸಲ್ಪಟ್ಟಿಲ್ಲ. ಬದಲಾಗಿ ದೇವರ ಚಿತ್ತಕ್ಕನುಗುಣವಾಗಿ ಪ್ರಾರ್ಥಿಸುವದು ನಂಬಿಕೆಗೆ ಭರವಸೆಯನ್ನು ಕೊಡುತ್ತದೆ. ನಾವು ದೇವರ ಚಿತ್ತಕ್ಕನುಗುಣವಾಗಿ ಪ್ರಾರ್ಥಿಸಿದರೆ ಆತನು ನಮ್ಮ ಪ್ರಾರ್ಥನೆಯನ್ನು ಆಲಿಸುತ್ತಾನೆ ಎಂಬ ಭರವಸೆ ನಮಗಿರುತ್ತದೆ, ಮತ್ತು ಆತನು ನಮ್ಮನ್ನು ಆಲಿಸುತ್ತಿರುವದರಿಂದ, "...... ನಾವು ಬೇಡಿಕೊಂಡದ್ದನ್ನು ಹೊಂದುತ್ತೇವೆ ಎಂಬುದು ನಮಗೆ ತಿಳಿದದೆ" (1ಯೋಹಾನ 5:14, 15).

ನಾವು ಇಂದು ಪ್ರಾರ್ಥಿಸುತ್ತಿರುವ ಹಾಗೆ ಆತನ ವಾಕ್ಯದಲ್ಲಿ ನಮಗಾಗಿ ಪ್ರಕಟವಾಗಿರುವ "ಆತನ ವಿಚಾರಗಳನ್ನು ಅನುಸರಿಸಿ ಯೋಚಿಸೋಣ."

"ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು" – ರೋಮಾ 8:27.

### ದೀರ್ಘ ಪ್ರಯತ್ನ ಮತ್ತು ಅಧೀನತೆ

ದೇವರ ವಾಕ್ಯದ ವಾಗ್ದಾನವು ನಮ್ಮ ಸನ್ನಿವೇಶ ಮತ್ತು ಅವಶ್ಯಕತೆಗೆ ಅಳವಡಿಸುವಾಗ, ದೇವರ ಮನಸ್ಸಿನಲ್ಲಿ ಏನಿದೆ ಅಥವಾ ನಮಗಾಗಿ ಏನನ್ನು ಸಂಗ್ರಹಿಸಿಟ್ಟಿದ್ದಾನೆ ಎಂಬುದು ನಮಗೆ ಸಂಪೂರ್ಣವಾಗಿ ಅರ್ಥವಾಗುವದಿಲ್ಲ. ದೇವರು ಪ್ರಾರ್ಥನೆಗೆ ಕೇವಲ "ಹೌದು"

ಎಂದು ಉತ್ತರಿಸುತ್ತಾನೆ ಎಂದು ತಿಳಿದಿದ್ದೇವೆ. ಆದರೆ ಮೇಲಿಂದ ಮೇಲೆ "ತಡೆ" ಎಂದು ಉತ್ತರಿಸುತ್ತಾನೆ ಮತ್ತು ಕೆಲವೊಮ್ಮೆ "ಇಲ್ಲ" ಎಂದು ಉತ್ತರಿಸುತ್ತಾನೆ. ಸತ್ಯವೇದ ಸಾಮಾನ್ಯ ತತ್ವ "ಹೌದು" ಎಂದು ಸೂಚಿಸಬಹುದು, ಆದರೆ ನಮ್ಮ ನಿರ್ಧಿಷ್ಟವಾದ ಸನ್ನಿವೇಶದಲ್ಲಿ ದೇವರ ಉತ್ತರ "ಇಲ್ಲ" ಎಂದಾಗಿರಬಹುದು.

ಇದರ ಅರ್ಥ ನಾವು ನಿಷ್ಕ್ರಿಯರಾಗಿರಬೇಕೆಂದೇನಲ್ಲ ಮತ್ತು ನಮ್ಮ ಪ್ರಾರ್ಥನೆಯಲ್ಲಿ ಶ್ರದ್ಧೆಯ ಕೊರತೆಯಿರಬೇಕೆಂದೇನಿಲ್ಲ. ಅನ್ಯಾಯಗಾರನಾದ ನ್ಯಾಯಾಧಿಪತಿಯ ಮುಂದೆ ವಿಧವೆಯ ಪ್ರಯತ್ನವನ್ನು (ಲೂಕ 18:2–8) ಅಥವಾ ಸರುಹೊತ್ತಿನಲ್ಲಿ ಬಂದ ಸ್ನೇಹಿತನ ಕುರಿತಾಗಿ ಹೇಗೆ ಮರೆಯಲು ಸಾಧ್ಯ (ಲೂಕ 11:5–8)? ನಕಾರಾತ್ಮಕ ಸನ್ನಿವೇಶದಲ್ಲಿ ನಿರಂತರವಾಗಿ ಬೇಡಿಕೊಳ್ಳುವಾಗ ಬಯಸಿದ ಫಲಿತಾಂಶ ದೊರೆಯುತ್ತದೆ. ದೀರ್ಘಪ್ರಯತ್ನ ಮಾಡಿದ ವಿಧವೆಯ ಕಥೆಯನ್ನು ಯೇಸು "ಅವರು ಎಡಬಿಡದೆ ಪ್ರಾರ್ಥಿಸಬೇಕು, ಬಿಟ್ಟುಕೊಡಬಾರದು" ಎಂಬುದಕ್ಕೆ ಹೇಳಿದನು (ಲೂಕ 18:1). ದೀರ್ಘಪ್ರಯತ್ನವನ್ನು ಮಾಡಿದ ಸ್ನೇಹಿತನ ಕಥೆ "ಕರ್ತನ ಪ್ರಾರ್ಥನೆ" ಮತ್ತು ಯೇಸುವಿನ ಪ್ರಬೋಧನೆ, "ಬೇಡಿಕೊಳ್ಳಿರಿ ನಿಮಗೆ ದೊರೆಯುವದು; ಹುಡುಕಿರಿ ನಿಮಗೆ ಸಿಕ್ಕುವದು; ತಟ್ಟಿರಿ ನಿಮಗೆ ತೆರೆಯುವದು" (ಲೂಕ 11:9) ಮಧ್ಯದಲ್ಲಿ ಬರುತ್ತದೆ. ಗ್ರೀಕ್ ಪಠ್ಯವು "ಬೇಡಿಕೊಳ್ಳುತ್ತಾ ಇರ್ರಿ" "ಹುಡುಕುತ್ತಾ ಇರ್ರಿ" ಮತ್ತು "ತಟ್ಟುತ್ತಾ ಇರ್ರಿ" ಎಂದು ಒತ್ತು ನೀಡುತ್ತದೆ.

ಹೇಗೂ, ನಾವು ಕೊನೆಯಲ್ಲಿ ಸಾರ್ವಭೌಮನಾದ ದೇವರ ಚಿತ್ತಕ್ಕೆ ಒಪ್ಪಿಸುತ್ತೇವೆ. ನಾವು ಪ್ರಾರ್ಥನೆ ಮಾಡುವದನ್ನು ಮುಂದುವರೆಸುತ್ತೇವೆ ಮತ್ತು ಆತನ ಚಿತ್ತದ ಕುರಿತು ನಮಗಿರುವ ಉತ್ತಮವಾದ ತಿಳುವಳಿಕೆಗೆ ಅನುಸಾರವಾಗಿ ನಮ್ಮ ಬೇಡಿಕೆಗಳನ್ನು ಇಡುತ್ತೇವೆ. ನಮ್ಮ ತಿಳುವಳಿಕೆಯು ಆತನ ಚಿತ್ತಕ್ಕಿಂತ ಭಿನ್ನವಾಗಿದ್ದರೆ ನಾವು ಸ್ವ–ಇಚ್ಛೆಯಿಂದ ಆತನ ಉದ್ದೇಶಕ್ಕೆ ಅಧೀನರಾಗುತ್ತೇವೆ. ಅಪೋಸ್ತಲನಾದ ಪೌಲನು ಮತ್ತು ಯೇಸು ತಾನೇ ಇದಕ್ಕೆ ಅದ್ಭುತವಾದ ಮಾದರಿಯಾಗಿದ್ದಾರೆ. ಪೌಲನು ಮೂರು ಸಾರಿ "ಶೂಲ" ವನ್ನು ತನ್ನಿಂದ ತೆಗೆಯಬೇಕೆಂದು ಪ್ರಾರ್ಥಿಸಿದನು ಮತ್ತು ದೇವರು ಆತನಿಗಾಗಿ ಉತ್ತಮವಾದ ಯೋಜನೆಯನ್ನು ಇಟ್ಟುಕೊಂಡಿದ್ದಾನೆಂಬುದನ್ನು ಅರಿತುಕೊಂಡನು (2ಕೊರಿಂಥ 12:7–10). ಯೇಸು ಮೂರು ಸಾರಿ "ಶ್ರಮೆಯ ಪಾತ್ರೆ" ಯನ್ನು ತನ್ನಿಂದ ತೆಗೆಯುವಂತೆ ಪ್ರಾರ್ಥಿಸಿದನು ಆದಾಗ್ಯೂ "ನನ್ನ ಚಿತ್ತವಲ್ಲ ನಿನ್ನ ಚಿತ್ತವೇ ಆಗಲಿ" (ಮತ್ತಾಯ 26:36–44) ಎಂದನು. ಇದು ಬಿಟ್ಟುಕೊಡುವ ಸ್ವೀಕೃತಿಯಲ್ಲ, ಅದರೆ ದೇವರ ಜ್ಞಾನ ಮತ್ತು ಒಳ್ಳೇತನದಲ್ಲಿ ಇರುವ ಸಂಪೂರ್ಣವಾದ ಭರವಸೆಯಾಗಿದೆ.

"ನಿನಗೆ ಮೊರೆಯಿಟ್ಟು ವಿಮುಕ್ತರಾದರು; ನಿನ್ನಲ್ಲಿ ವಿಶ್ವಾಸವಿಟ್ಟು ಆಶಾಭಂಗಪಡಲಿಲ್ಲ" ಕೀರ್ತನೆ 22:5.

### ನಡತೆ ಎಣಿಕೆಗೆ ಬರುತ್ತದೆ

ಪ್ರಾರ್ಥನೆಗೆ ಉತ್ತರಗಳು ಅರ್ಹತೆಯನ್ನು, ನಾವು ಎಷ್ಟು ಕಾಲದವರೆಗೆ ಪ್ರಾರ್ಥಿಸಿದೆವು, ಎಷ್ಟು ಗಟ್ಟಿಯಾಗಿ ಪ್ರಾರ್ಥಿಸಿದೆವು, ಎಷ್ಟು ಸುಂದರವಾಗಿ ನಾವು ಪ್ರಾರ್ಥಿಸಿದೆವು ಎಂಬುದನ್ನು ಅವಲಂಭಿಸಿರುವದಿಲ್ಲ. ನಮ್ಮ ಪ್ರಾರ್ಥನೆಗೆ ಉತ್ತರಗಳು ದೇವರ ಕೃಪೆಯಾಗಿವೆ. ಹೇಗೂ, ನಡತೆಯು ಎಣಿಕೆಗೆ ಬರುವದಿಲ್ಲ. ನಾವು ಪ್ರಾರ್ಥಿಸುವಾಗ ನಮ್ಮ ಹೃದಯದ ಸ್ಥಿತಿ ಎಣಿಕೆಗೆ ಬರುತ್ತದೆ.

ನಾವು ಬೆಳಕಿನಲ್ಲಿ ನಡೆಯುತ್ತಿರುವ ಹಾಗೆ ನಮಗೆ ಅನ್ಯೋನ್ಯತೆ ದೊರೆಯುತ್ತದೆ. ನಮ್ಮ ಹೃದಯಗಳು ದೇವರಿಂದ ದೂರ ಹೋಗುವಾಗ ನಾವು ಆತನ ಸನ್ನಿಧಿಯಲ್ಲಿ ನೆಮ್ಮದಿಯಿಂದ ಇರುವದಿಲ್ಲ. ಆದಾಮನಂತೆ, ನಾವು ದೇವರನ್ನು ಸಂಧಿಸುವದಕ್ಕೆ ಬದಲಾಗಿ ಮುಚ್ಚಿಟ್ಟುಕೊಳ್ಳುತ್ತೇವೆ. ಇದರಿಂದಾಗಿ ನಮಗೆ ಪ್ರಾರ್ಥಿಸುವ ಹಂಬಲ ಇರುವದಿಲ್ಲ.

ಕೀರ್ತನೆಗಾರನು ಹೀಗೆ ಬರೆಯುತ್ತಾನೆ, "ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದ್ದರೆ ಸ್ವಾಮಿಯು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ" (ಕೀರ್ತನೆ 66:18). ನಾನು ದೇವರ ವಿರೋಧವಾಗಿ ಮತ್ತು ಅವಿಧೇಯತೆಯಿಂದ ನಡೆದಿದ್ದರೆ, ದೇವರು ನನ್ನ ಪ್ರಾರ್ಥನೆಯನ್ನು ಕೇಳಲು "ತನ್ನ ಕಿವಿಗಳನ್ನು ನೀಡದಿರುವದು" ಅಸಾಮಾನ್ಯವೇನಲ್ಲ (ಧರ್ಮೋಪದೇಶಕಾಂಡ 1:45; 1 ಸಮುವೇಲ 8:18). ದೇವರ ವಾಕ್ಯಕ್ಕೆ ಅವಿಧೇಯರಾಗಿ ಜೀವಿಸುವದರ ಪ್ರಾರ್ಥನೆಯನ್ನು ದೇವರು ನಿಜವಾಗಿಯೂ ಮೆಚ್ಚುವದಿಲ್ಲ. "ಧರ್ಮೋಪದೇಶಕ್ಕೆ ಕಿವಿಗೊಡದವನು ಮಾಡುವ ದೇವಪ್ರಾರ್ಥನೆಯೂ ಅಸಹ್ಯ" (ಜ್ಞಾನೋಕ್ತಿ 28:9). ನಾವು ಪಾಪಿಗಳಾಗಿ ಜೀವಿಸಿದ್ದಾಗಲೂ ದೇವರು ನಮ್ಮ ಪ್ರಾರ್ಥನೆಗೆ ಬೇಗನೆ ಉತ್ತರಿಸಿದರೆ, ಅದು ನಮ್ಮನ್ನು ಆ ಮಾರ್ಗದಿಂದ ತಿರುಗಿಕೊಳ್ಳುವದಕ್ಕೆ ಬದಲಾಗಿ ಪಾಪದಲ್ಲಿ ಜೀವಿಸುವದಕ್ಕೆ ಪ್ರೋತ್ಸಾಹವನ್ನು ನೀಡುತ್ತದೆ.

ಇದಕ್ಕೆ ಭಿನ್ನವಾಗಿ, "ಶಿಷ್ಟರ ಬಿನ್ನಪ ಆತನಿಗೆ (ದೇವರಿಗೆ) ಒಪ್ಪಿತ" (ಜ್ಞಾನೋಕ್ತಿ 15:8). ಅವನ ಕಿವಿಗಳು ನೀತಿವಂತರ ಕೂಗನ್ನು ಗಮನಿಸುತ್ತವೆ, "ಯೆಹೋವನು ದುಷ್ಟರಿಗೆ ದೂರ, ಶಿಷ್ಟರ ಬಿನ್ನಹಕ್ಕೆ ಹತ್ತಿರ" (ಜ್ಞಾನೋಕ್ತಿ 15:29). ಯಾರು ವಿಧೇಯತೆಯಲ್ಲಿ ಜೀವಿಸುತ್ತಾರೋ ಅವರ ಪ್ರಾರ್ಥನೆಯನ್ನು ಕೇಳಲು ದೇವರು ಸಿದ್ದನಾಗಿರುತ್ತಾನೆ. ಪ್ರಾರ್ಥನೆ ಮತ್ತು ದೈವಿಕ ನಡತೆ ಮತ್ತು ಪರಿಶುದ್ಧ ಜೀವಿತ ಒಟ್ಟಾಗಿ ಹೋಗುತ್ತವೆ. "ನೀತಿವಂತನ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಯು ಬಹು ಬಲವಾದದ್ದು ಮತ್ತು ಪರಿಣಾಮಕಾರಿಯಾದದ್ದು" (ಯಾಕೋಬ 5:16). ನಾವು ವಿವೇಚನೆಯಿಂದ ಜೀವಿಸಬೇಕು. ಇದರಿಂದಾಗಿ ನಮ್ಮ ಪ್ರಾರ್ಥನೆಗಳಿಗೆ ಅಡತಡೆಯಾಗುವದಿಲ್ಲ; ಸ್ವಚ್ಛವಾದ ಮನಸ್ಸಿನಿಂದ ಜೀವಿಸಬೇಕು. ಇದರಿಂದಾಗಿ ನಾವು ಪ್ರಾರ್ಥಿಸುವಾಗ ದೇವರ ಮುಂದೆ ಭರವಸೆಯುಳ್ಳವರಾಗಿರುತ್ತೇವೆ; ನಿಸ್ವಾರ್ಥವಾದ ಉದ್ದೇಶಗಳೊಂದಿಗೆ ಜೀವಿಸಬೇಕು. ಇದರಿಂದಾಗಿ ದೇವರು ನಾವು ಬೇಡಿದ್ದನ್ನು ನಮಗೆ ಕೊಡುತ್ತಾನೆ (ಯಾಕೋಬ 4:3; 1ಪೇತ್ರ 3:7; 1ಯೋಹಾನ 3:21–22).

ಯಾಕಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ, ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ. ಕೆಡುಕರಿಗೋ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ." – 1ಪೇತ್ರ 3:12.

**ದೇವರೊಂದಿಗೆ ಜೊತೆಯಾಗಿರುವದು**

ನಮಗೆ ಇಂಗ್ಲೆಂಡ್ ದೇಶದ ರಾಣಿಯನ್ನು ಸಂದರ್ಶಿಸುವ ಅವಕಾಶ ದೊರೆತರೆ ನಾವು ಎಷ್ಟೋ ಸೌಭಾಗ್ಯವಂತರೆಂದು ಭಾವಿಸುತ್ತೇವೆ, ನಮ್ಮನ್ನು ರಾಜ್ಯಪಾಲಕರ ಅರಮನೆಗೆ ಆಮಂತ್ರಿಸಿದ್ದಲ್ಲಿ ಅಥವಾ ವೈಟ್ ಹೌಸನಲ್ಲಿ ಒಂದು ರಾತ್ರಿಯನ್ನು ಕಳೆಯುವ ಅವಕಾಶ ದೊರೆತಲ್ಲಿ, ನಮ್ಮಲ್ಲಿ ಕೆಲವರಿಗೆ ಇಂಥಹ ಅವಕಾಶ ಯಾವಾಗಾದರೊಮ್ಮೆ ದೊರೆಯುತ್ತದೆ. ಆದರೆ, ನಾವು ಸರ್ವಲೋಕದ ಸೃಷ್ಟಿ ಕರ್ತನ, ರಾಜಾಧಿ ರಾಜನ, ಕರ್ತರ ಕರ್ತನ

ಸನ್ನಿಧಿಯಲ್ಲಿ ಪ್ರವೇಶಿಸಲು ನಮಗೆ ಪ್ರತಿದಿನ ಅವಕಾಶ ದೊರೆಯುತ್ತದೆ (ಪ್ರಕಟನೆ 19:16). ಇದಕ್ಕಿಂತ ದೊಡ್ಡ ಗೌರವವಿಲ್ಲ. ದುರ್ದೈವದಿಂದ, ನಾವು ದೇವರ ಸನ್ನಿಧಿಯಲ್ಲಿ ಪ್ರಾರ್ಥನೆಗಾಗಿ ಬರುವದು ಎಷ್ಟು ರೂಢಿಯಾಗಿ ಮಾಡಿಕೊಂಡಿದ್ದೇವೆಂದರೆ ನಾವು ಆ ಸೌಭಾಗ್ಯದ ಗಂಭೀರತೆಯನ್ನು ಕಳೆದುಕೊಳ್ಳುತ್ತೇವೆ (ಯೆರೆಮೀಯ 5:22). ನಿಜವಾಗಿಯೂ ನಾವು ದೇವರ ಆಮಂತ್ರಣವನ್ನು ನಮ್ಮ "ವ್ಯಸನದೊಂದಿಗೆ" ಹಿಂತಿರುಗಿಸುತ್ತೇವೆ ಮತ್ತು ಆತನ ಸನ್ನಿಧಿಯನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾಗತ್ತೇವೆ.

ಬಹುಶಃ ನಾವು ಯಾರನ್ನು ಸಂಧಿಸುತ್ತಿದ್ದೇವೆ ಮತ್ತು ನಾವು ಯಾರೊಂದಿಗೆ ಮಾತನಾಡುತ್ತೇವೆ ಎಂಬುದನ್ನು ಪರಿಗಣಿಸುವದಾದರೆ ನಮ್ಮ ಪ್ರಾರ್ಥನಾ ಜೀವಿತದಲ್ಲಿ ಪಲ್ಲಟವನ್ನುಂಟು ಮಾಡುತ್ತದೆ. ನಮ್ಮ ಪ್ರಾರ್ಥನಾ ಸಮಯಗಳು ನಮ್ಮ ಮೇಲೆ ಮತ್ತು ನಮ್ಮ ಪ್ರಾರ್ಥನಾ ಬೇಡಿಕೆಗಳ ಮೇಲೆ ಕೇಂದ್ರಿಕೃತವಾಗುವದಕ್ಕೆ ಬದಲಾಗಿ ಆತನ ಮೇಲೆ ಕೇಂದ್ರಿಕೃತವಾಗಿರಲಿ. ಸಭಾಪಾಲಕರಾದ ಕ್ಲೆಮೆಂಟ್ ಪ್ರಾರ್ಥನೆಯನ್ನು "ದೇವರ ಒಡನಾಟದಲ್ಲಿರುವದು" ಎಂದು ನೋಡುವ ರೀತಿಯಲ್ಲಿ ನೋಡೋಣ. ನಮಗೆ ಆತನೊಂದಿಗೆ ಒಂದೇ ಸಾರಿ ಸಂದರ್ಶನ ಇರುವದಿಲ್ಲ, ಬದಲಾಗಿ ಆತನೊಂದಿಗೆ ಜೀವಿಸುವ ಆತ್ಮೀಯವಾದ ಸಂಬಂಧ ಇರುತ್ತದೆ. ಆತನ ಒಡನಾಟದಲ್ಲಿರುವದು ನಾವು ಯಾವುದಕ್ಕಾಗಿ ಜೀವಿಸುತ್ತೇವೆ ಎಂಬುದಾಗಿದೆ, "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ" (ಅ.ಕೃ.17:28).

ನಾನು ನನ್ನ ಹೆಂಡತಿಯೊಂದಿಗೆ ಭೇಟಿಯನ್ನು ನಿರ್ಧರಿಸುತ್ತಿದ್ದ ಸಮಯದಲ್ಲಿ ನಾನು ಅವಳನ್ನು ನೋಡಲು, ಅವಳೊಂದಿಗೆ ಮಾತನಾಡಲು, ಮತ್ತು ಅವಳನ್ನು ನನ್ನ ಸಮೀಪದಲ್ಲಿಟ್ಟುಕೊಳ್ಳಲು ಆತುರವುಳ್ಳವನಾಗಿದ್ದೆನು (50 ವರ್ಷಗಳ ವೈವಾಹಿಕ ಜೀವಿತದ ನಂತರವೂ ನಾನು ಹೀಗೆ ಭಾವಿಸುತ್ತೇನೆ). ದೇವರು ನಮ್ಮ ಜೀವಿತದ ಪ್ರೀತಿಯಾಗಿದ್ದಾನೆ. ಆತನ ಒಡನಾಟದಲ್ಲಿ ಆನಂದಿಸೋಣ!

ಆತನು ನನ್ನ ಜೊತೆಯಲ್ಲಿ ಹೆಜ್ಜೆ ಹಾಕುತ್ತಾನೆ, ಆತನು ನನ್ನೊಂದಿಗೆ ಮಾತನಾಡುತ್ತಾನೆ ಮತ್ತು ಆತನು ನಾನು ನಿನ್ನವನಾಗಿದ್ದೇನೆ ಎಂದು ಹೇಳುತ್ತಾನೆ. ನಾವು ಅಲ್ಲಿ ಕಾದಿರುವಾಗ ಎಂಥಹ ಆನಂದವನ್ನು ಹಂಚಿಕೊಳ್ಳುತ್ತೇವೆ. ಅದನ್ನು ಯಾರೂ ಎಂದೂ ತಿಳಿಯಲಾರರು– ಸಿ. ಆಸ್ಟೀನ್ ಮೈಲ್ಸ್.

"ಉತ್ಸಾಹ ಧ್ವನಿಯನ್ನು ಕೇಳಿದ ಜನರು ಧನ್ಯರು; ಯೆಹೋವನೇ ಅವರು ನಿನ್ನ ಮುಖಪ್ರಕಾಶದಲ್ಲಿ ಸಂಚರಿಸುತ್ತಾರೆ" – ಕೀರ್ತನೆ 89:15.

### ದೇವರ ಪ್ರಸನ್ನತೆಯಲ್ಲಿ ಕಾಲಕಳೆಯುವದು

ಅನೇಕ ವೇಳೆಯಲ್ಲಿ ನಮ್ಮ ಪ್ರಾರ್ಥನೆಯ ಸಮಯಗಳು ಯಾಂತ್ರಿಕವಾಗಿರುತ್ತವೆ. ನಾವು "ಸ್ತುತಿಯ ಸಂಕೇತದ" ಪದದೊಂದಿಗೆ ಪ್ರಾರಂಭಿಸುತ್ತೇವೆ, ಬೇಗನೇ ನಮ್ಮ "ಅವಶ್ಯಕತೆಗಳ ಪಟ್ಟಿ" ಬೇಡಿಕೆಯೆಡೆಗೆ ಚಲಿಸುತ್ತೇವೆ ಮತ್ತು ಬೇಗನೆ "ಪ್ರಾಯೋಗಿಕ ವಂದನೆ" ಯೊಂದಿಗೆ ಮುಕ್ತಾಯಗೊಳಿಸುತ್ತೇವೆ. ನಾವು ದೇವರ ಪ್ರಸನ್ನತೆಯಲ್ಲಿ ಕಾಲಕಳೆಯುವುದನ್ನು ಕಲಿಯಬೇಕು. ಯಾವಾಗಲೂ ಮಾತನಾಡುವ ಅವಶ್ಯಕತೆಯಿಲ್ಲ. ನಿಶಬ್ದವಾಗಿದ್ದು ಆತನು ನಮಗೆ ಹೇಳುವದನ್ನು ಕೇಳುವದು ಹೆಚ್ಚು ಲಾಭದಾಯಕ.

ನಾವು ದೇವರ ಪ್ರಸನ್ನತೆಯಲ್ಲಿ ನಿಲ್ಲುವದಾದರೆ, ಪವಿತ್ರಾತ್ಮನು ನಮ್ಮೊಂದಿಗೆ ನಮ್ಮ ವರ್ತನೆ, ಉದ್ದೇಶ ಮತ್ತು ನಡೆತೆಯೊಂದಿಗೆ ವ್ಯವಹರಿಸಲು ಪ್ರಾರಂಭಿಸುತ್ತಾನೆ (ಗಲಾತ್ಯ 5:16–26). ಆತನು ನಮಗೆ ನಮ್ಮ ಸ್ವಾರ್ಥ ಕೃತ್ಯವನ್ನು, ಹರಿತವಾದ ಪ್ರತಿಕ್ರಿಯೆಯನ್ನು, ಅಹಂಕಾರದ ವರ್ತನೆಯನ್ನು ಅಥವಾ ಕ್ಷಮಿಸುವದಕ್ಕೆ ವಿಫಲವಾದದ್ದನ್ನು ಜ್ಞಾಪಿಸಬಹುದು. ನಾವು ಮುಚ್ಚಿಟ್ಟ ವಿಚಾರಗಳು ಮೇಲಕ್ಕೆ ಬರುತ್ತವೆ. ಕ್ರಿಸ್ತನ ಅಧಿಕಾರಕ್ಕೆ ಒಳಪಡಿಸುವ ಅವಶ್ಯಕತೆಯನ್ನು ಹೊಂದಿರುವ ನಮ್ಮ ಹೃದಯದ ಅಂತರಂಗದ ಲೋಕವನ್ನು ಬಹಿರಂಗಪಡಿಸುತ್ತದೆ (ಕೊಲಸ್ಸೆ 3:15).

ಪ್ರಾರ್ಥನೆಯು ನಮ್ಮೊಳಗಿರುವ ತಪ್ಪಾದ, ಕೆಟ್ಟತನ ಮತ್ತು ದೇವರಿಗೆ ಮೆಚ್ಚಿಕೆಯಲ್ಲದ ಎಲ್ಲವನ್ನೂ ಬಹಿರಂಗಪಡಿಸುತ್ತದೆ. ಅದು ಉದಾಸೀನತೆ, ಅಸಮಾಧಾನ, ಹೆಮ್ಮೆ ಮತ್ತು ಸ್ವಾರ್ಥವನ್ನು ಎದುರಿಸುತ್ತದೆ. ಪ್ರಾರ್ಥನೆ ಆತ್ಮೀಕ ಉದಾಸೀನತೆ ಮತ್ತು ನೀರಸತನವನ್ನು ಎದುರಿಸುತ್ತದೆ. ನಮ್ಮ ಹೃದಯದಲ್ಲಿರುವ ವಾತ್ಸಲ್ಯವನ್ನು ತಿರುಗಿ ಸ್ಥಾಪಿಸುತ್ತದೆ (2ಕೊರಿಂಥ 4:6). ಪ್ರಾರ್ಥನೆಯು ನಮ್ಮನ್ನು ಲೌಕೀಕತೆಯಿಂದ, ಸ್ವಯಂ–ತೃಪ್ತಿ ಮತ್ತು ಸ್ಥಾನದ ಹಂಬಲದಿಂದ ದೇವರ ಪ್ರೀತಿ ಮತ್ತು ದೇವರ ಸಂಗತಿಗಳೆಡೆಗೆ ಹಿಂತಿರುಗಲು ಸಹಾಯ ಮಾಡುತ್ತದೆ (ಇಬ್ರಿಯ 10:16).

ದೇವರ ಪ್ರಸನ್ನತೆಯ ಬೆಳಕು ಕೆಲವೊಮ್ಮೆ ನಮ್ಮ ಹೃದಯದ ಗುಪ್ತ ಪಾಪಗಳನ್ನು ಬಹಿರಂಗಪಡಿಸಲು ಪ್ರಾರಂಭಿಸುತ್ತದೆ (ಕೀರ್ತನೆ 90:8). ಇದು ಸಂಭವಿಸುವಾಗ ಬೆಳಕಿನಿಂದ ದೂರ ಹೋಗುವ ಪ್ರವೃತ್ತಿ ಇರುತ್ತದೆ (ಯೋಹಾನ 3:19–21). ಆದುದರಿಂದ ನಾವು ನಮ್ಮ ಪ್ರಾರ್ಥನೆಯ ಸಮಯವನ್ನು ಕುಂಠಿಗೊಳಿಸುತ್ತೇವೆ. ನಾವು ಆತನ ಪ್ರಸನ್ನತೆಯಲ್ಲಿ ಕಾಲಕಳೆಯುವುದನ್ನು ಕಲಿಯಬೇಕು, ಆತನ ಮುಂದೆ ಎಲ್ಲವನ್ನೂ ತೆರೆದಿಡುವದನ್ನು ಕಲಿಯಬೇಕು, ನಂತರ ಆತನ ಪ್ರಸ್ನತೆಯಲ್ಲಿ ಜೀವಿಸುತ್ತಿರುವ ಹಾಗೆ ಶುದ್ಧೀಕರಿಸುವ ಮತ್ತು ಪರಿವರ್ತಿಸುವ ಕಾರ್ಯದಲ್ಲಿ ಒಪ್ಪಿಸಿಕೊಡಬೇಕು. ನಾವು ಬಹಳ ಸಮಯ ಕಾಲಕಳೆಯುವುವದಾದರೆ, ನಾವು ಆತ್ಮೀಕವಾಗಿ ಬಲಹೊಂದುತ್ತೇವೆ (ಕೀರ್ತನೆ 89:15–17).

ದೇವರ ಪ್ರಸನ್ನತೆಯಲ್ಲಿ ಕಾಲಕಳೆಯುವುದು ಕೊನೆಗೆ ಸಂತೋಷ, ಸಮಾಧಾನ, ಮತ್ತು ಪ್ರಭುದ್ಧತೆಯನ್ನು ತರುತ್ತದೆ. ನಾವು ನಮ್ಮನ್ನು ಬಹಳವಾಗಿ ಪ್ರೀತಿಸುವ ದೇವರೊಂದಿಗೆ ಅಮೂಲ್ಯವಾದ ಸಮಯವನ್ನು ಕಳೆಯುತ್ತೇವೆ.

ದೇವಾ ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೋ; ನನ್ನನ್ನು ಶೋಧಿಸಿ ನನ್ನ ಆಲೋಚನೆಗಳನ್ನು ಗೊತ್ತುಮಾಡು. ನಾನು ಕೇಡಿನ ಮಾರ್ಗದಲ್ಲಿರುತ್ತೇನೋ ಏನೋ ನೋಡಿ ಸನಾತನ ಮಾರ್ಗದಲ್ಲಿ ನನ್ನನ್ನು ನಡೆಸು." – ಕೀರ್ತನೆ 139:23, 24.

**ಕರ್ತನಲ್ಲಿ ಕಾದಿರುವದು**

ಸತ್ಯವೇದವು ದೇವರಲ್ಲಿ ಕಾಯ್ದಿರುವದನ್ನು ಮತ್ತು ಹಾಗೆ ಕಾಯ್ದಿರುವದರಿಂದ ಆಗುವ ಲಾಭಗಳ ಸಾಕ್ಷಿಯನ್ನು ಹೇಳುವದು ಎರಡನ್ನು ಪ್ರೋತ್ಸಾಹಿಸುತ್ತದೆ, "ಯೆಹೋವನನ್ನು ನಿರೀಕ್ಷಿಸಿಕೊಂಡಿರು; ದೃಢವಾಗಿರು; ನಿನ್ನ ಹೃದಯವು ಧೈರ್ಯದಿಂದಿರಲಿ; ಯೆಹೋವನನ್ನು ನಿರೀಕ್ಷಿಕೊಂಡೇ ಇರು" (ಕೀರ್ತನೆ 27:14). "ಯೆಹೋವನು ನ್ಯಾಯಸ್ವರೂಪನಾದ ದೇವರು; ಆತನಿಗಾಗಿ ಕಾದಿರುವವರೆಲ್ಲರೂ ಧನ್ಯರು" (ಯೆಶಾಯ

30:18). “ನಾನು ಯೆಹೋವನಿಗೋಸ್ಕರ ನಿರೀಕ್ಷಿಸಿಯೇ ನಿರೀಕ್ಷಿಸಿದೆನು; ಆತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು” (ಕೀರ್ತನೆ 40:1).

“ಕರ್ತನಲ್ಲಿ ಕಾದಿರುವದು” ಎಂದರೇನು? “ಏನು” ಎಂಬ ಇಂಗ್ಲೀಷ ಪದಕ್ಕೆ ಅನೇಕ ಅರ್ಥಗಳಿವೆ. ನಾವು ನಮ್ಮ ವಾಹನದಲ್ಲಿ ಕುಳಿತುಕೊಂಡು ಸಂಚಾರದ ಸಂಕೇತಗಳ ಬದಲಾವಣೆಗಾಗಿ ಕಾಯುತ್ತೇವೆ. ಪರಿಚಾರಕನು ಮೇಜಿನ ಬಳಿಯಲ್ಲಿ ನಿಂತು ಅವರು ಹೇಳುವ ವಿಚಾರಗಳಿಗಾಗಿ ಕಾಯುತ್ತಿರುತ್ತಾನೆ. ನಾವು ಸರತಿಯಲ್ಲಿ ನಿಂತುಕೊಳ್ಳುವಾಗ ನಮ್ಮ ಸರತಿಗಾಗಿ ಕಾಯುತ್ತೇವೆ. ನಾವು ಯಾರದಾದರೂ ಕರೆ ಬರುವದಿದ್ದಲ್ಲಿ ದೂರವಾಣಿಯ ಮುಂದೆ ಕಾಯುತ್ತೇವೆ. ಹೀಗೆ ನಾವು ಕರ್ತನಿಗಾಗಿ ಕಾದಿರಲು ಪ್ರೋತ್ಸಾಹಿಸುವಾಗ ಅದು ಆತನನ್ನು ಹುಡುಕುವದು ಅಥವಾ ಆತನ ಸನ್ನಿಧಿಯಲ್ಲಿ ಕಾಲಕಳೆಯುವುದು ಎಂಬ ಅರ್ಥಕೊಡುತ್ತದೋ?

ಯೆಶಾಯ 40:31 ರ ಕಿಂಗ್ ಜೇಮ್ಸ್‌ನ ಅವತರಣಿಕೆಯಲ್ಲಿರುವ ವಚನವು ಕಾದಿರುವದಕ್ಕೆ ಬಹುಶಃ ಜನಪ್ರಿಯ ವಚನವಾಗಿದೆ, “ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು (ಏರುವರು); ಓಡಿ ದಣಿಯರು, ನಡೆದು ಬಳಲರು” (ಯೆಶಾಯ 40:31; NKJV). “ಕಾಯುವದು” ಎಂಬ ಪದದ ಇಬ್ರಿಯ ಅನುವಾದ, ಬಲವಾದ ಹಗ್ಗವನ್ನು ಮಾಡುವ ಮುರಿಗೆ ಹಾಕಿಕೊಂಡ ಹುರಿಗಳು ಎಂಬದಾಗಿ.

ಅವು ಬಿಡಿಯಾಗಿರುವಾಗ ಬಲಹೀನವಾಗಿರುತ್ತವೆ, ಆದರೆ ಅವುಗಳನ್ನು ಹೆಣೆಯುವಾಗ ಅವು ಬಲಿಷ್ಟವಾಗುತ್ತವೆ (ಪ್ರಸಂಗಿ 4:12). ಅದು ಒಂದು ಚಿಕ್ಕ ಮಗು ತನ್ನ ತಂದೆಯ ಬಲವಾದ ಕುತ್ತಿಗೆಯನ್ನು ತನ್ನ ತೋಳುಗಳಿಂದ ಹಿಡಿದುಕೊಳ್ಳುವಂತೆ ಇದೆ. ಕರ್ತನಲ್ಲಿ ಕಾದಿರುವದು ಎಂದರೆ ನಮ್ಮನ್ನು ಆತನ ಸುತ್ತಲೂ ನಮ್ಮ ಸಂಪೂರ್ಣ ನಿರೀಕ್ಷೆಯನ್ನು ಮತ್ತು ಭರವಸೆಯನ್ನು ಆತನ ಮೇಲೆ ಹಾಕಿ ಹೆಣೆದುಕೊಳ್ಳುವದು. ನಮ್ಮ ಬಲವು ನಮ್ಮ ಮೇಲೆ ಅಲ್ಲ, ನಾವು ಆತುಕೊಳ್ಳುವ ಸರ್ವಜ್ಞಾನಿಯಾದ ದೇವರ ಮೇಲೆ.

ನಾವು ಆತನನ್ನು ಆತುಕೊಳ್ಳುತ್ತಿರುವ ಹಾಗೆ, ಆತನು ತಮ್ಮ ಶಾಶ್ವತವಾದ ಕರಗಳಿಂದ ನಮ್ಮನ್ನು ಅಪ್ಪಿಕೊಳ್ಳುತ್ತಾನೆ (ಧರ್ಮೋಪದೇಶಕಾಂಡ 33:27; ಯೆಶಾಯ 40:11).

“ನಾನು ಯೆಹೋವನನ್ನು ಎದುರುನೋಡುತ್ತೇನೆ; ನನ್ನ ಪ್ರಾಣವು ಆತನನ್ನು ಕಾದುಕೊಂಡಿದೆ; ಆತನ ನುಡಿಯನ್ನು ನಿರೀಕ್ಷಿಸಿಕೊಂಡಿದ್ದೇನೆ.” – ಕೀರ್ತನೆ 130:5.

**ವೈಯಕ್ತಿಕ ಮತ್ತು ಸಮುದಾಯಿಕ ಪ್ರಾರ್ಥನೆ**

ನಾವು ಪ್ರಾರ್ಥಿಸುವಾಗ, ನಾವು ಒಬ್ಬರೇ ಪ್ರಾರ್ಥಿಸಬೇಕೋ ಅಥವಾ ಇತರರೊಂದಿಗೆ ಪ್ರಾರ್ಥಿಸಬೇಕೋ? ಸತ್ಯವೇದವು ಎರಡೂ ಸಮಂಜಸವಾಗಿವೆ ಮತ್ತು ಪ್ರಾಮುಖ್ಯವಾಗಿವೆ ಎಂದು ಸೂಚಿಸುತ್ತದೆ.

ಹಳೆ ಒಡಂಬಡಿಕೆಯಲ್ಲಿ ನಮಗೆ ದಾನಿಯೇಲನ ಉದಾಹರಣೆಯಿದೆ. ಅವನು “ತನ್ನ ಮನೆಯ ಮಹಡಿಯ ಕೋಣೆಯಲ್ಲಿ” ದಿನಕ್ಕೆ ಮೂರಾವರ್ತಿ “ಮೊಣಕಾಲೂರಿ ತನ್ನ ದೇವರಿಗೆ ಪ್ರಾರ್ಥನೆಮಾಡಿ ಸ್ತೋತ್ರ ಸಲ್ಲಿಸುತ್ತಿದ್ದನು.” (ದಾನಿಯೇಲ 6:10). ಹೊಸ ಒಡಂಬಡಿಕೆಯಲ್ಲಿ ಅಪೋಸ್ತಲನಾದ ಪೇತ್ರನ ಉದಾಹರಣೆಯನ್ನು ನಾವು ನೋಡುತ್ತೇವೆ, ಆತನು ಪ್ರಾರ್ಥಿಸುವದಕ್ಕಾಗಿ ಮನೆಯ ಮಾಳಿಗೆಯ ಮೇಲೆ ಒಬ್ಬನೇ ಹೋಗುತ್ತಿದ್ದನು

(ಅ.ಕೃ. 10:9), ಕೆಲವೊಮ್ಮೆ ಈಡೀ ರಾತ್ರಿ (ಲೂಕ 15:16), ನಾವು ಪ್ರಾರ್ಥಿಸುವಾಗ ನಮ್ಮ "ಏಕಾಂತ ಕೋಣೆಗೆ" ಹೋಗಿ ಬಾಗಿಲನ್ನು ಮುಚ್ಚಿಕೊಂಡು ಪ್ರಾರ್ಥಿಸಬೇಕು ಎಂದು ಯೇಸು ಬೋಧಿಸಿದ್ದಾನೆ. ಇದರ ಅರ್ಥ ನಾವು ಡಂಭಾಚಾರವನ್ನು ಮತ್ತು ತೋರಿಕೆಯನ್ನು ದೂರವಿರಿಸಬೇಕು, ಇದಲ್ಲದೇ ಈ ರೀತಿಯಾಗಿ ಮಾಡುವದರಿಂದ ನಮ್ಮ ಹೃದಯವನ್ನು ದೇವರ ಮುಂದೆ ತೆರೆದಿಡಲು ನಮಗೆ ಸಂಕೋಚವಿರುವದಿಲ್ಲ. "ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು (ಬಹಿರಂಗವಾಗಿ)" (ಮತ್ತಾಯ 6:5,6).

ಹೇಗೂ, ದೇವರ ವಾಕ್ಯದಲ್ಲಿ ಸಮುದಾಯಿಕ ಮತ್ತು ಸಾರ್ವಜನಿಕ ಪ್ರಾರ್ಥನೆಯನ್ನು ಸಹ ದಾಖಲಿಸಲಾಗಿದೆ (1 ಅರಸುಗಳು 8:22–53; ಅ.ಕೃ. 12:5–16). ಹೊಸ ಒಡಂಬಡಿಕೆಯಲ್ಲಿ ಸಭೆಯು ಕೂಡಿಬರುವಾಗ, "ಅವರು ಏಕಮನಸ್ಸಾಗಿ ದೇವರನ್ನು ಗಟ್ಟಿಯಾದ ಧ್ವನಿಯಿಂದ ಪ್ರಾರ್ಥಿಸಿದರು" (ಅ.ಕೃ. 4:24). ವಿಶ್ವಾಸಿಗಳು ಅನೇಕಾವರ್ತಿ ಇತರರೊಂದಿಗೆ ಒಟ್ಟಾಗಿ ಪ್ರಾರ್ಥಿಸುವಾಗ ಬಲವನ್ನು ಹೊಂದುತ್ತಾರೆ. ಅನೇಕಾವರ್ತಿ ಸಮುದಾಯಿಕ ಪ್ರಾರ್ಥನೆಗಳು ನಾವು ಐಕ್ಯತೆಯೊಂದಿಗೆ ವಿಶೇಷವಾದ ಬೇಡಿಕೆಗಳ ಮೇಲೆ ಕೇಂದ್ರಿಕರಿಸುವಾಗ ನಮ್ಮ ನಂಬಿಕೆಯನ್ನು ಮತ್ತು ಪ್ರಯೋಜನೀಯತೆಯನ್ನು ಹೆಚ್ಚಿಸುತ್ತವೆ. ಹೇಗೂ, ಪ್ರಾರ್ಥನೆಯ ವೈಯಕ್ತಿಕ ಸ್ವರೂಪದಿಂದಾಗಿ, ಸಮುದಾಯಿಕ ಪ್ರಾರ್ಥನೆಯು ವೈಯಕ್ತಿಕ ಪ್ರಾರ್ಥನೆಗೆ ಇರುವ ಬದಲಿ ವ್ಯವಸ್ಥೆಯಲ್ಲ.

ಪ್ರಾರ್ಥನೆಗಳನ್ನು ಏಕಾಂತದಲ್ಲಿ ಸಮರ್ಪಿಸಬೇಕು, ಆದರೆ ಅದು ಯಾವಾಗಲೂ ನಮ್ಮ ಸಾಮಾಜಿಕ ಜೀವಿತದ ಮೇಲೆ ಪರಿಣಾಮಬೀರಬೇಕು. ದೇವರೊಂದಿಗೆ ನಮ್ಮ ವೈಯಕ್ತಿಕವಾದ ಸಂಬಂಧವು ಇತರರೊಂದಿಗೆ ನಮ್ಮ ಸಂಬಂಧಗಳ ಮೇಲೆ ಪ್ರಭಾವಬೀರುತ್ತದೆ. ತೋರಿಕೆಯ ಪ್ರಾರ್ಥನಾ ಜೀವಿತ ತೋರಿಕೆಯ ಸಂಬಂಧಗಳನ್ನು ಹೊಂದಿರುತ್ತದೆ. ಪ್ರಾರ್ಥನಾ ಜೀವಿತ ನಮ್ಮ ಕುಟುಂಬದ ಮೇಲೆ, ನಮ್ಮ ಕೆಲಸಗಳ ಮೇಲೆ, ನಮ್ಮ ಸಭೆಯ ಮೇಲೆ ಮತ್ತು ನಮ್ಮ ಸಮಾಜದ ಮೇಲೆ ಪ್ರಭಾವ ಬೀರುತ್ತದೆ. ಪ್ರಾರ್ಥನೆ ಮಾಡೋಣ!

"ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆಮಾಡುತ್ತಾ, ಎಚ್ಚರವಾಗಿರ್ರಿ." – ಎಫೆಸೆ 6:18

**ಉಪವಾಸ**


ಉಪವಾಸವೆಂದರೆ ಉದ್ದೇಶಪೂರ್ವಕವಾಗಿ ಆಹಾರವನ್ನು ಸೇವಿಸದೇ ಇರುವದು. ಉಪವಾಸವು ಅನೇಕಾವರ್ತಿ ವಿಶೇಷವಾದ ಪ್ರಾರ್ಥನೆಯೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ಹಳೆ ಮತ್ತು ಹೊಸ ಒಡಂಬಡಿಕೆ ಎರಡರಲ್ಲೂ ದೇವಜನರು ಉಪವಾಸ ಮಾಡಿರುವುದರ ಕುರಿತಾಗಿ ಉಲ್ಲೇಖಗಳಿವೆ (1ಸಮುವೇಲ 7:6; ನೆಹಮೀಯ 1:4; ಅ.ಕೃ. 10:10; 2ಕೊರಿಂಥ 6:5). ಯೇಸು ತಾನೇ ಉಪವಾಸವಿದ್ದನು ಮತ್ತು ತಾನು ಪರಲೋಕಕ್ಕೆ ಏರಿ ಹೋದ ಮೇಲೆ ತನ್ನ ಶಿಷ್ಯರು ಉಪವಾಸ ಮಾಡುವರು ಎಂದು ಹೇಳಿದನು (ಮತ್ತಾಯ 4:2; ಮಾರ್ಕ 2:20).

ಪ್ರಾರ್ಥನೆ ಮತ್ತು ಉಪವಾಸದ ಮಧ್ಯದಲ್ಲಿ ನಿಕಟವಾದ ಸಂಬಂಧವಿರುವದನ್ನು ಮೂರು ಘಟನೆಗಳಲ್ಲಿ ನಾವು ನೋಡುತ್ತೇವೆ. ಮೊದಲನೆಯದಾಗಿ, ಇದು ಪಶ್ಚಾತ್ತಾಪ ಮತ್ತು ದೇವರ ಮುಂದೆ ತಗ್ಗಿಸಿಕೊಳ್ಳುವದರೊಂದಿಗೆ ಸಂಬಂಧವನ್ನು ಹೊಂದಿರುತ್ತದೆ (ಅರಸುಗಳು 21:27; ಕೀರ್ತನೆ 35:13). ಎರಡನೆಯದಾಗಿ, ಪ್ರಾಮುಖ್ಯವಾದ ನಿರ್ಧಾರಗಳನ್ನು ಮಾಡುವಾಗ ವಿಶೇಷವಾಗಿ ದೇವರ ಯಾವುದಾದರೂ ನಿಯೋಜನೆಯಲ್ಲಿ ಅಳವಡಿಸಿಕೊಳ್ಳುವಾಗ ಉಪವಾಸವನ್ನು ಮಾಡುತ್ತಿದ್ದರು (ವಿಮೋಚನಕಾಂಡ 8:23; ಮತ್ತಾಯ 17:21; ಅ.ಕೃ. 13:3). ಮೂರನೆಯದಾಗಿ, ಪ್ರಾರ್ಥನೆಯು ಯಾವಾಗಲೂ ಶೋಧನೆಯ ಸಮಯದಲ್ಲಿ ವಿಶೇಷವಾದ ಅವಶ್ಯಕತೆಗಳಿಗಾಗಿ ತೀವ್ರವಾದ ಪ್ರಾರ್ಥನೆಯನ್ನು ಒಳಗೊಂಡಿರುತ್ತದೆ (ಮತ್ತಾಯ 4:13).

ಹಿಂದಿನ ದೂಷಣೆಯಿಂದಾಗಿ, ಕೆಲವರು ಉಪವಾಸದ ಶಿಸ್ತನ್ನು ದೂರವಿರಿಸಿದ್ದಾರೆ. ಹೇಗೂ, ಇತ್ತೀಚಿನ ದಿನಗಳಲ್ಲಿ, ಈ ಧಾರ್ಮಿಕ ಆಚರಣೆಯಲ್ಲಿ ಉಜ್ಜೀವನ ಉಂಟಾಗಿದೆ. ಕೆಳಗಿನ ಎಚ್ಚರಿಕೆಗಳನ್ನು ಗಮನಿಸಬೇಕು: (1) ಉಪವಾಸವು ನಿಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡುವದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. (2) ಉಪವಾಸ ಮಾಡುವದರ ಮೂಲಕ ದೇವರಿಗೆ ಕೈಚಳಕ ತೋರಿಸುವ ಪ್ರಯತ್ನವನ್ನು ಮಾಡಬೇಡಿರಿ (ಯೆಶಾಯ 58:3). (3) ಉಪವಾಸವು ಯಥಾರ್ಥವಾದ ತಗ್ಗಿಸುವಿಕೆ ಮತ್ತು ಪಶ್ಚಾತ್ತಾಪಕ್ಕೆ ಬದಲಿ ವ್ಯವಸ್ಥೆಯಲ್ಲ ಎಂಬುದನ್ನು ಗುರುತಿಸಿರಿ (ಜಕರ್ಯ 7:5). (4) ಉಪವಾಸವು ಆತ್ಮೀಕತೆಗೆ ಅಳತೆಗೋಲಲ್ಲ ಎಂಬುದನ್ನು ತಿಳಿದುಕೊಳ್ಳಿರಿ (ಲೂಕ 18:12). (5) ಉಪವಾಸದ ವ್ಯಾಪ್ತಿಯ ಕುರಿತು ಸ್ಪರ್ಧೆಗೆ ಇಳಿಯಬೇಡಿರಿ. (6) ಜನರು ಗಮನಿಸಲಿ ಎಂದು ಉಪವಾಸ ಮಾಡಬೇಡಿರಿ (ಮತ್ತಾಯ 6:16–18).

ಉಪವಾಸವು ಸತ್ಯವೇದ ಆಧಾರಿತ ಮತ್ತು ಪರಿಗಣಿಸಲು ಅಮೂಲ್ಯವಾದ ಆಚರಣೆಯಾಗಿದೆ. ಇದು ಒಬ್ಬನನ್ನು ತೀವ್ರವಾಗಿ ದೇವರ ಮೇಲೆ ಮತ್ತು ವಿಶೇಷವಾದ ಪ್ರಾರ್ಥನಾ ಅವಶ್ಯಕತೆಗಳ ಮೇಲೆ ಕೇಂದ್ರಿಕರಿಸಲು ಸಹಾಯಕವಾಗಿದೆ. ಉಪವಾಸವನ್ನು ರೂಢಿಯಾಗಿ ಮತ್ತು ಅದನ್ನೇ ಪ್ರಾಮುಖ್ಯವಾಗಿ ಮಾಡಿಕೊಳ್ಳುವದರ ಬದಲಾಗಿ, ಅದು ನಮ್ಮನ್ನು ದೇವರ ಮತ್ತು ಆತನ ಚಿತ್ತಕ್ಕೆ ಸಮೀಪ ತರಲಿಕ್ಕಾಗುವಂತೆ ಮಾಡುವ ಕೃತ್ಯವಾಗಿರಬೇಕು.

"ಆದರೆ ನೀವು ಉಪವಾಸ ಮಾಡುವಾಗ ತಲೆಗೆ ಎಣ್ಣೆ ಹಚ್ಚಿಕೊಂಡು ಮುಖವನ್ನು ತೊಳಕೋ, ಹೀಗೆ ಮಾಡಿದರೆ ನೀನು ಉಪವಾಸಿಯೆಂದು ಜನರಿಗೆ ಕಾಣದೆ ಹೋದಾಗ್ಯೂ ಅಂತರಂಗದಲ್ಲಿರುವ ನಿನ್ನ ತಂದೆಗೆ ಉಪವಾಸಿಯೆಂದು ಕಾಣಿಸಿಕೊಳ್ಳುವಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು." – ಮತ್ತಾಯ 6:17–18.



## 6. ಕರೆಯಲ್ಪಟ್ಟವರು ಮತ್ತು ಆಯಲ್ಪಟ್ಟವರು

**ವ್ಯಾಪಾರ ಮತ್ತು ವೃತ್ತಿಯ ವ್ಯಕ್ತಿಯಾಗಿ**

(ಮೋಶೆ ಮತ್ತು ದಾವೀದನ ಜೀವಿತವನ್ನು ನೋಡಿರಿ)

ನಮ್ಮ ವೃತ್ತಿಯನ್ನು ಸರಿಯಾದ ದೃಷ್ಟಿಕೋನದಿಂದ ನೋಡುವದು

ವೃತ್ತಿ ದೇವರದಲ್ಲ, ಅವು ಭೂಲೋಕದಲ್ಲಿ ದೇವರ ರಾಜ್ಯವನ್ನು ಸ್ಥಾಪಿಸಲು ಉಪಯೋಗಿಸುವ ಸಾಧನಗಳು ಮಾತ್ರ ಆಗಿವೆ (ಧರ್ಮೋಪದೇಶಕಾಂಡ 8:18). ವ್ಯಾಪಾರ ಮತ್ತು ವೃತ್ತಿಯ ಯಜಮಾನರಾಗಿ ನಮಗೆ ನಾವು ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕು, ನಾವು ನಮ್ಮ ವ್ಯಾಪಾರ ಮತ್ತು ವೃತ್ತಿಯನ್ನು ದೇವರಿಗಾಗಿ ಉಪಯೋಗಿಸಲಿಕ್ಕಾಗುವಂತೆ ದೇವರ ಮಾರ್ಗಗಳನ್ನು ಕಲಿಯಲು ಬಯಸುತ್ತೇವೆಯೋ? ಅಥವಾ ನಾವು ಅವುಗಳ ಮೂಲಕ ಕೇವಲ ಲಾಭವನ್ನು ಮಾಡಿಕೊಳ್ಳುವದಕ್ಕಾಗಿ ಮತ್ತು ನಮ್ಮ ಲೌಕಿಕ ಪ್ರಯತ್ನದಲ್ಲಿ ಜಯವನ್ನು ಹೊಂದಲು ಪ್ರಯತ್ನಿಸುತ್ತೇವೋ?

**ಕರೆ**

ಅನೇಕರು ಕರೆಯಲ್ಪಟ್ಟಿದ್ದಾರೆ ... (ಮತ್ತಾಯ 20:16)

ದೇವರು ನಮ್ಮನ್ನು ವ್ಯಾಪಾರ ಮತ್ತು ವೃತ್ತಿಯ ಉದ್ಯೋಗಕ್ಕಾಗಿ ಕರೆಯುತ್ತಾನೆ, ಇಸ್ರಾಯೇಲರನ್ನು ನಡೆಸಲು ಮೋಶೆ ಮತ್ತು ದಾವೀದನನ್ನು ಕರೆದ ಹಾಗೆ. ಕರೆಯ ಉದ್ದೇಶ ದೇವರು ಆತನ ರಾಜ್ಯಕ್ಕಾಗಿ ನಾವು ಫಲವನ್ನು ನೀಡಲಿಕ್ಕಾಗುವಂತೆ ನಮ್ಮನ್ನು ನಿರ್ಧಿಷ್ಟವಾದ ವ್ಯಾಪಾರ ಅಥವಾ ವೃತ್ತಿಯಲ್ಲಿ ಉಪಯೋಗಿಸಿಕೊಳ್ಳಲು ಬಯಸುತ್ತೇನೆ ಎಂದು ಹೇಳುತ್ತಾನೆ. ಈ ಕರೆ ವಿಚಾರದ ರೂಪದಲ್ಲಿರಬಹುದು, ಇನ್ನೊಬ್ಬ ವ್ಯಕ್ತಿಯ ಮಾತಿನ ಮೂಲಕ ಆಗಿರಬಹುದು, ಗುರುವಿನ ಪ್ರಭಾವವಾಗಿರಬಹುದು ಅಥವಾ ಈ ಕರೆಯನ್ನು ನಿವೇದಿಸಲು ದೇವರು ಪ್ರತಿಷ್ಟಿಸಬಹುದು. ಕರೆಯ ನಿವೇದನೆಯ ಈ ವಿಧಗಳು ದೇವದೂತನು ಗಿದ್ಯೋನನಿಗೆ ಮತ್ತು ಉರಿಯುವ ಪೊದೆಯು ಮೋಶೆಗೆ ನಿವೇದಿಸಿದ ಹಾಗೆ ವ್ಯಾಪಾರ ಮತ್ತು ವೃತ್ತಿಯಲ್ಲಿರುವ ಜನರಿಗೂ ಅಷ್ಟೇ ನೈಜ್ಯವಾಗಿವೆ.

**ಅನೇಕರು ಕರೆಯಲ್ಪಟ್ಟಿದ್ದಾರೆ ಆದರೆ ಕೆಲವರು ಆಯಲ್ಪಟ್ಟಿದ್ದಾರೆ ಏಕೆ?**

... ಆದರೆ ಕೆಲವರು ಆಯಲ್ಪಟ್ಟಿದ್ದಾರೆ (ಮತ್ತಾಯ 20:16)

ವೃತ್ತಿಯಲ್ಲಿ ಅನೇಕರು ಕರೆಯಲ್ಪಟಿದ್ದಾರೆ, ಆದರೆ ಆ ವೃತ್ತಿಯನ್ನು ಉಪಯೋಗಿಸಿಕೊಂಡು ಕೆಲವರು ಮಾತ್ರ ದೇವರ ರಾಜ್ಯಕ್ಕಾಗಿ ಫಲವನ್ನು ತರಲು ದೇವರಿಂದ ಆಯಲ್ಪಟ್ಟಿರುತ್ತಾರೆ. ಕರೆಯುವಿಕೆಯ ಸಮಯದಿಂದ ಆಯಲ್ಪಟ್ಟ ಸಮಯದ ಮಧ್ಯದಲ್ಲಿರುವ ಅವಧಿಯು ಆತನ ಜ್ಞಾನ, ತಿಳುವಳಿಕೆ ಮತ್ತ ಅರಿವನ್ನು ಕಲಿಯುವದಕ್ಕೆ ದೇವರು ನೀಡುವ ಅವಕಾಶಗಳಿಂದ ತುಂಬಿವೆ. ಕರೆಯಲ್ಪಟ್ಟವರೆಲ್ಲರೂ ಕಲಿಯುವ ಈ ಅವಧಿಯಲ್ಲಿ ಗಂಭೀರವಾದ ಕ್ರಯವನ್ನು ನೀಡಬೇಕೆಂದೇನಿಲ್ಲ. ಆದುದರಿಂದ, ಕರೆಯಲ್ಪಟ್ಟ ಅನೇಕರು ತಮ್ಮನ್ನು ತಾವು ಆಯ್ದುಕೊಳ್ಳುವದಕ್ಕೆ ಒಪ್ಪಿಸಿಕೊಡಲು ಅಲಕ್ಷಿಸುತ್ತಾರೆ. ದೇವರು ಆತನ ಮಾರ್ಗಗಳನ್ನು ಕಲಿಯಲು ಮತ್ತು ಅದರಲ್ಲಿ ನಡೆಯಲು ಅವಶ್ಯವಿರುವ ಕ್ರಯವನ್ನು ಕೊಡುವವರನ್ನು ಮಾತ್ರ ಆಯ್ದುಕೊಳ್ಳುತ್ತಾನೆ.

ಇದರ ಅರ್ಥ ಕರೆಯಲ್ಪಟ್ಟವರು ಆದರೆ ಆಯಲ್ಪಟ್ಟವರಲ್ಲ. ಇವರನ್ನು ದೂರತಳ್ಳಿಬಿಡುತ್ತಾನೆಂದಲ್ಲ. ಕರೆಯಲ್ಪಟ್ಟ ಅನೇಕರು ಆಯಲ್ಪಡದೇ ಇದ್ದಾಗಲೂ ಪ್ರಯೋಜನಕರವಾಗಿ ಮತ್ತು ಜನಪ್ರಿಯರಾಗಿರಬಹುದು. ಆದರೆ ಆ ಎಲ್ಲಾ ಪ್ರಯೋಜನಿಯತೆ ಮತ್ತು ಹೊಗಳಿಕೆಯ ಮಧ್ಯದಲ್ಲೂ ಅವರು ತಮ್ಮನ್ನು ತಾವು ಆಯ್ದುಕೊಳ್ಳುವದಕ್ಕೆ ಒಪ್ಪಿಸಿಕೊಡಲು ಅಲಕ್ಷಿಸುತ್ತಾರೆ. ಒಂದುವೇಳೆ ದೇವರ ಸೇವೆಯನ್ನು ಮಾಡಲು ಆತನಿಂದ ಆಯಲ್ಪಡದೇ ಹೋದರೆ ಪ್ರಯೋಜನಿಯತೆ ಮತ್ತು ಹೊಗಳಿಕೆಗೆ ಏನು ಬೆಲೆ?

## 7. ಹಣಕಾಸಿನ ತೊಂದರೆಗೆ ಕಾರಣ ಮತ್ತು ಪರಿಹಾರ

**(ಸಂಪೂರ್ಣ ಸತ್ಯವೇದವನ್ನು ನೋಡಿರಿ)**

ಇಸ್ರಾಯೇಲರು ದೇವರೊಂದಿಗೆ ಸರಿಯಾದ ಸಂಬಂಧದಲ್ಲಿರುವಾಗ ಅವರು ಅಭಿವೃದ್ಧಿ ಹೊಂದಿದರು. ಆದರೆ, ಅವರ ಸಂಬಂಧ ಅಪೂರ್ಣವಾಗಿರುವಾಗ, ಅವರು ಅಸಂಖ್ಯಾತ ಸಮಸ್ಯೆಗಳಿಂದ ತೊಂದರೆಗೆ ಒಳಗಾದರು. ಹಣಕಾಸಿನ ಸಮಸ್ಯೆಯನ್ನು ಒಳಗೊಂಡು; ಇದು ಇಂದು ಸಹ ನಮಗೆ ಸತ್ಯವಾಗಿದೆ.

ಹಣಕಾಸಿನ ಸಮಸ್ಯೆ ಎಂದು ನಾವು ಕರೆಯುವ ಪರಿಸ್ಥಿತಿಗಳು ಅವು ಸಮಸ್ಯೆಯೇ ಅಲ್ಲ; ಬದಲಾಗಿ, ಅವು ನಮ್ಮ ಜೀವಿತದಲ್ಲಿ ಆತ್ಮೀಕ ಕೊರತೆಯ ಕುರುಹುಗಳಾಗಿವೆ. ನಾವು ದೇವರೊಂದಿಗೆ ಸರಿಯಾದ ಸಂಬಂಧದಲ್ಲಿ ಬರುವಾಗ ಅದರ ಪರಿಣಾಮವಾಗಿ ನಮ್ಮ ಜೀವಿತದಲ್ಲಿರುವ ಹಣಕಾಸಿನ ಸಮಸ್ಯೆಗಳು ಕಾಣದಾಗುತ್ತವೆ.

ಇದು ಯೇಸುವಿನ ಜೀವಿತದಲ್ಲಿ ದೃಢೀಕರಿಸಲಾಗಿದೆ. ಆತನು ತನ್ನ ತಾಯಿಗೆ, ಹನ್ನೆರೆಡು ಜನ ಶಿಷ್ಯರಿಗೆ ಮತ್ತು ಅವರ ಕುಟುಂಬಗಳಿಗೆ, ಬೆಂಬಲವನ್ನು ನೀಡುವ ಜವಾಬ್ದಾರಿಯನ್ನು ಹೊಂದಿದ್ದನು. ಅವನು ವೈರಿಗಳ ಸ್ವಾಧೀನದಲ್ಲಿದ್ದ ಕ್ಷೇತ್ರದಲ್ಲಿದ್ದನು ಮತ್ತು ಬೆಂಬಲನೀಡಲು ಕಂಡುಬರುವ ಯಾವ ಮಾರ್ಗವೂ ಇರಲಿಲ್ಲ; ಆದಾಗ್ಯೂ, ಅವನಿಗೆ ಯಾವಾಗಲೂ ಹಣಕಾಸಿನ ತೊಂದರೆ ಇರಲಿಲ್ಲ. ಯಾಕಂದರೆ ಅವನಿಗೆ ತನ್ನ ತಂದೆಯೊಡನೆ ಯಾವಾಗಲೂ ಸಮಸ್ಯೆಯಿರಲಿಲ್ಲ. ನಾವು ಆತನಂತೆ ದೇವರನ್ನು  ಗೌರವಿಸುವಾಗ ಇದು ನಮ್ಮ ಜೀವಿತದಲ್ಲೂ  ಸಹ ಸತ್ಯವಾಗಿದೆ.

ನಾವು ಹೆಚ್ಚು ಹಣ ಸಂಪಾದನೆ ಮಾಡುವದರಿಂದ ನಮ್ಮ ಹಣಕಾಸಿನ ಸಮಸ್ಯೆ ಪರಿಹಾರವಾಗುವದಿಲ್ಲ; ಬದಲಾಗಿ ನಾವು ದೇವರೊಂದಿಗೆ ನಮ್ಮ ತಪ್ಪಾದ ಸಂಬಂಧದ ಕುರಿತಾಗಿ ಪಶ್ಚಾತ್ತಾಪ ಪಡುವಾಗ ಮತ್ತು ಪಶ್ಚಾತ್ತಾಪಪಟ್ಟಂತೆ ನಡೆದುಕೊಳ್ಳುವಾಗ ಪರಿಹಾರವಾಗುತ್ತವೆ. ನಾವು ಮುರಿದು ಹೋಗುವಾಗ, ಕೊನೆಗೆ ನಮಗೆ ಬೇಕಾಗಿರುವದು ಹಣ ಎಂದು ಭಾವಿಸುತ್ತೇವೆ. ಆದರೆ ನಿಜವಾಗಿಯೂ ನಮಗೆ ಬೇಕಾದದ್ದು ಏನೆಂದರೆ ನಮ್ಮ ಮಾರ್ಗದಿಂದ ದೇವರ ಕಡೆಗೆ ತಿರುಗಿಕೊಳ್ಳುವದಾಗಿದೆ. ಆಗ ದೇವರು ಯೇಸು ಕ್ರಿಸ್ತನ ಮೂಲಕ ನಮ್ಮ ಎಲ್ಲಾ ಅವಶ್ಯಕತೆಗಳನ್ನು ಪೂರೈಸುತ್ತಾನೆ (ಫಿಲಿಪ್ಪಿ 4:19).

ನಾವು ದೇವರೊಂದಿಗೆ ಸರಿಯಾದ ಸಂಬಂಧದಲ್ಲಿ ಬಂದರೆ, ಆತನು ಬರಗಾಲದಲ್ಲಿಯೂ ನಮ್ಮನ್ನು ತೃಪ್ತಿಪಡಿಸುತ್ತಾನೆ (ಕೀರ್ತನೆ 37:19). ಯೇಸು ಕ್ರಿಸ್ತನು ನಮಗೆ ಕಲಿಸಿರುವ ಪ್ರಾರ್ಥನೆಯಲ್ಲಿ ಒಂದಾಗಬೇಕು, “ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ನಮಗೆ ದಯಪಾಲಿಸು” (ಮತ್ತಾಯ 6:11). ಯಾವಾಗಲೂ ಇಂದು ನಮಗಾಗಿ ನಮ್ಮ ಕೈಯಲ್ಲಿ ಏನಿದೆ ಅದರಿಂದ “ಸಮೃದ್ಧಿಯನ್ನು” ಅಳೆಯುವದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. (Chastisement 101 ಪುಟದ ಪ್ರಾರಂಭದಿಂದ ಓದಿರಿ).

**ದೇವರು ಆಗಾಗ್ಗೆ ಪ್ರಾಕೃತಿಕ ಕ್ಷೇತ್ರವನ್ನು ನಮಗೆ ಆತ್ಮೀಕ ಕ್ಷೇತ್ರದಲ್ಲಿ ತರಬೇತಿ ನೀಡಲು ಉಪಯೋಗಿಸುತ್ತಾನೆ.**

*ಆಗ ದಾವೀದನು ಅವನಿಗೆ – ನಿನ್ನ ಸೇವಕನಾದ ನಾನು ನನ್ನ ತಂದೆಯ ಕುರಿಗಳನ್ನು ಕಾಯುತ್ತಿದ್ದಾಗ ಸಿಂಹವಾಗಲಿ ಕರಡಿಯಾಗಲಿ ಬಂದು ಹಿಂಡಿನಲ್ಲಿನ ಕುರಿಮರಿಯನ್ನು ಹಿಡಿದುಕೊಂಡು ಹೋಗಲು ನಾನು ಒಡನೆ ಅದನ್ನು ಬೆನ್ನಟ್ಟಿ ಹೊಡೆದು ಕುರಿಮರಿಯನ್ನು ಕಿತ್ತುಕೊಳ್ಳುತ್ತಿದ್ದೆನು. ಅದು ಹಿಂದುರಿಗಿ ನನ್ನ ಮೇಲೆ ಬಿದ್ದರೆ ಅದನ್ನು ಗದ್ದ ಹಿಡಿದು ಬಡಿದು ಕೊಂದುಹಾಕುತ್ತಿದ್ದೆನು. ನಿನ್ನ ಸೇವಕನಿಂದ ಕೊಲ್ಲಲ್ಪಟ್ಟ ಸಿಂಹಕ್ಕೂ ಕರಡಿಗೂ ಆದ ಗತಿಯೇ ಜೀವಸ್ವರೂಪನಾದ ದೇವರ ಸೈನ್ಯವನ್ನು ನಿಂದಿಸುವಂಥ ಈ ಸುನ್ನತಿಯಿಲ್ಲದ ಫಿಲಿಷ್ಟಿಯನಿಗೂ ಆಗಬೇಕು. ನನ್ನನ್ನು ಅಂಥ ಸಿಂಹದ ಮತ್ತು ಕರಡಿಯ ಉಗುರುಗಳಿಗೆ ತಪ್ಪಿಸಿದ ಯೆಹೋವನು ಈ ಫಿಲಿಷ್ಟಿಯನ ಕೈಗೂ ತಪ್ಪಿಸುವನು ಎನ್ನಲು ಸೌಲನು ದಾವೀದನಿಗೆ – ಹೋಗು ಯೆಹೋವನು ನಿನ್ನ ಸಂಗಡ ಇರಲಿ ಎಂದು ಹೇಳಿದನು* (2ಸಮುವೇಲ 17:34–37).

ಅನೇಕಾವರ್ತಿ ನಾವು "ಆತ್ಮೀಕ" ಸಾಮರ್ಥ್ಯವೆಂದು ಗ್ರಹಿಸಿಕೊಳ್ಳುವ ಕ್ಷೇತ್ರದಲ್ಲಿ ಕೆಲಸ ಮಾಡುವದಕ್ಕೆ ಬದಲಾಗಿ ನಮ್ಮ ಪ್ರಾಕೃತಿಕ ವೃತ್ತಿಯಲ್ಲಿ ಕೆಲಸವನ್ನು ಮಾಡುವದರ ಮೂಲಕ ಸಮಯವನ್ನು ಹಾಳು ಮಾಡುತ್ತಿದ್ದೇವೆ ಎಂದು ನಂಬುತ್ತೇವೆ. ದಾವೀದನು ಕುರುಬನಾಗಿದ್ದಾಗ, ತನ್ನ ಕುರಿ ಮಂದೆಯನ್ನು ಕಾಯಲು ಸಿಂಹವನ್ನು ಮತ್ತು ಕರಡಿಯನ್ನು ಕೊಂದನು. ಆತನು ತನ್ನ ಪ್ರಾಕೃತಿಕ ಕ್ಷೇತ್ರದಲ್ಲಿರುವಾಗ ಆತ್ಮೀಕ ಕ್ಷೇತ್ರದಲ್ಲಿ ಹೋರಾಡಲು ಇಸ್ರಾಯೇಲರ ಗತಿಯನ್ನು ನಿತ್ಯಕಾಲಕ್ಕೂ ಬದಲಾಯಿಸುವ ಸಿದ್ಧತೆಯ ಪ್ರಕ್ರಿಯೆಯಲ್ಲಿ ತೊಡಗಿದ್ದನು. ದಾವೀದನು ಕುರುಬನಾಗಿ ಕೆಲಸಮಾಡುವದರ ಮೂಲಕ ನಾನು ಸಮಯವನ್ನು ಹಾಳು ಮಾಡಿಕೊಳ್ಳುತ್ತಿದ್ದೇನೆ ಎಂದು ಯೋಚಿಸಿ ಆತ್ಮೀಕಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಮನೆಯಿಂದ ಓಡಿಹೋಗಲಿಲ್ಲ. ಆತನು ಹಾಗೆ ಮಾಡಿದ್ದಲ್ಲಿ ಇಸ್ರಾಯೇಲರ ಭವಿಷ್ಯವು ಅನೇಕ ವರ್ಷಗಳ ವರೆಗೆ ಬದಲಾಗುತ್ತಿರಲಿಲ್ಲ.

ದೇವರ ಸೇವೆಯನ್ನು ಮಾಡುವ ಆತುರತೆಯಲ್ಲಿ ಮತ್ತು ಲೋಕದ ಉಗ್ರತೆಯಿಂದ ತಪ್ಪಿಸಿಕೊಳ್ಳಲು, ಅನೇಕಾವರ್ತಿ ನಾವು ನಮ್ಮ ಪ್ರಸ್ತುತ ಸನ್ನಿವೇಶವು ನಮ್ಮನ್ನು ಆತ್ಮೀಕ ಕ್ಷೇತ್ರದಲ್ಲಿ ಸೇವೆಯನ್ನು ಮಾಡುವದಕ್ಕಾಗಿ ಸಿದ್ದಪಡಿಸುವ ದೇವರ ಯೋಜನೆಯ ಭಾಗವಾಗಿದೆ ಎಂದು ನಾವು ಪರಿಗಣಿಸುವದಿಲ್ಲ. ಯೋಸೆಫನ ಜೀವಿತದಲ್ಲೂ ಅದು ದೇವರ ಯೋಜನೆಯಾಗಿತ್ತು ಮತ್ತು ಐಗುಪ್ತದಲ್ಲಿ ಮೋಶೆಯ ಜೀವಿತದಲ್ಲೂ ಅದು ದೇವರ ಯೋಜನೆಯಾಗಿತ್ತು, ಮತ್ತು ಹೊಸ ಒಡಂಬಡಿಕೆಯಲ್ಲಿ ಪೇತ್ರ ಮತ್ತು ಪೌಲನ ಜೀವಿತದಲ್ಲಿ ಮತ್ತು ಇಂದು ನಮ್ಮ ಜೀವಿತದಲ್ಲಿ ಅದೇ ದೇವರ ಯೋಜನೆಯಾಗಿರಬಹುದು.

ದಾವೀದನು ಹುಡುಗನಾಗಿದ್ದಾಗ ಕುರುಬನಾಗಿ ಪ್ರಾಕೃತಿಕ ಕ್ಷೇತ್ರದಲ್ಲಿ ತನ್ನ ತಂದೆಯ ಕುರಿಗಳನ್ನು ಮೇಯಿಸುತ್ತಿರುವಾಗ ಶಿಸ್ತಿಗೆ ಒಳಪಟ್ಟನು ಮತ್ತು ನಂತರ ಆತ್ಮೀಕ ಕ್ಷೇತ್ರದಲ್ಲಿ ದೇವರ ಕುರಿಗಳಾದ ಇಸ್ರಾಯೇಲರ ಅರಸನಾಗುವಂತೆ ದೇವರಿಂದ ಅಭಿಷೇಕಿಸಲ್ಪಟ್ಟನು.

ದಾವೀದನು ಪ್ರಾಕೃತಿಕ ಕ್ಷೇತ್ರದಲ್ಲಿ ಸಿಂಹವನ್ನು ಮತ್ತು ಕರಡಿಯನ್ನು ಕೊಲ್ಲುವಾಗ ಶಿಸ್ತಿಗೆ ಒಳಪಟ್ಟನು, ನಂತರ ಗೊಲ್ಯಾತನನ್ನು ಸಂಧಿಸುವಾಗ, ಆತನ ಖಚಿತವಾದ ಸಾವನ್ನು ಬಲವಾದ ನಂಬಿಕೆಯ ಮಾತುಗಳಿಂದ ವ್ಯಕ್ತಪಡಿಸಿದನು.

ದಾವೀದನು ತನ್ನನ್ನು ಸೌಲನು ಬೆನ್ನಟ್ಟಿ ಪ್ರಾಕೃತಿಕ ಕ್ಷೇತ್ರದಲ್ಲಿ ಕೊಲ್ಲಬೇಕೆಂದು ಪ್ರಯತ್ನಿಸುತ್ತಿರುವಾಗ ಅಧಿಕಾರಿಗಳಿಗೆ ಅಧೀನರಾಗಬೇಕೆಂಬ ಶಿಸ್ತಿಗೆ ಒಳಪಟ್ಟನು, ನಂತರ ದೈವಿಕ ಅಧಿಕಾರದೊಂದಿಗೆ ಇಸ್ರಾಯೇಲರನ್ನು ಊರಿಯನ ವಿಷಯನ್ನು ಹೊರತುಪಡಿಸಿ ಆಳ್ವಿಕೆಯನ್ನು ಮಾಡಿದನು.

ದೇವರ ರಾಜ್ಯದಲ್ಲಿ ಅತ್ಯಂತ ಅಪಾಯಕಾರಿ ವ್ಯಕ್ತಿಗಳೆಂದರೆ ತಾವು ದೇವರಿಂದ ಕರೆಯಲ್ಪಟ್ಟವರು ಎಂದು ಅರಿತುಕೊಂಡಿರುವ ಜನರು, ಆದರೆ ಜೀವಿತದ ಅನುಭವಗಳನ್ನು ಪ್ರಾಕೃತಿಕ ಕ್ಷೇತ್ರದಲ್ಲಿ ದೇವರು ತನ್ನ ರಾಜ್ಯದಲ್ಲಿ ಆತನ ಸೇವೆಯನ್ನು ಮಾಡುವದಕ್ಕಾಗಿ ನಮಗೆ ಶಿಸ್ತನ್ನು ಬೋಧಿಸಲು ಉಪಯೋಗಿಸಲು ಬಯಸುವಾಗ ಅದನ್ನು ವಿಸರ್ಜಿಸುತ್ತಾರೆ. ಈ ರೀತಿಯ ಮನುಷ್ಯರು ಕರೆಯಲ್ಪಟ್ಟ ಅನೇಕರಲ್ಲಿ ಒಬ್ಬರಾಗಿದ್ದಾರೆ, ಆದರೆ ತಮ್ಮನ್ನು ತಾವು ಆತ್ಮೀಕ ಕ್ಷೇತ್ರದಲ್ಲಿ ಸೇವೆಯನ್ನು ಮಾಡಲು ಆಯಲ್ಪಟ್ಟವರಿಗೆ ಯೋಗ್ಯರಾಗುವಂತೆ ಒಪ್ಪಿಸಿಕೊಡುವದಿಲ್ಲ. ನಾವು ನಮ್ಮ ಆತುರತೆಯನ್ನು ದೇವರ ಸೇವೆಯಲ್ಲಿ ಅಥವಾ ಲೋಕದ ಉಗ್ರತೆಯಿಂದ ತಪ್ಪಿಸಿಕೊಳ್ಳುವ ನಮ್ಮ ಬಯಕೆಯನ್ನು ಅನುಮತಿಸಬಾರದು. ಆತ್ಮೀಕ ಕ್ಷೇತ್ರದಲ್ಲಿ ಕಾರ್ಯವನ್ನು ಮಾಡಲು ಪ್ರಾಕೃತಿಕ ಕ್ಷೇತ್ರದಲ್ಲಿ ತರಬೇತಿಹೊಂದುವದನ್ನು ಕದ್ದುಕೊಳ್ಳುವದಕ್ಕೆ ಬಿಡಬಾರದು. ಹೀಗೆ ಮಾಡಿದ್ದಲ್ಲಿ ನಾವು ದೇವರ ಮುಂದೆ ಪ್ರತಿಭಟಿಸುವವರಾಗುತ್ತೇವೆ.

ದೇವರು ಪ್ರಾಕೃತಿಕ ಮತ್ತು ಆತ್ಮೀಕ ಎರಡನ್ನೂ ಸೃಷ್ಟಿಸಿದ್ದಾನೆ ಎಂಬುದನ್ನು ತಿಳಿದುಕೊಳ್ಳಬೇಕು ಮತ್ತು ಆತನು ನಾವು ಪ್ರಾಕೃತಿಕ ಮತ್ತು ಆತ್ಮೀಕ ಎರಡರಲ್ಲೂ ಸಮಾನವಾದ ರೀತಿಯಲ್ಲಿ ಜೀವಿಸಬೇಕು ಎಂಬ ಉದ್ದೇಶವನ್ನು ಹೊಂದಿದ್ದಾನೆ. ಅನೇಕಾವರ್ತಿ ವಿಶೇಷವಾಗಿ ದೈವಿಕ ವರ್ಚಸ್ಸಿನ ವಿಶ್ವಾಸಿಗಳು ಪ್ರಾಕೃತಿಕವಾದದ್ದನ್ನು ಉಪೇಕ್ಷಿಸುತ್ತಾರೆ ಮತ್ತು ಕೇವಲ ಆತ್ಮೀಕ ಕ್ಷೇತ್ರದಲ್ಲಿ ಜೀವಿಸಲು ಪ್ರಯತ್ನಿಸುತ್ತಾರೆ. ಅದು ವಿಶ್ವಾಸಿಗಳಿಗೆ ಮರಣಾನಂತರ ಕಾಯ್ದಿರಿಸಲಾಗಿದೆ. ದೇವರಿಗೆ ಪ್ರಾಕೃತಿಕ ಕ್ಷೇತ್ರದಲ್ಲಿ ನಮಗೋಸ್ಕರ ಯೋಜನೆಯಿರುವಾಗ ಆತ್ಮೀಕ ಕ್ಷೇತ್ರದಲ್ಲಿ ಇರುವದಕ್ಕೆ ಬಯಸಿ ಸಮಯವನ್ನು ವ್ಯರ್ಥಗೊಳಿಸುವದು ಬೇಡ, ಯಾಕೆಂದರೆ ಪ್ರಾಕೃತಿಕ ಕ್ಷೇತ್ರದಲ್ಲಿ ನಾವು ಕಲಿಯಬೇಕಾದ ಶಿಸ್ತು ಬಹಳಷ್ಟಿದೆ, ಇದರಿಂದಾಗಿ ನಾವು ಆತ್ಮೀಕ ಕ್ಷೇತ್ರದಲ್ಲಿ ಸರಿಯಾಗಿ ಸೇವೆ ಮಾಡಬಹುದು.

ಹಾಗಿದ್ದಲ್ಲಿ ಈ ವಿಷಯದಲ್ಲಿ ತಳಹದಿ ಯಾವುದು? ಪ್ರಾಕೃತಿಕ – ಲೌಕಿಕವಾದ ಪರಿಸ್ಥಿತಿಗಳ ಮೂಲಕ ದೇವರು ನಿಮ್ಮ ಜೀವಿತದಲ್ಲಿ ಮಾಡುತ್ತಿರುವ ಕಾರ್ಯವನ್ನು ತೊರೆಯಬೇಡ.

# 8. ತಪ್ಪುಗಳಲ್ಲೂ ಅವಕಾಶಗಳಿವೆ

*"ಸತ್ಪುರುಷನ ಗತಿ ಸ್ಥಾಪನೆಯು ಯೆಹೋವನಿಂದಲೇ ಆಗಿದೆ, ಆತನು ಅವನ ಪ್ರವರ್ತನೆಯನ್ನು ಮೆಚ್ಚುತ್ತಾನೆ, ಅವನು ಕೆಳಗೆ ಬಿದ್ದರೂ ಏಳದೆ ಹೋಗುವದಿಲ್ಲ; ಯೆಹೋವನು ಅವನ ಕೈಹಿಡಿದು ಉದ್ಧಾರ ಮಾಡುವನು"* (ಕೀರ್ತನೆ 37:23–24).

ಉತ್ತಮವಾದ ಮನುಷ್ಯರು ದೇವರು ಅಜ್ಞಾಪಿಸುವ ಮಾರ್ಗದಲ್ಲಿ ನಡೆಯುತ್ತಾರೆ, ಬೀಳುತ್ತಾರೆ ಮತ್ತು ತಪ್ಪು ಮಾಡುತ್ತಾರೆ ಎಂಬುದನ್ನು ಆತನು ತಿಳಿದಾತನಾಗಿದ್ದಾನೆ. ಆದರೆ ಏನು! ದೇವರು ಉತ್ತಮವಾದ ಮನುಷ್ಯರನ್ನು ಏಳದೇ ಹೋಗದಂತೆ ಮಾಡುವದಿಲ್ಲ. ಆತನು ಅವರನ್ನು ತನ್ನ ಕೈಗಳಲ್ಲಿ ಹಿಡಿದುಕೊಳ್ಳುತ್ತಾನೆ ಮತ್ತು ಅವರ ತಪ್ಪುಗಳ ಮೂಲಕ ಅವರಿಗೆ ಬೋಧಿಸುತ್ತಾನೆ.

ತಪ್ಪುಗಳು ಮತ್ತು ದೇಹದ ಗಾಯಗಳು ಒಂದೇ ರೀತಿಯಾಗಿರುತ್ತವೆ, ಇರುವದಕ್ಕಿಂತ ಹೆಚ್ಚು ಕೆಟ್ಟದ್ದಾಗಿ ಕಾಣುತ್ತವೆ. ಸಮಯವನ್ನು ನೀಡಿದ್ದಲ್ಲಿ ಎರಡೂ ವಾಸಿಯಾಗುತ್ತವೆ. ಪರಿಣಾಮವಾಗಿ ಕಲೆ ಉಳಿದರು, ಗಾಯದ ಸುತ್ತಲೂ ಇರುವ ಚರ್ಮವು ಕಲೆಗಿಂತ ಬಲವಾಗಿರುತ್ತದೆ. ತಪ್ಪುಗಳು ನಮ್ಮ ಜೀವಿತದ ನಿರ್ಧಿಷ್ಟವಾದ ಕ್ಷೇತ್ರಗಳನ್ನು ಬಲಪಡಿಸಲು ಅವಕಾಶಗಳನ್ನು ಒದಗಿಸುತ್ತವೆ.

ತಪ್ಪುಗಳನ್ನು ಕಂಡುಕೊಳ್ಳುವದು ನಮ್ಮನ್ನು ನಾವು ದೇವರ ಕೈಗಳಲ್ಲಿ ಒಪ್ಪಿಸುವದಕ್ಕೆ ಅವಕಾಶಗಳಾಗಿವೆ. ನಮ್ಮ ತಪ್ಪುಗಳಿಗಾಗಿ ಆತನ ತೀರ್ಮಾನಗಳು ಯಾವಾಗಲೂ ಪ್ರೀತಿಪಾತ್ರವಾದವುಗಳು ಮತ್ತು ಸರಿಯಾದವುಗಳು ಆಗಿರುತ್ತವೆ. ಆತನು ನಮ್ಮನ್ನು ತೆಗಳುವದಕ್ಕಾಗಿ ತನ್ನ ಕೈಗಳಲ್ಲಿ ನಮ್ಮನ್ನು ಹಿಡಿದುಕೊಳ್ಳುವದಿಲ್ಲ, ಬದಲಾಗಿ ನಾವು ಆತನ ಸೇವೆಯಲ್ಲಿ ಮುಂದುವರೆಯಲಿಕ್ಕಾಗುವಂತೆ ಹಿಡಿದುಕೊಳ್ಳಲು ಕೈಗಳಲ್ಲಿ ಎತ್ತಿಕೊಳ್ಳುತ್ತಾನೆ.

## ನಮ್ಮ ಎಲ್ಲಾ ಸಮಸ್ಯೆಗಳನ್ನು ಜಯಿಸುವ ಬೀಗದ ಕೈ

*"... ಯೆಹೋವನು ನನಗೆ ಕುರುಬನು ಕೊರತೆಪಡೆನು ... ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವದರಿಂದ ಕೇಡಿಗೆ ಹೆದರೆನು; ... ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ಧಪಡಿಸುತ್ತೀ. ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ ..."* (ಕೀರ್ತನೆ 23: 1 ಮತ್ತು 4–5).

ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ಮತ್ತು ವೈರಿಗಳ ಮುಂದೆ ಔತಣವನ್ನು ಸಿದ್ಧಪಡಿಸುತ್ತೀ ಇವು ಸಮಸ್ಯೆಗಳು ಇವೆ ಎಂಬುದನ್ನು ಸೂಚಿಸುತ್ತವೆ. ಅದೇ ಸಮಯದಲ್ಲಿ, 23 ನೇ ಕೀರ್ತನೆ ವಾಗ್ದಾನ ಮಾಡುತ್ತದೆ, ನಾವು ಯೆಹೋವನನ್ನು ಕುರುಬನನ್ನಾಗಿ ಮಾಡಿಕೊಂಡಿದ್ದರೆ, ಆ ಸಮಸ್ಯೆಗಳ ಮಧ್ಯದಲ್ಲೂ ನಮಗೆ ಕೊರತೆಯಿರುವದಿಲ್ಲ. ಸಮಸ್ಯೆಗಳ ಮಧ್ಯದಲ್ಲಿ ಸಮಸ್ಯೆಗಳ ಮೇಲೆ ಕೇಂದ್ರಿಕರಿಸುವದಕ್ಕಿಂತ ದೇವರ ಮೇಲೆ ಕೇಂದ್ರಿಕರಿಸುದರ ಕುರಿತು ಇನ್ನೂ ಹೆಚ್ಚಾಗಿ ಹೇಳುತ್ತದೆ. ಯಾಕೆ? ಯಾಕೆಂದರೆ ನಾವು ಸಮಸ್ಯೆಗಳ ಮೇಲೆ ಕೇಂದ್ರಿಕರಿಸುವದರ ಬದಲಾಗಿ ದೇವರ ಮೇಲೆ ಕೇಂದ್ರಿಕರಿಸಬೇಕು.

ನಮ್ಮ ಎಲ್ಲಾ ಸಮಸ್ಯೆಗಳಿಂದ ಜಯಿಸುವ ಬೀಗದ ಕೈ ಎಂದರೆ ನಾವು ನಮ್ಮ ಸಮಸ್ಯೆಗಳ ಮಧ್ಯದಲ್ಲಿ ಯಾರ ಮೇಲೆ ಕೇಂದ್ರಿಕರಿಸುತ್ತೇವೆ ಎಂಬುದಾಗಿದೆ. ನಾವು ನಮ್ಮ ಸಮಸ್ಯೆಗಳ ಮೇಲೆ ಕೇಂದ್ರಿಕರಿಸುತ್ತೇವೆಯೋ ಅಥವಾ ಕುರುಬನನ್ನು ಹುಡುಕುವದರ ಮೇಲೆ

ಕೇಂದ್ರಿಕರಿಸುತ್ತೇವೆಯೋ? ನಾವು ನಮ್ಮ ಸಮಸ್ಯೆಗಳ ಮೇಲೆ ಕೇಂದ್ರಿಕರಿಸಿದರೆ, ನಾವು ಕುರುಬನ ಮೇಲೆ ಕೇಂದ್ರಿಕರಿಸುವದಿಲ್ಲ ಮತ್ತು ನಾವು ಸಮಸ್ಯೆಗಳನ್ನು ನಮ್ಮ ಸ್ವಂತ ಸಾಮರ್ಥ್ಯದ ಮೇಲೆ ನಿರ್ವಹಿಸುತ್ತೇವೆ. ಆದರೆ, ನಾವು ಸಮಸ್ಯೆಗಳ ಮಧ್ಯದಲ್ಲಿ ಕುರುಬನನ್ನು ಹುಡುಕುವದರಲ್ಲಿ ಕೇಂದ್ರಿಕರಿಸಿದರೆ, ನಾವು ಯಾವುದೇ ಕೇಡಿಗೆ ಭಯಪಡುವದಿಲ್ಲ, ಸಮಸ್ಯೆಗಳ ಮಧ್ಯದಲ್ಲೂ ಆತನ ಸಮಾಧಾನದಲ್ಲಿ ಪಾಲ್ಗೊಳ್ಳುತ್ತೇವೆ. ಸಮಸ್ಯೆಗಳ ಮೇಲೆ ಅಲ್ಲ ಕುರುಬನ ಮೇಲೆ ಕೇಂದ್ರಿಕರಿಸುವದು ಎಲ್ಲಾ ಸಮಸ್ಯೆಗಳನ್ನು ಜಯಿಸುವದಕ್ಕೆ ಬೀಗದ ಕೈ ಆಗಿದೆ.

ನಾವು ಈ ಲೋಕದಲ್ಲಿ ಜೀವಿಸುವ ಮಟ್ಟಿಗೆ ನಮಗೆ ಸಮಸ್ಯೆಗಳು ಇರುತ್ತವೆ. ಆದರೆ ನಾವು ಸಮಸ್ಯೆಗಳಿಗಿಂತ ಹೆಚ್ಚಾಗಿ ಕುರುಬನ ಮೇಲೆ ಕೇಂದ್ರಿಕರಿಸಲು ಎಚ್ಚರವಾಗಿರಬೇಕು. ನಾವು ಯೇಸು ಕ್ರಿಸ್ತನನ್ನು ರಕ್ಷಕನೆಂದು ಸ್ವೀಕರಿಸಿದ ನಂತರ ಆತನು ನಮಗೆ ಆತನ ಮಕ್ಕಳಾಗುವ ಅಧಿಕಾರವನ್ನು ನೀಡುತ್ತಾನೆ (ಯೋಹಾನ 1:12). ಆ ಬಲದ ಪರಿಶ್ರಮಶೀಲ ಮತ್ತು ಪ್ರತಿನಿತ್ಯದ ಅನುಭವ ಮತ್ತು ಕುರುಬನನ್ನು ನಿರಂತರವಾಗಿ ಹುಡುಕುವದರ ಮೂಲಕ ನಾವು ನಮ್ಮ ಎಲ್ಲಾ ಸಮಸ್ಯೆಗಳಿಂದ ಜಯಿಸಬಹುದು.

# 9. ದೇವರ ಜ್ಞಾನ

*"ಜ್ಞಾನವನ್ನು ಪಡೆ, ವಿವೇಕವನ್ನು ಸಂಪಾದಿಸು, ಮರೆಯಬೇಡ, ನನ್ನ ಮಾತುಗಳಿಗೆ ಓರೆಯಾಗಬೇಡ. ಜ್ಞಾನವನ್ನು ಬಿಡದಿದ್ದರೆ ಅದು ನಿನ್ನನ್ನು ಕಾಪಾಡುವದು, ಪ್ರೀತಿಸಿದರೆ ಕಾಯುವದು. ಜ್ಞಾನವನ್ನು ಪಡೆಯಬೇಕೆಂಬದೇ ಜ್ಞಾನಬೋಧೆಯ ಪ್ರಥಮ ಪಾಠ; ನಿನ್ನ ಎಲ್ಲಾ ಸಂಪತ್ತಿನಿಂದಲೂ ವಿವೇಕವನ್ನು ಪಡೆ"* (ಜ್ಞಾನೋಕ್ತಿ 4:5–7).

**ದೇವರ ಜ್ಞಾನ ಯಾವುದು?**

"ಹೇಗೆಂದರೆ ನೀವೆಲ್ಲರು ಪ್ರೀತಿಯಿಂದ ಹೊಂದಿಕೆಯಾಗಿದ್ದು ಬುದ್ಧಿಪೂರ್ವಕ ನಿಶ್ಚಯವೆಂಬ ಭಾಗ್ಯವನ್ನು ಪಡೆದು ದೇವರು ತಿಳಿಸಿರುವ ಮರ್ಮವನ್ನು ಅಂದರೆ ತನ್ನಲ್ಲೇ ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳನ್ನೆಲ್ಲಾ ಅಡಗಿಸಿಕೊಂಡಿರುವ ಕ್ರಿಸ್ತನನ್ನು ತಿಳುಕೊಂಡವರಾಗಿ ಹೃದಯದಲ್ಲಿ ದೃಢವಾಗಿರಬೇಕೆಂಬ ಕುತೂಹಲವು ನನಗುಂಟು" (ಕೊಲಸ್ಸೆ 2:3).

... ದೇವರ ಶಕ್ತಿಯೂ ದೇವರ ಜ್ಞಾನವೂ ಆಗಿರುವ ಕ್ರಿಸ್ತನೇ (1ಕೊರಿಂಥ 1:24).

**ದೇವರ ಜ್ಞಾನವನ್ನು ಹೊಂದಿಕೊಳ್ಳುವದು ಎಂದರೇನು?**

ದೇವರ ಜ್ಞಾನವನ್ನು ಹೊಂದಿಕೊಳ್ಳುವದು ಎಂದರೆ ಆತನನ್ನು ತಿಳಿದುಕೊಳ್ಳುವದು ಮತ್ತು ಕ್ರಿಸ್ತನು ನಮ್ಮ ಪರಿಸ್ಥಿತಿಯಲ್ಲಿದ್ದರೆ ಏನು ಮಾಡುತ್ತಿದ್ದನೋ ಅದನ್ನು ಮಾಡುವದು.

**ದೇವರ ಜ್ಞಾನವು ಪ್ರಾಮುಖ್ಯವಾಗಿದೆ ಎಂಬುದನ್ನು ಕಲಿಯಲು ನಮಗಿರುವ ಅಡತಡೆ ಯಾವುದು?**

ಅಹಂಕಾರ. ನಮ್ಮ ಮೇಲೆ ನಮಗಿರುವ ಪ್ರೀತಿ/ ಅಹಂಕಾರವು ನಮ್ಮನ್ನು ದೇವರಿಗೆ ಭಯಪಡುವದರ ಬದಲಾಗಿ ನಮ್ಮ ಮೇಲೆ ನಾವು ಅವಲಂಭಿತರಾಗುವಂತೆ ಮಾಡುತ್ತದೆ. ದೇವರ ಭಯವೇ ಜ್ಞಾನಕ್ಕೆ ಮೂಲ (ಜ್ಞಾನೋಕ್ತಿ 1:7).

**ದೇವರ ಜ್ಞಾನವನ್ನು ಪ್ರಾಮುಖ್ಯವಾದ ಸಂಗತಿ ಎಂದು ಹುಡುಕದೇ ಇರುವದಕ್ಕೆ ಇರುವ ಜುಲ್ಮಾನೆ ಏನು?**

*ಯಾವನು ನನಗೆ ತಪ್ಪುಮಾಡುತ್ತಾನೋ ಅವನು ತನ್ನ ಆತ್ಮಕ್ಕೆ ಕೇಡುಮಾಡಿಕೊಳ್ಳುತ್ತಾನೆ; ನನ್ನನ್ನು ಹಗೆಮಾಡುವವರೆಲ್ಲರೂ ಮರಣವನ್ನು ಪ್ರೀತಿಸುತ್ತಾರೆ* (ಜ್ಞಾನೋಕ್ತಿ 8:36).

ನಮ್ಮಲ್ಲಿ ಜ್ಞಾನವಿಲ್ಲದಿದ್ದರೆ ದೇವರು ನಮ್ಮನ್ನು ದ್ರೋಹಿಗಳು ಎಂದು ಪರಿಗಣಿಸುತ್ತಾನೆ (ಯೆಶಾಯ 39:1).

ಯೆಹೋವನ ಜ್ಞಾನದಿಂದ ಮನೆಕಟ್ಟದಿದ್ದರೆ, ಅದನ್ನು ಕಟ್ಟುವವರು ಕಷ್ಟಪಡುವದು ವ್ಯರ್ಥ (ಕೀರ್ತನೆ 127:1).

ದೇವರ ಜ್ಞಾನವಿಲ್ಲದೆ ನಾವು ನಾಶವಾಗುತ್ತೇವೆ, ದೇವರು ನಮ್ಮನ್ನು ಮರೆತುಬಿಡುತ್ತಾನೆ, ನಮ್ಮನ್ನು ತಿರಸ್ಕರಿಸುತ್ತಾನೆ ಮತ್ತು ನಾವು ಆತನ ಸೇವಕರಾಗಿರಲು ಅನುಮತಿಸುವದಿಲ್ಲ (ಹೋಶೇಯ 4:6).

ಆತನು ನಮ್ಮ ಆಶೆಯನ್ನು ಪೂರೈಸುತ್ತಾನೆ ಮತ್ತು ನಮ್ಮ ಪ್ರಾಣಕ್ಕೆ ಕ್ಷಯವನ್ನು ಬರಮಾಡುತ್ತಾನೆ (ಕೀರ್ತನ 106:15)

**ನಾವು ದೇವರ ಜ್ಞಾನವನ್ನು ಹೇಗೆ ಮತ್ತು ಎಲ್ಲಿ ಹೊಂದಿಕೊಳ್ಳಬಹುದು?**

ಯೇಸು ಕ್ರಿಸ್ತನನ್ನು ನಮ್ಮ ರಕ್ಷಕನೆಂದು ಒಪ್ಪಿಕೊಳ್ಳುವದರ ಮೂಲಕ ಕ್ರಿಸ್ತನಲ್ಲಿ ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳು ಹುದುಗಿಕೊಂಡಿವೆ (ಕೊಲಸ್ಸೆ 2:3).

ದೇವರ ವಾಕ್ಯವನ್ನು ಹಗಲಿರುಳು ಧ್ಯಾನಿಸುವದರ ಮೂಲಕ ಜ್ಞಾನವು ದೊರೆಯುತ್ತದೆ (ಯೆಹೋಶುವ 1:8).

ನೀವು ಜ್ಞಾನವನ್ನು ಬೆಳ್ಳಿಯಂತೆಯೂ ನಿಕ್ಷೇಪದಂತೆಯು ಹುಡುಕಬೇಕು, ಆಗ ನಾವು ಯೆಹೋವನ ಭಯವನ್ನು ಅರಿತುಕೊಳ್ಳುವೆವು (ಜ್ಞಾನೋಕ್ತಿ 2:4–5).

ದೇವರಿಂದ ಜ್ಞಾನವನ್ನು ಕೇಳಿಕೋ ಆತನು ಅದನ್ನು ಹಂಗಿಸದೆ ಕೊಡುವನು (1 ಅರಸುಗಳು 3:5–14 & ಯಾಕೋಬ 1:5).

ಅನೇಕ ದೇವ ಜನರ ಸಮಾಲೋಚನೆಯ ಮೂಲಕ ಜ್ಞಾನವು ದೊರೆಯುತ್ತದೆ (ಜ್ಞಾನೋಕ್ತಿ 15:22).

ದೇವರ ಆತ್ಮನು ದೇವರ ನಮಗೆ ನೇಮಿಸಿರುವ ಕೆಲಸಗಳನ್ನು ನಡೆಸಲು ನಮ್ಮನ್ನು ಜ್ಞಾನದ ಹೃದಯದಿಂದ ತುಂಬಿಸುತ್ತಾನೆ (ವಿಮೋಚನಾಕಾಂಡ 35:35).

**ದೇವರ ಜ್ಞಾನವನ್ನು ಹೊಂದಿಕೊಳ್ಳುವದರಿಂದಾಗುವ ಲಾಭಗಳೇನು?**

ಜ್ಞಾನವು ನಮ್ಮನ್ನು ಉನ್ನತಿಗೆ ತರುತ್ತದೆ, ಘನಪಡಿಸುತ್ತದೆ, ತಲೆಗೆ ಅಂದದ ಪುಷ್ಪ ಮಾಲೆಯನ್ನಿಟ್ಟು ಸುಂದರ ಕಿರೀಟವನ್ನು ನೀಡುತ್ತದೆ (ಜ್ಞಾನೋಕ್ತಿ 4:8–9).

ನಮ್ಮಲ್ಲಿ ಯಾರಿಗೆ ಜ್ಞಾನವಿದೆಯೋ ಅವರು ತಮ್ಮ ಕಷ್ಟಾರ್ಜಿತವನ್ನು ಅವರೇ ಅನುಭವಿಸುವರು. ಅವರು ಧನ್ಯರು, ಅವರಿಗೆ ಶುಭವಿರುವದು (ಕೀರ್ತನೆ 128:2).

ನನ್ನಿಂದಾಗುವ ಫಲವು ಬಂಗಾರಕ್ಕಿಂತಲೂ ಹೌದು ಅಪರಂಜಿಗಿಂತಲೂ ಉತ್ತಮ ....... ಹೀಗಿರಲು ನನ್ನನ್ನು ಪ್ರೀತಿಸುವವರಿಗೆ ಧನದ ಬಾಧ್ಯತೆಯನ್ನು ದೊರಕಿಸಿ ಅವರ ಬೊಕ್ಕಸಗಳನ್ನು ತುಂಬಿಸುವೆನು (ಜ್ಞಾನೋಕ್ತಿ 8:19–21).

ನಮ್ಮಲ್ಲಿ ದೇವರ ಜ್ಞಾನವಿದ್ದರೆ, ಅವನ ಶತ್ರುಗಳನ್ನೂ ಮಿತ್ರರನ್ನಾಗಿ ಮಾಡುವನು (ಜ್ಞಾನೋಕ್ತಿ 16:7).

ಜ್ಞಾನದ ಮೂಲಕ ಪ್ರಭುಗಳು ದೊರೆತನ ಮಾಡುವರು (ಜ್ಞಾನೋಕ್ತಿ 8:16).

ಮನೆಯನ್ನು ಕಟ್ಟುವದಕ್ಕೆ ಜ್ಞಾನವೇ ಸಾಧನ; ಅದನ್ನು ಸ್ಥಿರಪಡಿಸುವದಕ್ಕೆ ವಿವೇಕವೇ ಆಧಾರ; ಅದರ ಕೋಣೆಗಳನ್ನು ಅಮೂಲ್ಯವಾದ ಎಲ್ಲಾ ಇಷ್ಟ ಸಂಪತ್ತಿನಿಂದ ತುಂಬಿಸುವದಕ್ಕೆ ತಿಳುವಳಿಕೆಯೇ ಕಾರಣ (ಜ್ಞಾನೋಕ್ತಿ 24:3–4).

ಮತ್ತು ಜ್ಞಾನವೂ ತಿಳುವಳಿಕೆಯೂ ರಕ್ಷಣಾ ಕಾರ್ಯಸಮೃದ್ಧಿಯೂ ಇರುವದರಿಂದ ನಿನ್ನ ಕಾಲದಲ್ಲಿ ಸ್ಥೈರ್ಯವಿರುವದು.... (ಯೆಶಾಯ 33:6).

## ದೇವರ ಜ್ಞಾನ ಮತ್ತು ಬಾಬೇಲಿನ ಜ್ಞಾನ

ಇಹಲೋಕ ಜ್ಞಾನವು ದೇವರ ಮುಂದೆ ಹುಚ್ಚುತನವಾಗಿದೆ (1ಕೊರಿಂಥ 3:19).

ಮನುಷ್ಯನ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ ಮರಣಮಾರ್ಗವೇ (ಜ್ಞಾನೋಕ್ತಿ 14:12).

ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ, ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ (ಯೆಶಾಯ 55:8–9).

ಜನರು ಮತ್ತು ಪ್ರಭುಗಳ ಮೇಲೆ ಭರವಸವನ್ನಿಡುವದಕ್ಕಿಂತ ದೇವರನ್ನು ಆಶ್ರಯಿಸಿಕೊಳ್ಳುವದು ಒಳ್ಳೇದು (ಕೀರ್ತನೆ 118:8–9).

ಮನುಷ್ಯರು ನೋಡುವಂತೆ ದೇವರು ನೋಡುವದಿಲ್ಲ (1ಸಮುವೇಲ 16:7).

ನೀನು ನಿನ್ನ ವಿಷಯದಲ್ಲಿ – ನಾನು ಐಶ್ವರ್ಯವಂತನು, ಸಂಪನ್ನನು, ಒಂದರಲ್ಲಿಯೂ ಕೊರತೆಯಿಲ್ಲದವನು ಎಂದು ಹೇಳಿಕೊಳ್ಳುತ್ತೀ; ಆದರೆ ನೀನು ಕೇವಲ ದುರವಸ್ಥೆಯಲ್ಲಿ ಬಿದ್ದಿರುವಂಥವನು, ದೌರ್ಭಾಗ್ಯನು, ದರಿದ್ರನು, ಕುರುಡನು, ಬಟ್ಟೆಯಿಲ್ಲದವನು ಆಗಿರುವದನ್ನು ತಿಳಿಯದೇ ಇದ್ದೀ (ಪ್ರಕಟನೆ 3:17).

ಸೊಲೊಮೋನನು ಜ್ಞಾನವನ್ನು ಕೇಳಿಕೊಳ್ಳುವಾಗ ಅದನ್ನು ಹೊಂದಿಕೊಂಡನು, ಅದನ್ನು ಕೇಳಿಕೊಳ್ಳುವದರ ಫಲವಾಗಿ, ತನ್ನ ಸಮಯದಲ್ಲಿ ಅತ್ಯಂತ ಐಶ್ವರ್ಯವಂತನಾದ ಅರಸನಾದನು (1ಅರಸುಗಳು 3:5–14). ಅರಸನಾದ ಸೊಲೊಮೋನನು ಎಷ್ಟು ಶ್ರೀಮಂತನಾದನೆಂದರೆ ಬೆಳ್ಳಿಯು ಯೆರೂಸಲೇಮಿನ ದಾರಿಯಲ್ಲಿರುವ ಕಲ್ಲಿನಂತಾಯಿತು (1ಅರಸುಗಳು 10:27).

## "ಐಶ್ವರ್ಯವಂತ ಮನುಷ್ಯನ" ಬಳಿಗೆ ಹೋಗುವದರ ಕುರಿತು ಸತ್ಯವೇದವು ಏನು ಹೇಳುತ್ತದೆ.

ಲೋಕದ ಜ್ಞಾನವೆಂದರೆ ಪ್ರತಿಯೊಬ್ಬರು "ಐಶ್ವರ್ಯವಂತ ಮನುಷ್ಯನ"ಬಳಿಗೆ ಹೋಗಬೇಕು. ಹೇಗೂ, ಸತ್ಯವೇದದಲ್ಲಿ ದೇವರು ತನ್ನ ಜನರನ್ನು ದೇವರ ಸೇವೆಗಾಗಿ ಹಣವನ್ನು ಕೇಳಲು ಲೋಕದಲ್ಲಿ ಕಳುಹಿಸುವದರ ದಾಖಲೆಗಳಿಲ್ಲ; ಉದಾಹರಣೆಗೆ ಸೊಲೊಮೋನನು, ಲೋಕವು ಆತನ ಬಳಿಗೆ ಬಂದಿತು (1 ಅರಸುಗಳು 10:23–27). ದಕ್ಷಿಣ ದೇಶದ ರಾಣಿಯು ಸೊಲೊಮೋನನ ಜ್ಞಾನವನ್ನು ತಿಳಿದುಕೊಳ್ಳುವದಕ್ಕೆ ಲೋಕದ ಕಟ್ಟಕಡೆಯಿಂದ ಬಂದಳು  (ಲೂಕ 11:31).

**ವಿಮರ್ಶೆ**

ದೇವರು ಮೊದಲು ಜ್ಞಾನವನ್ನು ಒದಗಿಸುತ್ತಾನೆ, ನಂತರ ಜನರನ್ನು ಮತ್ತು ನಂತರ ಹಣವನ್ನು (ಸಂಪೂರ್ಣ ಸತ್ಯವೇದವನ್ನು ನೋಡಿರಿ).

**ದೇವರ ಜ್ಞಾನದಲ್ಲಿ ಮನುಷ್ಯನ ಸಿದ್ಧತೆ**

ಕೊನೆಯ ಭೋಜನದಲ್ಲಿ, ಯೇಸು ರೊಟ್ಟಿಯನ್ನು ತೆಗೆದುಕೊಂಡು ಅದನ್ನು ಆಶೀರ್ವದಿಸಿ, ಮುರಿದು ಮತ್ತು ಅದನ್ನು ತನ್ನ ಶಿಷ್ಯರಿಗೆ ಕೊಟ್ಟನು (ಮತ್ತಾಯ 16:16). ದೇವರು ಅದೇ ಪ್ರಕ್ರಿಯೆಯನ್ನು ಮನುಷ್ಯನನ್ನು ದೇವರ ಜ್ಞಾನದಲ್ಲಿ, ಜ್ಞಾನದೊಂದಿಗೆ ಸಿದ್ಧಪಡಿಸಲು ಉಪಯೋಗಿಸುತ್ತಾನೆ. ಅದರಲ್ಲಿ ಆತನು ತೆಗದುಕೊಳ್ಳುತ್ತಾನೆ, ಹೋಗಿ ಫಲವನ್ನು ಕೊಡುವವರಾಗಬೇಕೆಂದು ಆಯ್ದುಕೊಳ್ಳುತ್ತಾನೆ ಮತ್ತು ಅಭಿಷೇಕಿಸುತ್ತಾನೆ (ಯೋಹಾನ 15:16).

*ಆಶೀರ್ವದಿಸುತ್ತಾನೆ,* ಪವಿತ್ರಾತ್ಮನ ಮೂಲಕ ದರ್ಶನದೊಂದಿಗೆ (ಆದಿಕಾಂಡ 15ನೇ ಅಧ್ಯಾಯ).

*ಮುರಿಯುತ್ತಾನೆ,* ಕಷ್ಟಾನುಭವಗಳ ಮೂಲಕ ತನ್ನ ಜ್ಞಾನವನ್ನು ಬೋಧಿಸುತಾನೆ. (ಕೀರ್ತನೆ 119:71).

*ಕೊಡುತ್ತಾನೆ,* ತನ್ನ ಪಾತ್ರೆಗಳಾಗಿ ಲೋಕಕ್ಕೆ ನೀಡುತ್ತಾನೆ (ಅ.ಕೃ.1:8)

ನಮ್ಮಲ್ಲಿ ಅನೇಕರು ನಮಗೆ ದೊರೆತಿರುವ ಕರೆಯ ದರ್ಶನವನ್ನು ಹೊಂದಿದ ತಕ್ಷಣ ದೇವರ ಕಾರ್ಯವನ್ನು ಮಾಡಲು ನೇರವಾಗಿ ಧುಮುಕಲು ಬಯಸುತ್ತೇವೆ, ನಮ್ಮಲ್ಲಿರುವ ಅಸಹನೆಯಿಂದಾಗಿ ನಾವು ಕೇವಲ ಕರೆಯಲ್ಪಟ್ಟಿದ್ದೇವೆ, ಆಯಲ್ಪಟ್ಟಿಲ್ಲ ಎಂಬುದನ್ನು ತಿಳಿದುಕೊಳ್ಳುವದಿಲ್ಲ. ನಾವು ಕರೆಯಲ್ಪಟ್ಟ ಸಮಯದಿಂದ ನಾವು ಆಯಲ್ಪಡುವ ಸಮಯದ ವರೆಗೆ ಇರುವ ಅವಧಿಯು ಜ್ಞಾನದಲ್ಲಿ, ತಿಳುವಳಿಕೆಯಲ್ಲಿ ಮತ್ತು ದೇವರ ಜ್ಞಾನವನ್ನು ತಿಳಿದುಕೊಳ್ಳುವದರಲ್ಲಿ ನಮ್ಮ ಸಿದ್ಧತೆಯ ಅವಧಿಯಾಗಿದೆ. ನಾವು ಆಯಲ್ಪಡುವ ಪೂರ್ವದಲ್ಲಿ ಅಸಹನೆಯಿಂದ ವರ್ತಿಸಿದರೆ, ನಾವು ನಮ್ಮನ್ನು ಆಯಲ್ಪಡುವದಕ್ಕೆ ಅಯೋಗ್ಯರನ್ನಾಗಿ ಮಾಡಿಕೊಳ್ಳುತ್ತೇವೆ. ಆದುದರಿಂದ... ಕರೆಯಲ್ಪಟ್ಟವರು ಬಹು ಜನ, ಆಯಲ್ಪಟ್ಟವರು ಸ್ವಲ್ಪ ಜನ (ಮತ್ತಾಯ 22:14).

ದೇವರು ಇಸ್ರಾಯೇಲರನ್ನು ದೇವದರ್ಶನ ಗುಡಾರವನ್ನು ಸಿದ್ಧಪಡಿಸಲು ನಡೆಸುತ್ತಿರುವಾಗ (ವಿಮೋಚನಕಾಂಡ 35ನೇ ಅಧ್ಯಾಯ). ದೇವದರ್ಶನ ಗುಡಾರದಲ್ಲಿ ಆರಾಧನೆಯ ಸಾಧನಗಳನ್ನು ತಯಾರಿಸುವದರ ಮೇಲ್ವಿಚಾರಣೆಯನ್ನು ಮಾಡುವ ಮನುಷ್ಯನನ್ನು ಕರೆದನು. ನಂತರ ದೇವರು ... ಅವನಿಗೆ ದಿವ್ಯಾತ್ಮನನ್ನು ಕೊಟ್ಟು ಬೇಕಾದ ಜ್ಞಾನವಿದ್ಯಾವಿವೇಕಗಳನ್ನೂ ಸಕಲ ಶಿಲ್ಪಶಾಸ್ತ್ರಜ್ಞಾನವನ್ನೂ ಅನುಗ್ರಹಿಸಿದ್ದಾನೆ... ಕಸಬುದಾರರು ನಡೆಸುವ ಕೆಲಸಗಳನ್ನು ಕಲ್ಪಿಸುವದಕ್ಕೂ ಮಾಡುದಕ್ಕೂ ಯೆಹೋವನು ಅವನಿಗೆ ಜ್ಞಾನವನ್ನು ಪರಿಪೂರ್ಣವಾಗಿ ಅನುಗ್ರಹಿಸಿದ್ದಾನೆ (ವಿಮೋಚನಕಾಂಡ 35: 31, 35). ಯಾವನಾದರೂ ದೇವರ ಸೇವೆಯ ಆರಾಧನೆಯಲ್ಲಿ ಸಾಧನವಾಗಿ ಉಪಯೋಗಿಸಲ್ಪಡಲು ಬಯಸುವದಾದರೆ ಆತನು ಇಂಥಹ ಜ್ಞಾನವನ್ನು, ತಿಳುವಳಿಕೆಯನ್ನು, ವಿವೇಕವನ್ನು ಕೇವಲ ಬೇಡಿಕೊಳ್ಳುವದರ ಮೂಲಕ ಹೊಂದಿಕೊಳ್ಳಲಿ

(ಯಾಕೋಬ 1:5). ನಾವು ಜ್ಞಾನವನ್ನು ಕಲಿಯುತ್ತಿರುವ ಹಾಗೆ, ನಾವು ಆಯಲ್ಪಡುವದಕ್ಕಾಗಿ ಅರ್ಹರಾಗುತ್ತೇವೆ.

# 10. ಸಮೃದ್ಧಿ ಮತ್ತು ವಸ್ತುಗಳನ್ನು ಹೊಂದುವುದು

ನಾವು ಸಮೃದ್ಧಿಗಳಾಗಿದ್ದೇವಾ ಅಥವಾ ನಾವು ಕೇವಲ ವಸ್ತುಗಳನ್ನು ಹೊಂದಿದ್ದೇವಾ? ಈ ಎರಡರಲ್ಲಿನ ವ್ಯತ್ಯಾಸವೆಂದರೆ ಕ್ರಿಸ್ತನ ಮೂಲಕ ದೇವರೊಂದಿಗೆ ನಡೆಯುವುದಾಗಿದೆ. ನಾವು ದೇವರೊಂದಿಗೆ ನಡೆದರೆ ನಮ್ಮ ಆತ್ಮವು ಸಮೃದ್ಧಿಯಾಗುವುದು ಮತ್ತು ನಾವು ವಸ್ತುಗಳು ಇಲ್ಲದಿದ್ದಾಗ್ಯೂ ಸಮೃದ್ಧಿಯನ್ನು ಸಂತೋಷಿಸುತ್ತೇವೆ. ಆದರೆ ನಾವು ಕೇವಲ ವಸ್ತುಗಳನ್ನು ಹೊಂದಿದ್ದು ದೇವರೊಂದಿಗಿನ ನಡೆ ಇಲ್ಲದಿದ್ದರೆ ನಾವು ನಮ್ಮನ್ನು ಸಮೃದ್ಧಿಗಳೆಂದು ಕರೆಯಲು ಸಾಧ್ಯವಿಲ್ಲ.

ದೇವರು ನಾವು ಹೊಂದಿರುವ ವಸ್ತುಗಳ ಮೌಲ್ಯ ಅಥವಾ ಸಂಖ್ಯೆಯಿಂದ ದೇವರು ಯಶಸ್ಸನ್ನು ಅಳೆಯುವುದಿಲ್ಲ; ಅದಕ್ಕೆ ಬದಲಾಗಿ ದೇವರು ತನ್ನ ಮಗನಾದ ಯೇಸುಕ್ರಿಸ್ತನೊಂದಿಗಿನ ನಮ್ಮ ಸಂಬಂಧದ ಆಳದಿಂದ ನಮ್ಮ ಸಮೃದ್ಧಿಯನ್ನು ಅಳೆಯುತ್ತಾನೆ. ಕೇವಲ ವಸ್ತುಗಳನ್ನು ಹೊಂದಿ ಕ್ರಿಸ್ತನನ್ನು ಹೊಂದಿಲ್ಲದಿರುವುದು... ದುರಾವಸ್ಥೆಯಲ್ಲಿ ಬಿದ್ದಿರುವುದು, ದೌರ್ಭಾಗ್ಯ, ದರಿದ್ರತೆ, ಕುರುಡುತನ ಮತ್ತು ಬಟ್ಟೆಯಿಲ್ಲದಿರುವುದು ಆಗಿದೆ (ಪ್ರಕಟನೆ 3:17).

### ದೇವರು ಏಕ ಮಾತ್ರ ಸಮೃದ್ಧಿಯ ಅಳತೆಯಾಗಿದ್ದಾನೆ

ಮನುಷ್ಯನು ಹೊರಗಿನ ತೊರಿಕೆಯನ್ನು ನೋಡುತ್ತಾನೆ, ಆದರೆ ದೇವರು ಹೃದಯವನ್ನು ನೋಡುತ್ತಾನೆ (1 ಸಮು 16:17).

ಕ್ರಿಸ್ತನೊಂದಿಗಿನ ಆಳವಾದ ಸಂಬಂಧದ ಮೇಲೆ ದೇವರು ನಮ್ಮ ಸಮೃದ್ಧಿಯನ್ನು ಅಳೆತೆಮಾಡುವುದಾಗಿದೆ. ಆದಾಗ್ಯೂ ಭೌತಿಕ ಸಂಪತ್ತು ದೇವರೊಂದಿಗೆ ನಮ್ಮ ನಡೆಯುವುದರ ಒಂದು ಹೊರ ಬೆಳವಣಿಗೆಯಾಗಿರವುದು. ಇದೇ ಒಂದು ನಿಜವಾದ ಸಮೃದ್ಧಿ ಅಳತೆಯ ಅಂಶವೆಂದು ನಿರ್ಧರಿಸಲು ಆಗುವುದಿಲ್ಲ.

ಯೇಸು ಕ್ರಿಸ್ತನು ದೇವಾಲಯದ ತೆರಿಗೆ ಕಟ್ಟಲು ಅಥವಾ ಶಿಲುಬೆಗೆ ಹಾಕಲ್ಪಡುವ ಸಮಯದಲ್ಲಿ ತನ್ನ ಬಟ್ಟೆಗಳನ್ನು ಹಿಂದಕ್ಕೆ ಪಡೆಯಲು ಬೇಕಾದಂತಹ ಹಣವನ್ನು ಹೊಂದಿರಲಿಲ್ಲ, ಆದರೆ ಆತನು ಯಶಸ್ವಿಯಾಗಿರಲಿಲ್ಲವೆಂದು ಸೂಚಿಸಲು ಯಾರು ಧೈರ್ಯ ಮಾಡುತ್ತಾರೆ? ಆತನ ಸಮೃದ್ಧಿಯು ಆತನ ತಂದೆಯೊಂದಿಗಿನ ಆತನ ಸಂಬಂಧದಿಂದಲೇ ನಿಜವಾಗಿ ಅಳತೆಮಾಡಲ್ಪಟ್ಟಿದೆ, ಆತನ ಹಣದ ಕೊರತೆಯಿಂದಲ್ಲ.

ಇಲ್ಲಿ ಪ್ರಶ್ನೆ ಇಲ್ಲ ಆದರೆ ದೇವರ ಬಯಕೆಯೇನೆಂದರೆ... ನೀನು ಆತ್ಮಿಕ ವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಬೇಕು (3 ಯೋಹಾನ 2). ಸಮೃದ್ಧಿ ಎಂಬ ಪದ ಬ್ಯಾಬಿಲೋನಿನ ಗೂಢಾರ್ಥದ ಮೇಲೆ ತೂಗಲ್ಪಡಕೂಡದು. ನಾವು ಇದನ್ನು ಪರಿಗಣಿಸೋಣ: ಪ್ರಕಟನೆ 2:9 ರಲ್ಲಿ ಉಪಯೋಗಿಸಲ್ಪಡುವಂತೆ ಶ್ರೀಮಂತಿಕೆ ಎಂಬ ಪದದ ದೇವರ ಗೂಢಾರ್ಥವು 'ನಾನು ನಿನ್ನ ಸಂಕಟವನ್ನು ನಿನ್ನ ಬಡತನವನ್ನು ಬಲ್ಲೆನು: ಆದರೂ ನೀನು ಐಶ್ವರ್ಯವಂತನೇ' (ಪ್ರಕಟನೆ 2:9) ಎಂಬದರಲ್ಲಿದೆ. ದೇವರು ಇಲ್ಲಿ ಯಶಸ್ಸು ಮತ್ತು ಶ್ರೀಮಂತಿಕೆಯ ನಡುವಿನ ಸಮಾನತೆಯ ಕುರಿತು ಮಾತಾಡುತ್ತಿಲ್ಲ. ನಿಜವಾಗಿ ಆತನು ತನ್ನ ಕಡೆಗಿರುವ ನಮ್ಮ ಹೃದಯದ ಸ್ಥಿತಿಯ ಕುರಿತು ಮಾತ್ರ ಮಾತಾಡುತ್ತಾನೆ.

ಮನುಷ್ಯನು ಹೊರಗಿನ ತೋರಿಕೆಯನ್ನು ನೋಡುತ್ತಾನೆ, ಆದರೆ ದೇವರು ಹೃದಯವನ್ನು ನೋಡುತ್ತಾನೆ (1 ಸಮು 16:7).

ದೇವರು ಶ್ರೀಮಂತರನ್ನೂ ಪ್ರೀತಿಸುತ್ತಾನೆ. ನಿಜಾಂಶವೆಂದರೆ, ನಾವು ಆಲೋಚಿಸುವ ಅಥವಾ ಕೇಳಿಕೊಳ್ಳುವುದಕ್ಕಿಂತ ಹೇರಳವಾದ ಸಂಗತಿಗಳನ್ನು ನಮಗೆ ಪೂರೈಸಲು ಆತನು ಬಯಸುತ್ತಾನೆ. ಆದಾಗ್ಯೂ ಆತನು ನಮ್ಮ ಯಶಸ್ಸನ್ನು ನಮ್ಮ ಶ್ರೀಮಂತಿಕೆ, ವಸ್ತುಗಳು ಅಥವಾ ಸಮೃದ್ಧಿಗಳಿಂದ ಅಳೆಯುವುದಿಲ್ಲ. ಆದರೆ ನಿಜವಾಗಿ ಆತನೊಂದಿಗಿನ ನಮ್ಮ ನಡೆಯಿಂದ ಅಳೆಯುತ್ತಾನೆ.

## ಮೊದಲು ಅಭಿವೃದ್ಧಿಯ ಮೇಲೆ ಪಾಪದ ಪ್ರಭಾವ

"ನನ್ನ ಜನರು ಎರಡು ಅಪರಾಧಗಳನ್ನು ಮಾಡಿದ್ದಾರೆ; ಜೀವಜಲದ ಬುಗ್ಗೆಯಾದ ನನ್ನನ್ನು ಬಿಟ್ಟಿದ್ದಾರೆ, ತಮಗೋಸ್ಕರ ನೀರು ಇಲ್ಲದ ಬಿರಿದ ತೊಟ್ಟಿಗಳನ್ನು ಮಾಡಿಕೊಂಡಿದ್ದಾರೆ" (ಯೆರೆ 2:13).

ಸಮೃದ್ಧಿಯಾಗಲು ಆಕಾಂಕ್ಷೆ ಪಡುವುದರಲ್ಲಿ ಯಾವುದೇ ಕೆಟ್ಟತನವಿಲ್ಲ. ನಮ್ಮ ಸಮೃದ್ಧಿಯಲ್ಲಿ ಇರುವ ದುಷ್ಟತನ ಏನೆಂದರೆ, ತೊಟ್ಟಿಯೊಳಗಿಂದ ಮೊದಲು ಕುಡಿಯಲು ನಾವು ನೀರನ್ನು ಸೇದಿಕೊಳ್ಳುವುದು. ಸಮೃದ್ಧಿಯ ತೊಟ್ಟಿಯೊಳಗಿಂದ ಮೊದಲು ನೀರನ್ನು ಸೇದುಕೊಳ್ಳುವುದೆಂದರೆ, ಒಡೆದು ಹೋಗಿರುವ ತೊಟ್ಟಿಯ ನೀರನ್ನು ಹಿಡಿದುಕೊಳ್ಳದೆ ಇರುವ ರೀತಿಯಲ್ಲಿರುತ್ತದೆ. ನಾವು ಯಾವಾಗಲೂ ಕುಡಿಯಲು ಮೊದಲು ನೀರನ್ನು ಸೇದುವಾಗ ಜೀವಕರವಾದ ಬುಗ್ಗೆಯಾಗಿರುವ ಯೇಸುಕ್ರಿಸ್ತನಿಂದ ಸೇದಬೇಕು. ಸಮೃದ್ಧಿಯ ಸಿದ್ಧಾಂತವು ಉಳಿದ ಎಲ್ಲಾ ಸಿದ್ಧಾಂತಗಳಿಗಿಂತ ಯಾವಾಗಲೂ ಕ್ರಿಸ್ತನ ವ್ಯಕ್ತಿತ್ವದ ದೃಷ್ಟಿಕೋನದ ಹಿಂದೆ ಇಡಲ್ಪಡಬೇಕು.

ಹೇಗಿದ್ದರೂ, ನಾವು ಶರೀರ ಸಂಬಂಧದವರಾಗಿರುವುದರಿಂದ ಶರೀರವು ಸಮೃದ್ಧಿಯ ಕಡೆಗೆ ನಮ್ಮನ್ನು ಆಕರ್ಷಿಸುತ್ತದೆ. ಅನೇಕಾವರ್ತಿ ಸತ್ಯವೇದಕ್ಕೆ ಅನುಸಾರವಾಗಿರುವ ಸಮೃದ್ಧಿಯ ಬೋಧನೆಯನ್ನು ಸಂಪೂರ್ಣವಾಗಿ ತಪ್ಪಾಗಿ ಅರ್ಥೈಸಿಕೊಳ್ಳಲಾಗುತ್ತದೆ. ಆದದರಿಂದ ಸಮೃದ್ಧಿಯ ಬಗ್ಗೆ ಸಂದೇಶವನ್ನು ಕೊಡುವ ಎಲ್ಲಾ ಬೋಧಕರ ಕರ್ತವ್ಯವು 'ಕ್ರಿಸ್ತನನ್ನು ಮೊದಲು ಹುಡುಕುವುದು' ಸಂದೇಶದ ಹಿಂದೆ ಇರಬೇಕಾಗಿರುವ ಸಂದರ್ಭವೇ ಹೊರತು, 'ನೀನು ಸಮೃದ್ಧಿ ಹೊಂದದೆ ಇರುವುದು ನಿನ್ನ ನಂಬಿಕೆಯಲ್ಲಿ ಏನೋ ತಪ್ಪು ಉಂಟು ಸಹೋದರ' ಎಂದು ಹೇಳುವುದರಲ್ಲಿ ಅಲ್ಲ. ಎರಡನೆಯ ವಿಧವಾದ ಸಂದೇಶ ಒಡೆದು ಹೋಗಿರುವ ತೊಟ್ಟಿ ನೀರನ್ನು ಹಿಡಿದುಕೊಳ್ಳದೆ ಇರುವ ರೀತಿಯಲ್ಲಿ ಇರುತ್ತದೆ.

ಕ್ರೈಸ್ತರಾದ ನಾವು ಮಧ್ಯಸ್ಥಿಕೆ ಮಾಡುವವರೇ ನಿಜವಾದ ವೀರರು ಎಂದು ಸ್ವಭಾವಸಿದ್ಧವಾಗಿ ಒಪ್ಪಿಕೊಳ್ಳುತ್ತೇವೆ ಮತ್ತು ಅದೇ ಸಮಯದಲ್ಲಿ ನಮ್ಮ ಜೀವನದಲ್ಲಿ ಹೇಗೆ ಸಮೃದ್ಧಿಯನ್ನು ತರಬೇಕೆಂದು ವಾಕ್ಯ ಕಲಿಯುವುದರಲ್ಲಿ ಹೆಚ್ಚು ಸಮಯವನ್ನು ಹಾಗೂ ಶ್ರಮವನ್ನು ಪಡುವುದರಲ್ಲಿ ದೃಷ್ಟಿಕೋನ ಹರಿಸುತ್ತೇವೆ. ಹಾಗಾಗಿ ನಾವು ನಮ್ಮ ದೃಷ್ಟಿಕೋನವನ್ನು ಕ್ರಿಸ್ತನ ಸೇವಕರಾಗುವುದಕ್ಕೆ ಕಲಿಯಬೇಕು. ಈ ದೃಷ್ಟಿಕೋನದ ಫಲವಾಗಿ ಆತನು ಬಯಸುವ ಸಮೃದ್ಧಿಯನ್ನು ನಮ್ಮ ಜೀವಿತಗಳಲ್ಲಿ ಬರಲು ಆತನಿಗೆ ತೆರೆದುಕೊಡಬೇಕು (ಮತ್ತಾಯ 6:33).

***Bibliography***


1. **Disciples are made, not born!**

   By Walter A. Henrichsen

2. **Decisions by the Book**

   By John F. Deal

3. **Awesome God**

   By John R. Higgins